ಸಂಸಾರವನ್ನು ವೃದ್ಧಿಸುವಂಥ, ಹಿಂಸೆಯನ್ನು ಪುಷ್ಟ ಮಾಡುವಂಥ, ಮಿಥ್ಯಾ ಧರ್ಮದ ಪ್ರರೂಪಣೆ ಮಾಡುವಂಥ, ಯುದ್ಧಶಾಸ್ತ್ರ ಶೃಂಗಾರಶಾಸ್ತ್ರ ಮಾಯಾಚಾರದ ಶಾಸ್ತ್ರ ವೈದ್ಯಕೀಯ ಶಾಸ್ತ್ರ ರಸ-ರಸಾಯನ, ಮಂತ್ರ-ತಂತ್ರ, ಮಾರಣ-ವಶೀಕರಣ ಶಾಸ್ತ್ರಗಳು ಮಹಾಪಾಪದ ಪ್ರರೂಪಕವಿವೆ, ಅವನ್ನು ದೂರದಿಂದಲೇ ತ್ಯಾಗ ಮಾಡಿ ಬಿಡಬೇಕಾಗುವುದು.

**ರೋಗದ ನಾಶ ಮಾಡುವಂಥ ಪ್ರಾಸುಕ ಔಷಧದ ದಾನ ಮಾಡಬೇಕು. ಔಷಧ ದಾನವು ಅತ್ಯಂತ ಉಪಕಾರಕವಿದೆ.** ರೋಗಿಗಳಿಗೆ ಕೂಡಲೆ ಔಷಧವು ದೊರಕಿದರೆ ಅವರಿಗೆ ಮಹದಾನಂದವಿದೆ. ಸೇವೆ ಮಾಡಲು ಯಾರೂ ಇಲ್ಲದ ನಿರ್ಧನನಿಗೆ ಒಂದು ವೇಳೆ ಸಿದ್ಧ ಮಾಡಿದ ಔಷಧವು ದೊರೆತರೆ ಅವನು ತನಗೆ ನಿಧಿಯ ಲಾಭವಾದಂತೆ ಮನ್ನಿಸುತ್ತಾನೆ. ಔಷಧ ಸ್ವೀಕರಿಸಿ ಆರೋಗ್ಯವಂತನಾಗಿ ಹೋಗುತ್ತಾನೆ ಅವನು ಸಮಸ್ತ ವ್ರತ-ತಪ-ಸಂಯಮಗಳನ್ನು ಪಾಲಿಸುತ್ತಾನೆ, ಜ್ಞಾನದ ಅಭ್ಯಾಸ ಮಾಡುತ್ತಾನೆ, ಔಷಧ ದಾನದ ಮೂಲಕ ವಾತ್ಸಲ್ಯ, ಸ್ಥಿತಿಕರಣ, ನಿರ್ವಿಚಿಕಿತ್ಸೆ ಇತ್ಯಾದಿ ಅನೇಕ ಗುಣಗಳು ಪುಷ್ಟವಾಗಿ ಪ್ರಕಟವಾಗುತ್ತವೆ. ಔಷಧ ದಾನದ ಪ್ರಭಾವದಿಂದ ರೋಗರಹಿತ ದೇವಗಳ ವೈಕ್ರಿಯಿಕ ದೇಹದ ಪ್ರಾಪ್ತಿಯಾಗುತ್ತದೆ.

**ಸಮಸ್ತ ದಾನಗಳಲ್ಲಿ ಆಹಾರದಾನವು ಮುಖ್ಯವಿದೆ.** ಪ್ರಾಣಿಯ ಜೀವನ, ಶಕ್ತಿ, ಬಲ, ಬುದ್ಧಿ ಇತ್ಯಾದಿ ಗುಣಗಳೆಲ್ಲವು ಆಹಾರವಿಲ್ಲದೆ ನಷ್ಟವಾಗಿ ಹೋಗುತ್ತವೆ. ಯಾವನು ಆಹಾರದಾನ ಕೊಡುತ್ತಾನೆ ಅವನು ಪ್ರಾಣಿಗಳಿಗೆ ಜೀವನ, ಶಕ್ತಿ, ಬಲ, ಬುದ್ಧಿಗಳೆಲ್ಲವನ್ನು ಕೊಡುವನು. ಆಹಾರದಿಂದಲೇ ಮುನಿ ಹಾಗೂ ಶ್ರಾವಕನ ಧರ್ಮಗಳೆಲ್ಲವು ನಡೆಯುತ್ತವೆ. ಆಹಾರವಿಲ್ಲದೆ ಅವರು ಮಾರ್ಗಭ್ರಷ್ಟರಾಗುವರು. ಆಹಾರವೇ ಸಮಸ್ತ ರೋಗಗಳನ್ನು ನಾಶ ಮಾಡುವಂಥದ್ದಿದೆ. ಆಹಾರದಾನ ಕೊಡುವಂಥ ಮಿಥ್ಯಾದೃಷ್ಟಿಯೂ ಭೋಗಭೂಮಿಯಲ್ಲಿ ಕಲ್ಪವೃಕ್ಷಗಳಿಂದ ಪ್ರದತ್ತ ಹತ್ತು ಪ್ರಕಾರದ ಭೋಗಗಳನ್ನು ಅಸಂಖ್ಯಾತ ಕಾಲದವರೆಗೆ ಭೋಗಿಸುತ್ತಾನೆ, ಕ್ಷುಧೆ-ತೃಷೆಗಳ ಬಾಧೆಯಿಂದ ರಹಿತನಾಗಿ ಮೂರು ದಿನಕ್ಕೊಮ್ಮೆ ನೆಲ್ಲೀಕಾಯಿಯಷ್ಟು ಭೋಜನ ಮಾಡುತ್ತಾನೆ. ಎಲ್ಲ ಪ್ರಕಾರದ ದುಃಖ, ಕ್ಲೇಶಗಳಿಂದ ರಹಿತನಾಗಿ ಅಸಂಖ್ಯಾತ ವರ್ಷಗಳವರೆಗೆ ಸುಖ ಭೋಗಿಸಿ ದೇವಲೋಕದಲ್ಲಿ ಹೋಗಿ ಉತ್ಪನ್ನನಾಗುತ್ತಾನೆ. ಆದುದರಿಂದ ಧನ ಪಡೆದ ನಂತರ ನಾಲ್ಕು ಪ್ರಕಾರದ ದಾನದಲ್ಲಿ ಪ್ರವರ್ತನೆ ಮಾಡಬೇಕು. ನಿರ್ಧನರಿದ್ದವರು ಕೂಡ ತಮ್ಮ ಭೋಜನದೊಳಗಿಂದ ಎಷ್ಟು ಸಾಧ್ಯವಿದೆ ಅಷ್ಟು ದಾನ ಮಾಡಬೇಕು. ತಮಗೆ ಅರ್ಧಭೋಜನ ದೊರಕಿದರೂ ಅದರೊಳಗಿಂದ ಕೂಡ ಒಂದೆರಡು ತುತ್ತನ್ನು ಹಸಿದ ದುಃಖೀ ದೀನ ದರಿದ್ರರಿಗೆ ಕೊಡಬೇಕು.

**ಸಿಹಿ ನುಡಿಗಳನ್ನಾಡುವುದೂ ದೊಡ್ಡ ದಾನವಿದೆ.** ಆದರ, ಸತ್ಕಾರ, ವಿನಯ ಮಾಡುವದು, ಸ್ಥಾನ ಕೊಡುವುದು, ಕ್ಷೇಮ ವಿಚಾರಿಸುವುದೆಲ್ಲವು ಮಹಾದಾನವಿದೆ. ದುಷ್ಟ ವಿಕಲ್ಪಗಳ ತ್ಯಾಗ ಮಾಡಬೇಕು, ಪಾಪದಲ್ಲಿ ಪ್ರವೃತ್ತರಾಗಬಾರದು, ನಾಲ್ಕು ಕಷಾಯಗಳ ತ್ಯಾಗ ಮಾಡುವುದು, ವಿಕಥೆ ಮಾಡುವುದನ್ನು ನಿಲ್ಲಿಸಬೇಕು, ಇತರರ ಸತ್ಯ ಹಾಗೂ ಅಸತ್ಯ ದೋಷಗಳನ್ನೆಂದೂ ಹೇಳಬಾರದು. ಅನ್ಯಾಯದ ಧನ ಗ್ರಹಣ ಮಾಡುವುದನ್ನು ದೂರದಿಂದಲೇ ತ್ಯಜಿಸಬೇಕು.

**ಎಲೈ ಜ್ಞಾನಿ ಜನರೇ !** ತಮ್ಮ ಹಿತ ಬಯಸುತ್ತಿದ್ದರೆ ದುಃಖೀ ಜೀವರುಗಳಿಗೆ ದಾನ ಕೊಡಿರಿ, ಮತ್ತು ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮೊದಲಾದ ಗುಣಗಳ ಧಾರಕರಿಗೆ ಅತ್ಯಂತ ವಿನಯದಿಂದ ಸನ್ಮಾನ ಮಾಡಿರಿ. ಸಮಸ್ತ ಜೀವಗಳಕುರಿತು ಕರುಣೆ ಮಾಡಿರಿ. ಮಿಥ್ಯಾದರ್ಶನದ ತ್ಯಾಗ ಮಾಡಿರಿ. ರಾಗ-ದ್ವೇಷ-ಮೋಹ ಧಾರಕ ಕುದೇವ, ಆರಂಭ ಪರಿಗ್ರಹಧಾರಕ ವೇಷಧಾರೀ, ಕುಗುರು, ಹಿಂಸೆಯ ಪೋಷಕ ರಾಗ-ದ್ವೇಷಗಳನ್ನು ಪುಷ್ಟೀಕರಿಸುವಂಥ ಮಿಥ್ಯಾದೃಷ್ಟಿಗಳ ಶಾಸ್ತ್ರ-ಇವುಗಳ ವಂದನೆ, ಸ್ತುತಿ, ಪ್ರಶಂಸೆ ಮಾಡುವುದರ ತ್ಯಾಗ ಮಾಡಿರಿ. ಕ್ರೋಧ, ಮಾನ, ಮಾಯೆ, ಲೋಭಗಳ ನಿಗ್ರಹ ಮಾಡುವಲ್ಲಿ ತುಂಬ ಪ್ರಯತ್ನ ಮಾಡಿರಿ. ಕ್ಲೇಶದಾಯಕವಾದ ಅಪ್ರಿಯ ವಚನ, ಬೈಗುಳ ವಚನ, ಅವಮಾನದ ವಚನ, ಗರ್ವಯುಕ್ತ ವಚನಗಳನ್ನೆಂದೂ ಆಡಬೇಡಿರಿ. ಈ ಪ್ರಕಾರ ಇತರರಿಗೆ ದುಃಖದ ಕಾರಣ, ತಮ್ಮ ಯಶಸ್ಸನ್ನು ನಷ್ಟಮಾಡುವಂಥ ಪ್ರವರ್ತನೆಯನ್ನು ಮನ-ವಚನ-ಕಾಯದಿಂದ ತ್ಯಾಗಮಾಡಿರಿ. ಈ ಪ್ರಕಾರ ಸಂಕ್ಷೇಪದಲ್ಲಿ ತ್ಯಾಗ ಧರ್ಮದ ವರ್ಣನೆ ಮಾಡಲಾಯಿತು.

## ಉತ್ತಮ ಆಕಿಂಚನ್ಯ ಧರ್ಮ

ಈಗ ಉತ್ತಮ ಆಕಿಂಚನ್ಯ ಧರ್ಮದ ಸ್ವರೂಪದ ವರ್ಣನೆ ಮಾಡುತ್ತಾರೆ. ತನ್ನ **ಜ್ಞಾನ-ದರ್ಶನಮಯ ಸ್ವರೂಪದ ಹೊರತಾಗಿ ಅನ್ಯ ಕಿಂಚಿತ್ ಮಾತ್ರವೂ ನನ್ನದಿಲ್ಲ, ನಾನು ಬೇರೆ ಯಾವುದೇ ದ್ರವ್ಯದವನಿಲ್ಲವೆಂಬ ಅನುಭವವನ್ನು**

**ಆಕಿಂಚನ್ಯ ಧರ್ಮವೆಂದು ಹೇಳುತ್ತಾರೆ,** ಎಲೈ ಆತ್ಮನೇ ! ನಿನ್ನ ಆತ್ಮನನ್ನು ದೇಹದಿಂದ ಭಿನ್ನ, ಜ್ಞಾನಮಯ, ಅನುಪಮ, ಸ್ಪರ್ಶ, ರಸ, ಗಂಧ, ವರ್ಣರಹಿತ, ತನ್ನ ಸ್ವಾಧೀನ ಜ್ಞಾನಾನಂದ ಸುಖದಿಂದ ಪರಿಪೂರ್ಣ, ಪರಮ ಅತೀಂದ್ರಿಯ, ಭಯ ರಹಿತನೆಂದು ಅನುಭವ ಮಾಡುವುದು.

ಈ ದೇಹವಿದೆ ಅದು ನಾನಿಲ್ಲ, ದೇಹವಂತೂ ರಕ್ತ, ಮಾಂಸ, ಮೂಳೆ, ಚರ್ಮಮಯ, ಜಡ, ಅಚೇತನವಿದೆ. **ನಾನು ಈ ದೇಹದಿಂದ** ಅತ್ಯಂತ ಭಿನ್ನನಿದ್ದೇನೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮೊದಲಾದ ಜಾತಿ-ಕುಲಗಳು ದೇಹದ್ದಿವೆ, ಇವು ನನ್ನವುಗಳಲ್ಲ. ಸ್ತ್ರೀ-ಪುರುಷ-ನಪುಂಸಕಲಿಂಗಗಳು ದೇಹದ್ದಿವೆ, ನನ್ನವುಗಳಲ್ಲ. ಈ ಬಿಳಿತನ, ಕಪ್ಪುತನ, ದೊರೆತನ, ದರಿದ್ರತನ, ಸ್ವಾಮೀತನ, ಸೇವಕತನ, ಪಂಡಿತತನ, ಮೂರ್ಖತನ ಇತ್ಯಾದಿ ಸಮಸ್ತ ರಚನೆಯು ಕರ್ಮದ ಉದಯ ಜನಿತ ದೇಹದ್ದಿದೆ, **ನಾನಂತೂ ಜ್ಞಾಯಕನಿದ್ದೇನೆ. ಈ ದೇಹದ ಸಂಬಂಧವು ಅದು ನನ್ನ ಸ್ವರೂಪವಲ್ಲ.** ನನ್ನ ಸ್ವರೂಪವಂತೂ ಅನ್ಯ ದ್ರವ್ಯಗಳಿಂದ ಉಪಮಾತೀತವಾಗಿ ಅನುಪಮವಿದೆ.

ಶೀತ, ಉಷ್ಣ, ಮೃದು, ಕಠೋರ, ಸ್ನಿಗ್ಧ, ರೂಕ್ಷ, ಹಗುರು, ಭಾರವೆಂದು ಇವು ಎಂಟು ಪ್ರಕಾರದ ಸ್ಪರ್ಶಗಳಿದ್ದು ಅದು ನನ್ನ ರೂಪವಲ್ಲ, ಅದು ಪುದ್ಗಲದ ರೂಪವಿದೆ. ಈ ಸಿಹಿ, ಕಹಿ, ಹುಳಿ, ಉಪ್ಪು, ಒಗರು ಮೊದಲಾಗಿ ಐದು ಪ್ರಕಾರದ ರಸಗಳು, ಸುಗಂಧ-ದುರ್ಗಂಧವೆಂದು ಎರಡು ಪ್ರಕಾರದ ಗಂಧಗಳು ಮತ್ತು ಕಪ್ಪು, ಹಸಿರು, ಹಳದಿ, ಕೆಂಪು, ಬಿಳಿದು-ಎಂದು ಐದು ಪ್ರಕಾರದ ವರ್ಣಗಳು ನನ್ನ ಸ್ವರೂಪವಲ್ಲ, ಅದು ಪುದ್ಗಲದ ಸ್ವರೂಪವಿದೆ.

**ನನ್ನ ಸ್ವರೂಪವಂತೂ ಸುಖದಿಂದ ಪರಿಪೂರ್ಣವಿದೆ,** ಆದರೆ ಇಲ್ಲಿಕರ್ಮದ ಅಧೀನವಾದ ದುಃಖಗಳಿಂದ ವ್ಯಾಪ್ತನಾಗುತ್ತಿದ್ದೇನೆ. ನನ್ನ ಸ್ವರೂಪವು ಇಂದ್ರಿಯ ರಹಿತ ಅತೀಂದ್ರಿಯವಿದೆ. ಇಂದ್ರಿಯಗಳು ಪುದ್ಗಲಮಯ ಕರ್ಮದಿಂದ ಮಾಡಲ್ಪಟ್ಟಿವೆ. ನಾನು ಸಮಸ್ತ ಭಯರಹಿತ, ಅವಿನಾಶೀ, ಅಖಂಡ ಮೊದಲಾದ ಕೊನೆಯಿಲ್ಲದ, ಶುದ್ಧ ಜ್ಞಾನಸ್ವಭಾವನಿದ್ದೇನೆ, ಆದರೆ ಅನಾದಿಕಾಲದಿಂದ ಹೇಗೆ ಚಿನ್ನ ಮತ್ತು ಮಣ್ಣು ಬೆರೆತು ಹೋಗಿವೆ. ಹಾಗೆ ಕ್ಷೀರ-ನೀರದ ತೆರ ಅನಾದಿ ಕಾಲದಿಂದ ಕರ್ಮಗಳಿಂದ ಒಂದಾಗಿ ಬರುತ್ತಲಿದ್ದೇನೆ. **ಮಿಥ್ಯಾತ್ವನಾಮದ ಕರ್ಮದ ಉದಯದಿಂದ ತನ್ನ ಸ್ವರೂಪದ ಜ್ಞಾನದಿಂದ ರಹಿತನಾಗಿ ದೇಹ ಮೊದಲಾದ ಪರದ್ರವ್ಯಗಳನ್ನು ತನ್ನ ಸ್ವರೂಪವೆಂದು ತಿಳಿದುಕೊಂಡು ನಾನು ಅನಂತ ಕಾಲದಿಂದಪರಿಭ್ರಮಣ ಮಾಡಿದ್ದೇನೆ. ಈಗ ಯಾವುದೇ ಆವರಣ ಮೊದಲಾದವು ಒಂದಿಷ್ಟು ದೂರವಾಗುವುದರಿಂದ ಶ್ರೀ ಗುರುಗಳ ಮೂಲಕ ಉಪದೇಶಿಸಲ್ಪಟ್ಟ ಪರಮಾಗಮದ ಪ್ರಸಾದದಿಂದ ನನ್ನ ಹಾಗೂ ಪರದ ಸ್ವರೂಪದ ಜ್ಞಾನವಾಗಿದೆ.**

ಯಾವ ಪ್ರಕಾರ ವ್ಯಾಪಾರಿಯು ಪಂಚವರ್ಣದ ರತ್ನಗಳಿಂದ ಕಟ್ಟಿದ ಆಭರಣದಲ್ಲಿ ಗುರುಗಳ ಕೃಪೆಯಿಂದ ಮತ್ತು ನಿರಂತರ ಅಭ್ಯಾಸದಿಂದ ದೊರಕಿದ ಟಂಕದವರ್ಣವನ್ನು ಮತ್ತು ರತ್ನದ ವರ್ಣವನ್ನು, ತೂಕವನ್ನು ಹಾಗೂ ಬೆಲೆಯನ್ನು ಬೇರೆ-ಬೇರೆಯಾಗಿ ತಿಳಿದುಕೊಳ್ಳುತ್ತಾನೆ; ಅದೇ ಪ್ರಕಾರ ನಿರಂತರ ಪರಮಾಗಮದ ಅಭ್ಯಾಸದಿಂದ ನನ್ನ ಜ್ಞಾನಸ್ವಭಾವದಲ್ಲಿ ಬೆರೆತ ರಾಗ, ದ್ವೇಷ, ಮೋಹ, ಕಾಮ ಮೊದಲಾದ ಮಲವನ್ನು ಭಿನ್ನವಾಗಿ ತಿಳಿದಿದ್ದೇನೆ; ಮತ್ತು ನನ್ನ ಜ್ಞಾಯಕ ಸ್ವಭಾವವನ್ನು ಭಿನ್ನವಾಗಿ ತಿಳಿದಿದ್ದೇನೆ. ಆದುದರಿಂದ ಈಗ ಯಾವ ಪ್ರಕಾರದಿಂದಲೂ ರಾಗ-ದ್ವೇಷ-ಮೋಹ ಮೊದಲಾದ ಭಾವ ಕರ್ಮಗಳಲ್ಲಿ ಹಾಗೂ ಕರ್ಮಗಳ ಉದಯದಿಂದ ಉತ್ಪನ್ನವಾದ ನಶ್ವರ ಶರೀರ, ಪರಿವಾರ, ಧನ, ಸಂಪತ್ತು ಮೊದಲಾದ ಪರಿಗ್ರಹದಲ್ಲಿ ನನಗೆ ಮಮತ್ವ ಬುದ್ಧಿಯು ಪುನಃ ಅನ್ಯ ಜನ್ಮದಲ್ಲಿ ಕೂಡ ಉತ್ಪನ್ನವಾಗದಿರಲೆಂಬ ರೀತಿಯಿಂದ ಆಕಿಂಚನ್ಯ ಭಾವನೆಯನ್ನು ಭಾವಿಸುತ್ತೇನೆ.

ಈ ಆಕಿಂಚನ್ಯ ಭಾವನೆಯು ಅನಾದಿಕಾಲದಿಂದ ನನಗೆ ಉತ್ಪನ್ನವಾಗಿಲ್ಲ. ಸಮಸ್ತ ಪರ್ಯಾಯಗಳನ್ನು ನನ್ನ ರೂಪವೆಂದು ಮನ್ನಿಸುತ್ತಿದ್ದೆನು, ಮತ್ತು ರಾಗ-ದ್ವೇಷ-ಮೋಹ-ಕಾಮ-ಕ್ರೋಧ ಮೊದಲಾದ ಭಾವಗಳು ಕರ್ಮಕೃತ ವಿಕಾರವಿದ್ದು ಅವನ್ನು ನನ್ನ ರೂಪವೆಂದು ಅನುಭವ ಮಾಡಿ ವಿಪರೀತ ಭಾವ ಮಾಡುತ್ತ ಅವುಗಳಿಂದ ಘೋರ ಕರ್ಮವನ್ನೂ ಕಟ್ಟಿಕೊಂಡೆನು. ಈಗ ನಾನು ಆಕಿಂಚನ್ಯ ಭಾವನೆಯಲ್ಲಿ ವಿಘ್ನಗಳ ನಾಶ ಮಾಡುವಂಥ ಪಂಚ ಪರಮಗುರುಗಳ ಆಶ್ರಯದಿಂದ ನಿರ್ವಿಘ್ನ ಆಕಿಂಚನತೆಯನ್ನೇ ಬಯಸುತ್ತೇನೆ, ಮೂರು ಲೋಕದಲ್ಲಿ ಯಾವ ಅನ್ಯ ವಸ್ತುವನ್ನು ಬಯಸುವುದಿಲ್ಲ. ಈ

ಆಕಿಂಚನತೆಯೇ ಸಂಸಾರ ಸಮುದ್ರದಿಂದ ದಡತಲುಪಿಸುವ ಜಹಜಾಗಿ ಹೋಗುವುದು. ಪರಿಗ್ರಹವನ್ನು ಮಹಾ ದುಃಖರೂಪಿ ಹಾಗೂ ಬಂಧದ ಕಾರಣವೆಂದು ತಿಳಿದುಕೊಂಡು ಬಿಟ್ಟುಕೊಡುವುದು ಅದು ಆಕಿಂಚನ್ಯ ಧರ್ಮವಿದೆ.

ಆಕಿಂಚನತೆಯಿರುವವರಿಗೆ ಪರಿಗ್ರಹದಲ್ಲಿ ಇಚ್ಛೆಯುಳಿಯುವುದಿಲ್ಲ, ಅವರಿಗೆ ಆತ್ಮಧ್ಯಾನದಲ್ಲಿ ಲೀನತೆಯಾಗುತ್ತದೆ. ದೇಹಾದಿಗಳಲ್ಲಿ ಹಾಗೂ ಬಾಹ್ಯ ವೇಷದಲ್ಲಿ ತಮ್ಮತನ ಉಳಿಯುವುದಿಲ್ಲ, ಮತ್ತು ತಮ್ಮ ಸ್ವರೂಪವಾದ ರತ್ನತ್ರಯದಲ್ಲಿಯೇ ಪ್ರವೃತ್ತಿಯಾಗುತ್ತದೆ. ಇಂದ್ರಿಯ ವಿಷಯಗಳಲ್ಲಿ ಧಾವಿಸುತ್ತಿರುವ ಮನಸ್ಸು ನಿಂತು ಬಿಡುತ್ತದೆ, ದೇಹದ ಸ್ನೇಹವು ಹೊರಟು ಹೋಗುತ್ತದೆ. ಸಾಂಸಾರಿಕ ದೇವಗಳ ಸುಖ, ಇಂದ್ರ-ಅಹಮಿಂದ್ರ-ಚಕ್ರವರ್ತಿಯ ಸುಖಗಳೂ ದುಃಖರೂಪವಾಗಿ ತೋರುತ್ತವೆ; ಅವುಗಳ ಇಚ್ಛೆ ಹೇಗೆ ಮಾಡುವರು ? ಯಾವ ಪ್ರಕಾರ ಮಮತ್ವರಹಿತರಾಗಿ ಜೀರ್ಣ ತೃಣವನ್ನು ಬಿಟ್ಟು ಕೊಡುವಲ್ಲಿ ವಿಚಾರ ಮಾಡಬೇಕಾಗುವುದಿಲ್ಲ, ಅದೇ ಪ್ರಕಾರ ಪರಿಗ್ರಹ, ಚಿನ್ನ, ರತ್ನ, ರಾಜ್ಯ, ಐಶ್ವರ್ಯ, ಸ್ತ್ರೀ-ಪುತ್ರಾದಿಕರನ್ನು ಬಿಟ್ಟು ಬಿಡುತ್ತಾರೆ. ಆಕಿಂಚನ್ಯವಂತೂ ಪರಮ ವೀತರಾಗತೆಯಿದೆ. ಯಾರಿಗೆ ಸಂಸಾರದ ದಡವು ಹತ್ತಿರ ಬಂದಿದೆ. ಅವರಿಗೇನೇ ಈ ಆಕಿಂಚನ್ಯ ಧರ್ಮವಾಗುತ್ತದೆ.

**ಯಾರಿಗೆ ಆಕಿಂಚನತೆಯಾಗುತ್ತದೆ ಅವರಿಗೆ ಪರಮಾರ್ಥವಾದ ಆ ಶುದ್ಧ ಆತ್ಮನ ವಿಚಾರಮಾಡುವ ಶಕ್ತಿಯು ಪ್ರಕಟವಾಗುತ್ತದೆ.** ಪಂಚ ಪರಮೇಷ್ಠಿಗಳಲ್ಲಿ ಭಕ್ತಿಯಾಗುತ್ತದೆ, ದುಷ್ಟವಿಕಲ್ಪಗಳ ನಾಶವಾಗುತ್ತದೆ, ಇಷ್ಟ-ಅನಿಷ್ಟ ಭೋಜನದಲ್ಲಿ ರಾಗ-ದ್ವೇಷಗಳು ನಷ್ಟವಾಗಿ ಹೋಗುತ್ತವೆ,ಕೇವಲ ಉದರರೂಪದ ಹೊಂಡವನ್ನು ತುಂಬುವುದಿರುತ್ತದೆ, ಇತರ ಸರಸ-ನೀರಸ ಭೋಜನದ ವಿಚಾರವು ಹೊರಟು ಹೋಗುತ್ತದೆ.

ಸಮಸ್ತ ಧರ್ಮಗಳಲ್ಲಿ ಮುಖ್ಯವಾದ ಆಕಿಂಚನ್ಯವೇ ಮೋಕ್ಷದ ನಿಕಟ ಸಮಾಗಮ ಮಾಡಿಸುವಂಥದ್ದಿದೆ. ಅನಾದಿ ಕಾಲದಿಂದ ಎಷ್ಟು ಸಿದ್ಧರಾಗಿದ್ದಾರೆ. ಅವರೆಲ್ಲರು ಆಕಿಂಚನ್ಯ ಧರ್ಮದಿಂದಲೇ ಆಗಿದ್ದಾರೆ, ಮತ್ತು ಮುಂದೆಯೂ ಕೂಡ ಯಾವ ತೀರ್ಥಂಕರ ಮೊದಲಾದ ಸಿದ್ಧರಾಗುತ್ತಾರೆ ಅವರೆಲ್ಲರು ಆಕಿಂಚನ್ಯ ಧರ್ಮದಿಂದಲೇ ಆಗುವರು. ಆಕಿಂಚನ್ಯ ಧರ್ಮವು ಮುಖ್ಯರೂಪದಿಂದ ಸಾಧುಗಳಿಗೇ ಆಗುತ್ತಿದ್ದರೂ ಏಕದೇಶ ಧರ್ಮದ ಧಾರಕರಾದ ಗೃಹಸ್ಥರಿಗೂ ಆ ಆಕಿಂಚನ್ಯ ಧರ್ಮವನ್ನು ಗ್ರಹಣ ಮಾಡುವ ಇಚ್ಛೆಯಿರುತ್ತದೆ. ಯಾವನು ಗೃಹಾಚಾರದಲ್ಲಿ ಮಂದರಾಗಿಯಾಗಿ ಅತ್ಯಂತ ವಿರಕ್ತನಿರುತ್ತಾನೆ, ಪ್ರಮಾಣರೂಪ ಪರಿಗ್ರಹವಿಡುತ್ತಾನೆ, ಭವಿಷ್ಯದ ಇಚ್ಛಾರಹಿತನಿದ್ದಾನೆ, ಅನ್ಯಾಯದ ಧನ ಪರಿಗ್ರಹವನ್ನೆಂದೂ ಗ್ರಹಣ ಮಾಡುವುದಿಲ್ಲ, ಅಲ್ಪ ಪರಿಗ್ರಹದಲ್ಲಿ ಅತ್ಯಂತ ಸಂತುಷ್ಟನಾಗಿರುತ್ತಾನೆ, ಪರಿಗ್ರಹವನ್ನು ದುಃಖ ಕೊಡುವಂಥದು ಮತ್ತು ಅತ್ಯಂತ ಅಸ್ಥಿರವೆಂದು ಮನ್ನಿಸುತ್ತಾನೆ ಅವನಿಗೆ ಆಕಿಂಚನ್ಯ ಭಾವನೆಯಿರುತ್ತದೆ. ಈ ಪ್ರಕಾರ ಆಕಿಂಚನ್ಯ ಧರ್ಮದ ವರ್ಣನೆ ಮಾಡಲಾಯಿತು.

## ಉತ್ತಮ ಬ್ರಹ್ಮಚರ್ಯ ಧರ್ಮ

ಈಗ ಉತ್ತಮ ಬ್ರಹ್ಮಚರ್ಯ ಧರ್ಮದ ಸ್ವರೂಪದ ವರ್ಣನೆ ಮಾಡುತ್ತಾರೆ. **ಸಮಸ್ತ ವಿಷಯಗಳಲ್ಲಿನ ಅನುರಾಗವನ್ನು ಬಿಟ್ಟುಕೊಟ್ಟು ಬ್ರಹ್ಮ ಎಂದರೆ ಜ್ಞಾಯಕ ಸ್ವಭಾವದ ಆತ್ಮನಲ್ಲಿ ಚರ್ಯೆ ಎಂದರೆ ಪ್ರವೃತ್ತಿ ಮಾಡುವುದು ಅದು ಬ್ರಹ್ಮಚರ್ಯವಿದೆ.**

ಎಲೈ ಜ್ಞಾನೀಜನಗಳೇ ! ಈ ಬ್ರಹ್ಮಚರ್ಯನಾಮದ ವ್ರತವು ಅತ್ಯಂತ ದುರ್ಧರವಿದೆ. ಪಾಪ ಎಲ್ಲರೂ ವಿಷಯಗಳ ವಶರಾಗುವುದರಿಂದ ಆತ್ಮಜ್ಞಾನದಿಂದ ರಹಿತರಿದ್ದಾರೆ, ಅವರು ಅದನ್ನು ಧಾರಣ ಮಾಡುವಲ್ಲಿ ಸಮರ್ಥರಿಲ್ಲ, ಯಾರು ಮನುಷ್ಯರಲ್ಲಿ ದೇವ ಸಮಾನರಿದ್ದಾರೆ ಅವರು ಬ್ರಹ್ಮಚರ್ಯವನ್ನು ಧಾರಣ ಮಾಡುವಲ್ಲಿ ಸಮರ್ಥರಿದ್ದಾರೆ. ಅನ್ಯ ಹೀನರು ವಿಷಯಗಳಲ್ಲಿ ಲಾಲಸೆಯುಳ್ಳವರು ಬ್ರಹ್ಮಚರ್ಯ ಧಾರಣ ಮಾಡುವಲ್ಲಿ ಸಮರ್ಥರಿಲ್ಲ. ಈ ಬ್ರಹ್ಮಚರ್ಯವ್ರತವು ಮಹಾದುರ್ಧರವಿದೆ. ಯಾರಿಗೆ ಬ್ರಹ್ಮಚರ್ಯವಿರುತ್ತದೆ ಅವರಿಗೆ ಸಮಸ್ತ ಇಂದ್ರಿಯಗಳನ್ನು ಹಾಗೂ ಕಷಾಯಗಳನ್ನು ಜಯಿಸುವುದು ಸುಲಭವಿದೆ.

ಎಲೈ ಭವ್ಯರೇ ! ಸ್ತ್ರೀಯರ ಮುಖದಲ್ಲಿ ಅನುರಾಗವುಳ್ಳ ಆ ಮನರೂಪದ ಮದೋನ್ಮತ್ತ ಆನೆಯನ್ನು ವೈರಾಗ್ಯ ಭಾವನೆಯಲ್ಲಿ ಕಟ್ಟಿಹಾಕಿ, ಮತ್ತು ವಿಷಯಗಳ ಇಚ್ಛೆಯ ಅಭಾವ ಮಾಡಿ ದುರ್ಧರ ಬ್ರಹ್ಮಚರ್ಯ ಧಾರಣ ಮಾಡಿರಿ. ಆ

ಕಾಮಭಾವವು ಚಿತ್ತರೂಪದ ಭೂಮಿಯಲ್ಲಿ ಉತ್ಪನ್ನವಾಗುತ್ತದೆ. ಕಾಮದಿಂದ ಪೀಡಿತನಾದ ಮೇಲೆ ಆ ಜೀವನು ಮಾಡಲು ಯೋಗ್ಯವಿಲ್ಲದಂಥ ಪಾಪವನ್ನೂ ಮಾಡಿ ಬಿಡುತ್ತಾನೆ. ಆ ಕಾಮವು ಮನಸ್ಸಿನ ಮಂಥನ ಮಾಡುತ್ತದೆ, ಮನದ ಜ್ಞಾನವನ್ನು ನಷ್ಟಮಾಡಿ ಬಿಡುತ್ತದೆ, ಇದೇ ಕಾರಣದಿಂದ ಅದನ್ನು **ಮನಮಥ**ವೆಂದು ಹೇಳುತ್ತಾರೆ. ಜ್ಞಾನವು ನಷ್ಟವಾಗಿ ಹೋದ ನಂತರವೇ ಸ್ತ್ರೀಯರ ಮಹಾನ ದುರ್ಗಂಧಯುಕ್ತ ನಿಂದ್ಯ ಶರೀರವನ್ನು ರಾಗಿಯಾಗಿ ಸೇವನೆ ಮಾಡುತ್ತಾನೆ.

ಕಾಮಭಾವದಿಂದ ಕುರುಡನಾಗಿ ಹೋದ ಮೇಲೆ ಮಹಾ ಅನೀತಿಗೆ ಪ್ರಾಪ್ತನಾಗಿ ತನ್ನ ಹಾಗೂ ಪರರ ನಾರಿಯರ ವಿಚಾರವನ್ನೇ ಮಾಡುವುದಿಲ್ಲ, ಈ ಅನ್ಯಾಯದಿಂದ ನಾನು ಇಲ್ಲಿಯೇ ಸತ್ತು ಹೋಗಬಹುದು, ದೊರೆಯ ತೀವ್ರ ದಂಡನೆಗೆ ಗುರಿಯಾಗಬೇಕಾಗುವುದು, ಯಶಸ್ಸು ಮಲಿನವಾಗಿ ಹೋಗುವುದು, ಧರ್ಮದಿಂದ ಭ್ರಷ್ಟನಾಗಿ ಹೋಗುವೆನು, ಸತ್ಯಾರ್ಥ ಬುದ್ಧಿಯು ನಷ್ಟವಾಗಿ ಹೋಗುವುದು, ಸತ್ತು ನರಕದಲ್ಲಿ ಅಸಂಖ್ಯಾತ ಕಾಲದವರೆಗೆ ಘೋರ ದುಃಖ ಭೋಗಿಸಬೇಕಾಗುವುದು, ಪುನಃ ಅಸಂಖ್ಯಾತ ಕಾಲದವರೆಗೆ ತಿರ್ಯಂಚ ಗತಿಗಳಲ್ಲಿ ಅನೇಕ ಪ್ರಕಾರದ ದುಃಖ ಸಹಿಸಬೇಕಾಗುವದು- ಪುನಃ ಕುಮನುಷ್ಯರಲ್ಲಿ ಕುರುಡ, ಕುಂಟ, ದರಿದ್ರ, ಇಂದ್ರಿಯವಿಕಲ, ಕಿವುಡ, ಮೂಗ, ಚಾಂಡಾಲ, ಭಿಲ್ಲ, ಚರ್ಮಕಾರರ ನೀಚ ಕುಲಗಳಲ್ಲಿ ಉತ್ಪನ್ನವಾಗಿ, ಪುನಃ ತ್ರಸ, ಸ್ಥಾವರಗಳಲ್ಲಿ ಅನಂತಕಾಲ ಪರಿಭ್ರಮಣ ಮಾಡಬೇಕಾಗುವುದೆಂಬ ಸತ್ಯ ವಿಚಾರವು ಕಾಮಿಗಳ ಮನಸ್ಸಿನಲ್ಲಿ ಉತ್ಪನ್ನವಾಗುವುದಿಲ್ಲ.

**'ಕಾಮ'** ನಾಮದ ಅರ್ಥವನ್ನು ಜಗತ್ತಿನ ಜನರಿಗೆ ಸ್ಪಷ್ಟವಾಗಿ ಹೇಳುತ್ತಾರೆ. 'ಕಂ' ಎಂದರೆ ಸುಳ್ಳು 'ದರ್ಪ' ಎಂದರೆ ಗರ್ವವನ್ನುತ್ಪನ್ನ ಮಾಡುತ್ತದೆ, ಅದರಿಂದ **ಕಂದರ್ಪ**ವೆಂದು ಹೇಳುತ್ತಾರೆ. ಅತಿ ಕಾಮನೆ ಎಂದರೆ ಇಚ್ಛೆಯನ್ನುತ್ಪನ್ನ ಮಾಡಿ ದುಃಖ ಮಾಡುತ್ತದೆ ಅದರಿಂದ ಅದನ್ನು **ಕಾಮ**ವೆಂದು ಹೇಳುತ್ತಾರೆ. ಅದರ ಕಾರಣ ಅನೇಕ ಜೀವಗಳು ತಿರ್ಯಂಚ ಹಾಗೂ ಮನುಷ್ಯ ಗತಿಗಳಲ್ಲಿ ಹೊಡೆದಾಡಿ ಸತ್ತು ಹೋಗುತ್ತವೆ, ಅದರಿಂದ ಅದನ್ನು **ಮಾರ**ವೆಂದು ಹೇಳುತ್ತಾರೆ. ಅದು ಸಂವರದ ವೈರಿಯಿರುವುದರಿಂದ ಅದನ್ನು **ಸಂವರಾರಿ**ಯೆಂದು ಹೇಳುತ್ತಾರೆ. ಬ್ರಹ್ಮ ಎಂದರೆ ತಪ-ಸಂಯಮಗಳಿಂದ ಅದು ಸೂ ಎಂದರೆ ಚಂಚಲಗೊಳಿಸುತ್ತದೆ ಅದರಿಂದ **ಬ್ರಹ್ಮಸೂ**ವೆಂದು ಹೇಳುತ್ತಾರೆ. ಈ ಪ್ರಕಾರ ಅನೇಕ ದೋಷಗಳ ಹೆಸರೆಂದೂ ಹೇಳುತ್ತಾರೆ. ಹೀಗೆ ತಿಳಿದುಕೊಂಡು ಮನ-ವಚನ-ಕಾಯದಿಂದ ಅನುರಾಗಪೂರ್ವಕವಾಗಿ ಬ್ರಹ್ಮಚರ್ಯವ್ರತವನ್ನು ಪಾಲಿಸಬೇಕು. ಬ್ರಹ್ಮಚರ್ಯ ಸಹಿತವಿದ್ದ ನಂತರವೇ ಸಂಸಾರದಿಂದ ಪಾರಾಗಿ ಹೋಗಬಹುದಾಗಿದೆ.

**ಬ್ರಹ್ಮಚರ್ಯವಿಲ್ಲದೆ ಸಮಸ್ತ ವ್ರತ -ತಪಗಳು ನಿಸ್ಸಾರವಿವೆ.** ಬ್ರಹ್ಮಚರ್ಯವಿಲ್ಲದ ಸಮಸ್ತ ಕಾಯಕ್ಲೇಶವು ನಿಷ್ಫಲವಿವೆ. ಬಾಹ್ಯ ಸ್ಪರ್ಶನೇಂದ್ರಿಯದ ಸುಖದಿಂದ ವಿರಕ್ತರಾಗಿ, ತಮ್ಮ ಅಂತರಂಗ ಪರಮಾತ್ಮ ಸ್ವರೂಪನಾದ ಯಾವ ಆತ್ಮನಿದ್ದಾನೆ ಅವನ ಉಜ್ವಲತೆಯನ್ನು ನೋಡಬೇಕು. ತಮ್ಮ ಆತ್ಮನು ಕಾಮದ ರಾಗದಿಂದ ಮಲಿನನಾಗಿ ಹೋಗದ ಹಾಗೆಯೇ ಯತ್ನ ಮಾಡಬೇಕು. ಬ್ರಹ್ಮಚರ್ಯದಿಂದ ಉಭಯಲೋಕಗಳು ಶೋಭಾಯಮಾನವಾಗುತ್ತವೆ.

ಶೀಲದ ರಕ್ಷಣೆ ಬಯಸುತ್ತಿದ್ದರೆ, ಉಜ್ವಲ ಯಶಸ್ಸು ಬಯಸುತ್ತಿದ್ದರೆ, ಧರ್ಮ ಬಯಸುತ್ತಿದ್ದರೆ, ತಮ್ಮ ಪ್ರತಿಷ್ಠೆ ಬಯಸುತ್ತಿದ್ದರೆ, ಚಿತ್ತದಲ್ಲಿ ಸ್ತ್ರೀಯರ ಕಥೆ ಕೇಳಬೇಡಿರಿ, ಹೇಳಬೇಡಿರಿ, ಸ್ತ್ರೀಯರ ಹಾವ-ಭಾವ, ನಾಟ್ಯ-ದೃಶ್ಯಗಳನ್ನು ನೋಡಬೇಡಿರೆಂಬ ಪರಮಾಗಮದ ಬೋಧವನ್ನು ಚಿತ್ತದಲ್ಲಿ ಧಾರಣ ಮಾಡಬೇಕು. ಚಲನಚಿತ್ರ ನೋಡಿದರೆ ಪರಿಣಾಮ ಕೆಡುತ್ತದೆ. ವ್ಯಭಿಚಾರಿ ಪುರುಷರ ಸಂಗತಿಯ ತ್ಯಾಗ ಮಾಡುವುದು. ಗಾಂಜ, ತಂಬಾಕು ಮೊದಲಾದ ಮಾದಕ ವಸ್ತುಗಳ ಭಕ್ಷಣ ಮಾಡಬಾರದು. ಸುಗಂಧದೆಣ್ಣೆ ಪುಷ್ಪಮಾಲೆ ಮೊದಲಾದ ಶೀಲಭಂಗ, ವ್ರತಭಂಗದ ಕಾರಣಗಳನ್ನು ದೂರದಿಂದಲೇ ತ್ಯಾಗ ಮಾಡಬೇಕು.

ಗೀತ, ನೃತ್ಯ ಮೊದಲಾದ ಕಾಮೋದ್ದೀಪಕ ಕಾರಣಗಳ ಪರಿಹಾರ ಮಾಡುವುದು, ರಾತ್ರಿ ಭೋಜನ ಬಿಡಬೇಕು, ವಿಕಾರವನ್ನುಂಟು ಮಾಡುವಂಥ ಲೋಕವಿರುದ್ಧವಾದ ವಸ್ತ್ರಾಭರಣಗಳನ್ನು ಧರಿಸಬಾರದು. ಏಕಾಂತದಲ್ಲಿ ಯಾವುದೇ ಸ್ತ್ರೀಯ ಸಂಪರ್ಕದಲ್ಲಿ ಬರಬಾರದು. ರಸನೇಂದ್ರಿಯದ ಲೋಲುಪತೆಯನ್ನು ತ್ಯಜಿಸಬೇಕು, ಜಿಹ್ವೇಂದ್ರಿಯದ ಲಂಪಟತೆಯ ಜತೆ ಸಾವಿರಾರು ದೋಷಗಳು ಬರುತ್ತವೆ; ಅದರಿಂದಲೇ ಸಂಪೂರ್ಣ ಉಚ್ಚತೆ, ಯಶಸ್ಸು, ಧರ್ಮ ನಷ್ಟವಾಗಿ ಹೋಗುತ್ತವೆ; ಸಮತಾಭಾವನೆಯನ್ನಂತೂ ಅದು ಸ್ವಪ್ನದಲ್ಲೂ ಸ್ಮರಿಸುವುದಿಲ್ಲ, ಲೋಕವ್ಯವಹಾರವು ಭ್ರಷ್ಟವಾಗಿ ಹೋಗುತ್ತದೆ,

ಬ್ರಹ್ಮಚರ್ಯವು ಭಂಗವಾಗಿ ಹೋಗುತ್ತದೆ. ಆದುದರಿಂದ ಆತ್ಮನ ಹಿತದ ಇಚ್ಛೆಯುಳ್ಳವರು ಒಂದು ಬ್ರಹ್ಮಚರ್ಯದ ರಕ್ಷಣೆ ಮಾಡಬೇಕು. ಈ ಪ್ರಕಾರ ಬ್ರಹ್ಮಚರ್ಯ ಧರ್ಮದ ವರ್ಣನೆ ಮಾಡಲಾಯಿತು.

ಈ ಪ್ರಕಾರ ಇವು ಹತ್ತು ಧರ್ಮದ ಲಕ್ಷಣಗಳನ್ನು ಸರ್ವಜ್ಞ ಭಗವಂತರು ಹೇಳಿದ್ದಾರೆ. ಯಾರಲ್ಲಿ ಈ ಹತ್ತು ಚಿಹ್ನೆಗಳು ಪ್ರಕಟವಾಗುತ್ತವೆ ಅವರಲ್ಲಿ ಧರ್ಮವಿದೆಯೆಂದು ತಿಳಿಯುವುದು. ಉತ್ತಮ ಕ್ಷಮೆ ಮೊದಲಾದ ಧರ್ಮಗಳನ್ನು ಘಾತ ಮಾಡುವಂಥ ವೈರಿಗಳು ಕ್ರೋಧಾದಿಗಳಿವೆ. ಅವುಗಳಿಂದ ಅನೇಕ ದೋಷಗಳು ಉತ್ಪನ್ನವಾಗುತ್ತಿರುವುದರಿಂದ ಅವುಗಳನ್ನು ದೂರ ಮಾಡಬೇಕು ಮತ್ತು ಕ್ಷಮೆ ಮೊದಲಾದುವಲ್ಲಿ ಅನೇಕ ಗುಣಗಳಿರುವುದರಿಂದ ಪುನಃಪುನಃ ಅವುಗಳ ಭಾವನೆ ಭಾವಿಸಬೇಕು.

**ಕ್ಷಮಾ ಧರ್ಮ :** ಕ್ಷಮೆಯು ಅದು ತಮ್ಮ ಪ್ರಾಣಗಳ ರಕ್ಷಕವಿದೆ, ಯಶದ ರಕ್ಷಕವಿದೆ, ಧನದ ರಕ್ಷಕವಿದೆ, ಧರ್ಮದ ರಕ್ಷಕವಿದೆ. ವ್ರತ, ಶೀಲ, ಸಂಯಮ, ಸತ್ಯದ ರಕ್ಷಣೆಯು ಒಂದು ಕ್ಷಮೆಯಿಂದಲೇ ಆಗುತ್ತದೆ. ಕಲಹದ ಘೋರ ದುಃಖಗಳಿಂದ ತಮ್ಮ ರಕ್ಷಣೆಯನ್ನು ಒಂದು ಕ್ಷಮೆಯೇ ಮಾಡುತ್ತದೆ. ಸಮಸ್ತ ಉಪದ್ರವ ಹಾಗೂ ವೈರದಿಂದ ಕ್ಷಮೆಯೇ ರಕ್ಷಣೆ ಮಾಡುತ್ತದೆ.

ಕ್ರೋಧವು ಅದು ಮೂಲಸಹಿತ ಧರ್ಮ, ಅರ್ಥ, ಕಾಮ, ಮೋಕ್ಷದ ನಾಶಮಾಡುವಂಥದ್ದಿದೆ. ಕ್ರೋಧಿಯು ತನ್ನ ಪ್ರಾಣಗಳ ನಾಶವನ್ನೇ ಮಾಡಿಕೊಳ್ಳುತ್ತಾನೆ. ಕ್ರೋಧದಿಂದ ಪ್ರಚಂಡ ರೌದ್ರ ಧ್ಯಾನವು ಪ್ರಕಟವಾಗುತ್ತದೆ. ಕ್ರೋಧಿಯು ಒಂದು ಕ್ಷಣ ಮಾತ್ರದಲ್ಲಿ ಆತ್ಮಘಾತ ಮಾಡಿಕೊಂಡು ಸತ್ತು ಹೋಗುತ್ತಾನೆ. ಕೆರೆ, ಬಾವಿ, ನದೀ, ಸಮುದ್ರಗಳಲ್ಲಿ ಮುಳುಗಿ ಸತ್ತು ಹೋಗುತ್ತಾನೆ. ಶಸ್ತ್ರಘಾತ, ವಿಷಭಕ್ಷಣ, ನೇಣುಹಾಕಿಕೊಳ್ಳುವುದು ಮೊದಲಾದ ಅನೇಕ ಕುಕರ್ಮ ಮಾಡಿ ಆತ್ಮಘಾತ ಮಾಡಿಕೊಳ್ಳುತ್ತಾನೆ. ಕ್ರೋಧಿಯಲ್ಲಿ ಅನ್ಯರನ್ನು ಕೊಲ್ಲಬಾರದೆಂಬ ದಯೆಯಿರುವುದಿಲ್ಲ. ಅವನು ತನ್ನ ತಂದೆಯನ್ನು, ಮಗನನ್ನು, ತಮ್ಮನನ್ನು, ಮಿತ್ರನನ್ನು, ಒಡೆಯನನ್ನು, ಸೇವಕನನ್ನು, ಗುರುವನ್ನು ಒಂದು ಕ್ಷಣಮಾತ್ರದಲ್ಲಿ ಕೊಂದು ಹಾಕುತ್ತಾನೆ. **ಕ್ರೋಧಿಯು ಘೋರ ನರಕದ ಪಾತ್ರನಿದ್ದಾನೆ.**

ಕ್ರೋಧಿಯು ಮಹಾಭಯಂಕರನಿದ್ದಾನೆ, ಸಮಸ್ತ ಧರ್ಮವನ್ನು ನಾಶಮಾಡುವಂಥವನಿದ್ದಾನೆ, ಕ್ರೋಧಿಯಲ್ಲಿ ಸತ್ಯವಚನವಿರುವುದಿಲ್ಲ; ಅವನಂತೂ ತನ್ನನ್ನು ಪರರನ್ನು, ಸಮಭಾವವನ್ನು, ಧರ್ಮವನ್ನು ನಾಶಮಾಡುವಂಥವನಿದ್ದಾನೆ. ಕುವಚನರೂಪದ ಅಗ್ನಿಯನ್ನೇ ಕಾರುತ್ತಾನೆ. ಕ್ರೋಧಿಯು ಧರ್ಮಾತ್ಮ, ಸಂಯಮಿ, ಶೀಲವಂತ, ಮುನಿ ಹಾಗೂ ಶ್ರಾವಕರಿಗೆ ಕಳವಿನ ಅನ್ಯಾಯದ ಸುಳ್ಳು ದೋಷ-ಕಲಂಕ ತಗಲಿಸಿ ದೂಷಿತ ಮಾಡುತ್ತಾನೆ. ಕ್ರೋಧದ ಪ್ರಭಾವದಿಂದ ಜ್ಞಾನವು ಕುಜ್ಞಾನವಾಗುತ್ತದೆ, ಆಚರಣೆಯು ವಿಪರೀತವಾಗುತ್ತದೆ, ಶ್ರದ್ಧೆಯು ಭ್ರಷ್ಟವಾಗುತ್ತದೆ, ಅನ್ಯಾಯದಲ್ಲಿ ಪ್ರವೃತ್ತಿಯಾಗುತ್ತದೆ, ನೀತಿಯು ನಾಶವಾಗಿ ಹೋಗುತ್ತದೆ, ಅತ್ಯಂತ ದುರಾಗ್ರಹಿಯಾಗಿ ವಿಪರೀತ ಮಾರ್ಗದ ಅವಲಂಬನೆಯಾಗುತ್ತದೆ, ಧರ್ಮ, ಅಧರ್ಮ, ಉಪಕಾರ-ಅಪಕಾರದ ವಿಚಾರದಿಂದ ರಹಿತನಾಗಿ ಕೃತಘ್ನನಾಗಿ ಬಿಡುತ್ತಾನೆ. ಆದುದರಿಂದ ವೀತರಾಗ ಧರ್ಮವನ್ನು ಬಯಸುವವರೆಂದೂ ಕ್ರೋಧ ಭಾವಕ್ಕೆ ಪ್ರಾಪ್ತರಾಗಿ ಹೋಗಬಾರದು.

**ಮಾರ್ದವ ಧರ್ಮ :** ಮಾರ್ದವ ಎಂದರೆ ಕಠೋರತೆಯಿಲ್ಲದ ಕೋಮಲ ಪರಿಣಾಮವುಳ್ಳ ಜೀವದಲ್ಲಿ ಗುರುಗಳ ಕೃಪೆಯಿರುತ್ತದೆ. **ಮಾರ್ದವ ಪರಿಣಾಮಿಯನ್ನು ಸಾಧುಪುರುಷರೂ ಸಾಧುವೆಂದು ಮನ್ನಿಸುತ್ತಾರೆ.** ಕಠೋರತೆಯಿಲ್ಲದ ಪುರುಷನೇ ಜ್ಞಾನಕ್ಕೆ ಪಾತ್ರನಾಗುತ್ತಾನೆ. ಮಾನರಹಿತ ಕೋಮಲ ಪರಿಣಾಮವುಳ್ಳವನಿಗೆ ಎಂಥ ಗುಣಗಳನ್ನು ಗ್ರಹಣ ಮಾಡಿಸಲಪೇಕ್ಷಿಸುವುದು ಮತ್ತು ಎಂಥ ಕಲೆಯನ್ನು ಕಲಿಸಲಪೇಕ್ಷಿಸುವುದು ಅವನು ಅಂಥದೇ ಕಲೆ ಮತ್ತು ಗುಣವನ್ನು ಕಲಿತುಕೊಳ್ಳುತ್ತಾನೆ, ಸಮಸ್ತ ಧರ್ಮದ ಮೂಲ ಸಮಸ್ತ ವಿದ್ಯೆಗಳ ಮೂಲವು ವಿನಯವಿದೆ. ವಿನಯವಂತನು ಎಲ್ಲರಿಗೂ ಪ್ರಿಯನಿರುತ್ತಾನೆ. ಅನ್ಯ ಗುಣಗಳಿಲ್ಲದಂಥ ಪುರುಷನೂ ವಿನಯಗುಣದಿಂದ ಮಾನ್ಯನಾಗಿ ಹೋಗುತ್ತಾನೆ. ವಿನಯವು ಶ್ರೇಷ್ಠ ಆಭೂಷಣವಿದೆ. ಕೋಮಲ ಪರಿಣಾಮಿಗಳಲ್ಲಿಯೇ ದಯಾಭಾವವಿರುತ್ತದೆ. ಮಾರ್ದವದಿಂದ ಸ್ವರ್ಗ ಲೋಕದ ಅಭ್ಯುದಯ ಸಂಪತ್ತು ಮತ್ತು ನಿರ್ವಾಣದ ಅವಿನಾಶೀ ಸಂಪತ್ತು ಪ್ರಾಪ್ತವಾಗಿ ಬಿಡುತ್ತದೆ.

**ಕಠೋರ ಪರಿಣಾಮಿಗೆ ಉಪದೇಶವು ನಾಟುವುದಿಲ್ಲ,** ಸಾಧುಪುರುಷರು ಕೂಡ ಅವಿನಯಿ ಕಠೋರ ಪರಿಣಾಮಿಯನ್ನು ದೂರದಿಂದಲೇ ಬಿಡುವ ಪರಿಣಾಮ ಮಾಡುತ್ತಾರೆ. **ಯಾವ ಪ್ರಕಾರ ಪಾಷಾಣದಲ್ಲಿ ನೀರು ಪ್ರವೇಶ**

**ಮಾಡುವುದಿಲ್ಲ ಅದೇ ಪ್ರಕಾರ ಸದ್ಗುರುಗಳ ಉಪದೇಶವು ಕಠೋರ ಪುರುಷರ ಹೃದಯದಲ್ಲಿ ಪ್ರವೇಶ ಮಾಡುವುದಿಲ್ಲ.** ಯಾವ ಪಾಷಾಣ-ಕಾಷ್ಠ ಮೊದಲಾದವು ಮೃದುವಾಗಿರುತ್ತವೆ ಅವುಗಳಲ್ಲಿಯಂತೂ ಆಕೃತಿಗಳು ಸರಿಯಾಗಿಯೇ ಎಲ್ಲಿ ಹೇಗೆ ನಿರ್ಮಿಸ ಬಯಸುವುದು, ಕೆತ್ತ ಬಯಸುವುದು ಅಲ್ಲಿ ಅಷ್ಟೇ ಸುಂದರವಾಗಿ ಸರಿಯಾಗಿ ಇಳಿದು ಬರುತ್ತವೆ, ಕೆತ್ತಲಾಗುತ್ತದೆ ಮತ್ತು ಎಂಥ ಆಕಾರದ ಮೂರ್ತಿ ನಿರ್ಮಿಸಬಯಸುತ್ತದೆ ಅಂಥದೇ ಆಗಿ ಬಿಡುತ್ತದೆ; ಆದರೆ ಮೃದುತ್ವವಿಲ್ಲದುದದರಲ್ಲಿ ಚೇಣ ತಗಲಿಸುತ್ತಿರುವಂತಯೇ ಚೂರು-ಚೂರಾಗಿ ಸಿಡಿದು ಬೀಳುತ್ತದೆ. ಶಿಲ್ಪಿಯ ಅಭಿಪ್ರಾಯದ ಅನುಸಾರ ನಿರ್ಮಿಸುವಲ್ಲಿ ಬರುವುದಿಲ್ಲ, ಅದೇ ಪ್ರಕಾರ ಕಠೋರ ಪರಿಣಾಮಿಗೆ ಯಥಾವತ್ ಉಪದೇಶ ತಗಲುವುದಿಲ್ಲ.

ಇಡೀ ಜಗತ್ತು ಅಭಿಮಾನಿಯ ವೈರಿಯಾಗಿ ಹೋಗುತ್ತದೆ, ಪರಲೋಕದಲ್ಲಿ ತಿರ್ಯಂಚ ಮತ್ತು ಅತ್ಯಂತ ನೀಚ ಮನುಷ್ಯರಲ್ಲಿ ಅಸಂಖ್ಯಾತಕಾಲದವರೆಗೆ ಅನೇಕ ಪ್ರಕಾರದಿಂದ ತಿರಸ್ಕಾರಕ್ಕೆ ಪಾತ್ರನಾಗುತ್ತಾನೆ. ಅಭಿಮಾನಿಯು ಯಾರಿಗೂ ಪ್ರಿಯನೆನಿಸುವುದಿಲ್ಲ, ಆದುದರಿಂದ ಕಠೋರತೆಯನ್ನು ಬಿಟ್ಟುಕೊಟ್ಟು ನಿರಂತರ ಮಾರ್ದವಭಾವನೆಯನ್ನೇ ಧಾರಣ ಮಾಡಬೇಕು.

**ಆರ್ಜವ ಧರ್ಮ :** ಕಪಟವು ಸಮಸ್ತ ಅನರ್ಥಗಳ ಮೂಲವಿದೆ; ಪ್ರೀತಿ ಹಾಗೂ ಪ್ರತೀತಿಯ ನಾಶ ಮಾಡುವಂಥದ್ದಿದೆ. ಕಪಟಿಯಲ್ಲಿ ಅಸತ್ಯ, ಛಲ, ನಿರ್ದಯತೆ, ವಿಶ್ವಾಸಘಾತ ಮೊದಲಾದ ಸಮಸ್ತ ದೋಷಗಳಿರುತ್ತವೆ. ಕಪಟಿಯಲ್ಲಿ ಗುಣವಿಲ್ಲ, ಆದರೆ ಸಮಸ್ತ ದೋಷಗಳೇ ಇರುತ್ತವೆ. ಮಾಯಾಚಾರಿಯು ಇಲ್ಲಿ ಅಪಯಶ ಪಡೆದು ಪುನಃ ನರಕ, ತಿರ್ಯಂಚ ಮೊದಲಾದ ಗತಿಗಳಲ್ಲಿ ಅಸಂಖ್ಯಾತಕಾಲದವರೆಗೆ ಪರಿಭ್ರಮಣ ಮಾಡುತ್ತಾನೆ. ಮಾಯಾಚಾರವಿಲ್ಲದ ಆರ್ಜವ ಧರ್ಮದ ಧಾರಕನಲ್ಲಿ ಸಮಸ್ತ ಗುಣಗಳಿರುತ್ತವೆ; ಸಮಸ್ತ ಲೋಕದ ಪ್ರೀತಿ ಹಾಗೂ ಪ್ರತೀತಿಗೆ ಪಾತ್ರನಾಗುತ್ತಾನೆ, ಪರಲೋಕದಲ್ಲಿ ದೇವಗಳಿಂದ ಪೂಜ್ಯನಾದ ಇಂದ್ರ-ಪ್ರತೀಂದ್ರ ಮೊದಲಾಗಿ ಆಗುತ್ತಾನೆ. ಆದುದರಿಂದ ಸರಳ ಪರಿಣಾಮದಿಂದಲೇ ಆತ್ಮನ ಹಿತವಿದೆ.

**ಸತ್ಯಧರ್ಮ :** ಸತ್ಯವಾದಿಯಲ್ಲಿ ಸಮಸ್ತ ಗುಣಗಳಿರುತ್ತವೆ. ಸತ್ಯವಾದಿಯು ಯಾವಾಗಲೂ ಕಪಟ ಮೊದಲಾದ ದೋಷಗಳಿಂದ ರಹಿತನಾಗಿ ಜಗತ್ತಿನಲ್ಲೂ ಮನ್ನಣೆಗೆ ಪ್ರಾಪ್ತನಾಗುತ್ತಾನೆ, ಮತ್ತು ಪರಲೋಕದಲ್ಲಿ ಅನೇಕ ದೇವ, ಮನುಷ್ಯ ಮೊದಲಾದವರು ಅವನ ಆಜ್ಞೆಯನ್ನು ತಮ್ಮ ಮಸ್ತಕದ ಮೇಲೆ ಧಾರಣ ಮಾಡುತ್ತಾರೆ. ಅಸತ್ಯವಾದಿಯು ಇಲ್ಲಿ ಕೂಡ ಅಪವಾದ, ನಿಂದೆಗಳಿಗೆ ಪಾತ್ರನಾಗುತ್ತಾನೆ, ಎಲ್ಲರ ಅಪ್ರತೀತಿಯ ಕಾರಣನಿದ್ದಾನೆ, ಬಂಧು-ಮಿತ್ರರುಗಳೂ ಅವಜ್ಞೆ ಮಾಡಿ ಬಿಟ್ಟು ಹೋಗುತ್ತಾರೆ, ದೊರೆಯಿಂದ ಜಿಹ್ವಾಚ್ಛೇದ ಸರ್ವಸ್ವಹರಣ ಮೊದಲಾದ ದಂಡನೆಗೆ ಗುರಿಯಾಗುತ್ತಾನೆ. ಪರಲೋಕದಲ್ಲಿ ವಚನ ರಹಿತ ತಿರ್ಯಂಚ, ಏಕೇಂದ್ರಿಯ, ವಿಕಲತ್ರಯ ಮೊದಲಾದ ಗತಿಗಳಲ್ಲಿ ಅಸಂಖ್ಯಾತ ಭವ ಧಾರಣ ಮಾಡುತ್ತಾನೆ. ಆದುದರಿಂದ ಸತ್ಯ ಧರ್ಮವನ್ನು ಧಾರಣ ಮಾಡುವುದೇ ಶ್ರೇಷ್ಠವಿದೆ.

**ಶೌಚಧರ್ಮ :** ಜಗತ್ತಿನಲ್ಲಿ ಪವಿತ್ರ ಆಚರಣೆಯುಳ್ಳವನೇ ಪೂಜ್ಯನಾಗುತ್ತಾನೆ. ಶುಚಿಯ ಅರ್ಥವು ಪವಿತ್ರತೆಯ ಉಜ್ವಲತೆಯಿದೆ. ಯಾರ ಆಹಾರ-ವಿಹಾರ ಮೊದಲಾದ ಸಮಸ್ತ ಪ್ರವೃತ್ತಿಯು ಹಿಂಸಾರಹಿತವಿದೆ, ಹಿಂಸೆಯ ಭಯದಿಂದ ಯತ್ನಾಚಾರ ಸಹಿತವಿದೆ, ಅನ್ಯರ ಧನದಲ್ಲಿ ಇಚ್ಛಾರಹಿತನಿದ್ದಾನೆ, ಅನ್ಯರ ಸ್ತ್ರೀಯರಲ್ಲಿ ಇಚ್ಛೆಯನ್ನೆಂದೂ ಸ್ವಪ್ನದಲ್ಲಿ ಕೂಡ ಮಾಡುವುದಿಲ್ಲ. ಅವನೇ ಉಜ್ವಲ ಆಚರಣೆಯ ಧಾರಕನಿದ್ದಾನೆ, ಅವನನ್ನೇ ಜಗತ್ತು ಪೂಜ್ಯನೆಂದು ಮನ್ನಿಸುತ್ತದೆ, ಎಲ್ಲ ಜನರು ನಿರ್ಲೋಭಿಯ ಮೇಲೆ ವಿಶ್ವಾಸ ಮಾಡುತ್ತಾರೆ, ಅವನೇ ಲೋಕದಲ್ಲಿ ಉತ್ತಮನಿದ್ದಾನೆ, ಊರ್ಧ್ವಲೋಕದಲ್ಲಿ ಉತ್ತಮ ಗತಿಗೆ ಪ್ರಾಪ್ತನಾಗುತ್ತಾನೆ. ಲೋಭರಹಿತನ ಯಶಸ್ಸು ಅತ್ಯಂತ ಉಜ್ವಲ ತರವಾಗಿ ಪ್ರಕಟವಾಗುತ್ತದೆ.

**ಲೋಭಿಯು ಮಹಾಮಲಿನವಿರುವ ಸಮಸ್ತ ದೋಷಗಳ ಸ್ಥಾನನಿದ್ದಾನೆ.** ಲೋಭಿಗೆ ನಿಂದ್ಯ ಕರ್ಮಗಳಲ್ಲಿ ಪ್ರೀತಿಯಿರುತ್ತದೆ. ಲೋಭಿಗೆ ಗ್ರಾಹ್ಯ-ಅಗ್ರಾಹ್ಯ, ಖಾದ್ಯ-ಅಖಾದ್ಯ, ಕೃತ್ಯ-ಅಕೃತ್ಯದ ವಿಚಾರವೇ ಇರುವುದಿಲ್ಲ. ಇಲ್ಲಿ ಈ ಲೋಕದಲ್ಲೂ ಅವನ ನಿಂದೆ, ಧರ್ಮದಿಂದ ಪರಾಙ್ಮುಖತೆ, ನಿರ್ದಯತೆಗಳನ್ನು ಸ್ಪಷ್ಟವಾಗಿ ಕಾಣುತ್ತೇವೆ. ಲೋಭಿಯು ಧರ್ಮ, ಅರ್ಥ, ಕಾಮವನ್ನು ನಷ್ಟಮಾಡಿ, ಕುಮರಣದಿಂದ ಸತ್ತು ದುರ್ಗತಿಯಲ್ಲಿ ಹೊರಟು ಹೋಗುತ್ತಾನೆ. **ಲೋಭಿಯ ಹೃದಯದಲ್ಲಿ**

**ಸದ್ಗುಣಗಳಿಗೆ ಯಾವ ಸ್ಥಾನವೇ ಇರುವುದಿಲ್ಲ.** ಲೋಭಿಗೆ ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಅತಿಶಯ ಕ್ಲೇಶ ಮತ್ತು ದುಃಖವು ಪ್ರಾಪ್ತವಾಗುತ್ತದೆ. ಆದುದರಿಂದ ಶೌಚ ಧರ್ಮದ ಧಾರಣ ಮಾಡುವುದೇ ಶ್ರೇಷ್ಠವಿದೆ, ಉತ್ತಮವಿದೆ.

**ಸಂಯಮಧರ್ಮ :** ಸಂಯಮವೇ ಆತ್ಮನ ಹಿತವಿದೆ. ಈ ಲೋಕದಲ್ಲಿ ಸಂಯಮದ ಧಾರಕರು ಎಲ್ಲ ಜನರಿಂದ ವಂದಿಸಲು ಯೋಗ್ಯರಿದ್ದಾರೆ, ಯಾವುದೇ ಪಾಪದಿಂದ ಲಿಪ್ತರಾಗುವುದಿಲ್ಲ, ಇವರದು ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಅಚಿಂತ್ಯಮಹಿಮೆಯಿದೆ. ಅಸಂಯಮಿಯು ಪ್ರಾಣಗಳ ಘಾತಮಾಡಿ ಹಾಗೂ ವಿಷಯಗಳಲ್ಲಿ ಅನುರಾಗ ಮಾಡಿ ಅಶುಭ ಕರ್ಮಗಳ ಬಂಧ ಮಾಡಿಕೊಂಡು ದುಃಖಭೋಗಿಸುತ್ತಾನೆ. ಆದುದರಿಂದ ಸಂಯಮ ಧರ್ಮದಿಂದಲೇ ಜೀವದ ಹಿತವಿದೆ.

**ತಪಧರ್ಮ :** ಕರ್ಮಗಳ ಸಂವರ ಹಾಗೂ ನಿರ್ಜರೆ ಮಾಡುವ ಮುಖ್ಯಕಾರಣವು ತಪವಿದೆ. ತಪಸ್ಸೇ ಆತ್ಮನನ್ನು ಕರ್ಮಮಲದಿಂದ ರಹಿತಮಾಡುತ್ತದೆ. ತಪಸ್ಸಿನ ಪ್ರಭಾವದಿಂದ ಇಲ್ಲಿ ಕೂಡ ಅನೇಕ ಋದ್ಧಿಗಳು ಪ್ರಕಟವಾಗುತ್ತವೆ. ತಪಸ್ಸಿನ ಪ್ರಭಾವವು ಅಚಿಂತ್ಯವಿದೆ. ತಪಸ್ಸಿಲ್ಲದೆ ಕಾಮವನ್ನು ನಿದ್ರೆಯನ್ನು ಯಾರು ಗೆಲ್ಲುವರು ? ತಪಸ್ಸಿಲ್ಲದೆ ಇಚ್ಛೆಗಳನ್ನು ಯಾರು ಕೊಲ್ಲುವರು ? **ಇಂದ್ರಿಯ ವಿಷಯಗಳನ್ನು ಸಾಯಿಸುವಲ್ಲಿ ತಪಸ್ಸೇ ಸಮರ್ಥವಿದೆ, ಆಶಾರೂಪದ ಪಿಶಾಚಿಯು ತಪಸ್ಸಿನಿಂದಲೇ ಸತ್ತು ಹೋಗುತ್ತದೆ.** ತಪಸ್ಸಿನಿಂದಲೇ ಕಾಮದ ಮೇಲೆ ವಿಜಯವಾಗುತ್ತದೆ. ತಪಸ್ಸಿನ ಸಾಧನೆ ಮಾಡುವಂಥವನು ಪರೀಷಹ-ಉಪಸರ್ಗಗಳು ಬಂದರೂ ಕೂಡ ರತ್ನತ್ರಯ ಧರ್ಮದಿಂದ ಚ್ಯುತನಾಗುವುದಿಲ್ಲ, ಆದುದರಿಂದ ತಪಧರ್ಮವನ್ನು ಧಾರಣ ಮಾಡುವುದೇ ಉಚಿತವಿದೆ. ತಪಸ್ಸು ಮಾಡಿದಲ್ಲದೆ ಸಂಸಾರದಿಂದ ಬಿಡುಗಡೆಯಾಗುವುದಿಲ್ಲ, ಚಕ್ರವರ್ತಿಯು ಕೂಡ ರಾಜ್ಯಭಾರ ಬಿಟ್ಟು ತಪಧಾರಣ ಮಾಡಿ ಮೂರು ಲೋಕದಲ್ಲಿ ವಂದನೆ ಯೋಗ್ಯ ಪೂಜ್ಯರಾಗಿ ಹೋಗುತ್ತಾರೆ. ಯಾರು ತಪಸ್ಸು ಬಿಟ್ಟು ರಾಜ್ಯಗ್ರಹಣ ಮಾಡುತ್ತಾರೆ ಅವರು ಅತ್ಯಂತ ನಿಂದ್ಯ ಧಿಕ್ಕಾರ ಮಾಡಲು ಯೋಗ್ಯರಿದ್ದಾರೆ, ಹುಲ್ಲು ಕಡ್ಡಿಗಿಂತಲೂ ಕ್ಷುಲ್ಲಕರಾಗಿ ಹೋಗುತ್ತಾರೆ. ಆದುದರಿಂದ ಮೂರು ಲೋಕದಲ್ಲಿ ತಪದ ಸಮಾನ ಬೇರೆ ಯಾವುದೇ ಮಹಾನವಾಗಿಲ್ಲ.

**ತ್ಯಾಗ ಧರ್ಮ** – ಪರಿಗ್ರಹದ ಸಮಾನ ಭಾರವು ಬೇರೆಯಿಲ್ಲ. ಅದೆಷ್ಟೋ ದುಃಖ, ದುರ್ಧ್ಯಾನ, ಕ್ಲೇಶ, ವೈರ, ವಿಯೋಗ, ಶೋಕ, ಭಯ ಅಪಮಾನಗಳಿವೆ ಅವೆಲ್ಲವೂ ಪರಿಗ್ರಹದ ಇಚ್ಛೆಯುಳ್ಳವರಿಗೆ ಇರುತ್ತವೆ. ಹೇಗೆ-ಹೇಗೆ ಪರಿಗ್ರಹದಿಂದ ಪರಿಣಾಮವು ಭಿನ್ನವಾಗತೊಡಗುತ್ತದೆ, ಪರಿಗ್ರಹದಲ್ಲಿ ಆಸಕ್ತಿಯು ಕಡಿಮೆಯಾಗತೊಡಗುತ್ತದೆ, ಹಾಗೆ-ಹಾಗೆಯೇ ದುಃಖವು ಕಡಿಮೆಯಾಗತೊಡಗುತ್ತದೆ. ಹೇಗೆ ದೊಡ್ಡ ಭಾರದಿಂದ ರಹಿತನಾದ ಮೇಲೆ ದುಃಖೀ ಪುರುಷನು ಸುಖಿಯಾಗುತ್ತಾನೆ, ಹಾಗೆಯೇ ಪರಿಗ್ರಹದ ವಾಸನೆಯು ಹೊರಟು ಹೋಗುವುದರಿಂದ ಸುಖಿಯಾಗುತ್ತಾನೆ. **ಸಮಸ್ತ ದುಃಖ ಹಾಗೂ ಸಮಸ್ತ ಪಾಪಗಳ ಉತ್ಪತ್ತಿಯ ಸ್ಥಾನವು ಈ ಪರಿಗ್ರಹವಿದೆ.**

ಯಾವ ಪ್ರಕಾರ ನದಿಗಳಿಂದ ಸಮುದ್ರವು ತೃಪ್ತವಾಗುವುದಿಲ್ಲ, ಸೌದೆಯಿಂದ ಅಗ್ನಿಯು ತೃಪ್ತವಾಗುವುದಿಲ್ಲ, ಅದೇ ಪ್ರಕಾರ ಪರಿಗ್ರಹದಿಂದ ಆಸೆಯ ಪಿಪಾಸೆಯು ಆರುವುದಿಲ್ಲ. ಆಸೆಯ ಹೊಂಡವು ಅಗಾಧ ಆಳವಿದೆ, ಅದರ ತಳದ ಸ್ಪರ್ಶವಿಲ್ಲ. ಹೇಗೆ-ಹೇಗೆ ಅದರಲ್ಲಿ ಧನ ಹಾಕುತ್ತ ಹೋಗುತ್ತದೆ ಹಾಗೆ-ಹಾಗೆ ಆಳವು ಹೆಚ್ಚುತ್ತ ಹೋಗುತ್ತದೆ. ಆ ಆಶಾರೂಪದ ಗುಂಡಿಯು ನಿಧಿಗಳಿಂದ ತುಂಬುವ ಸಾಧ್ಯತೆಯಿಲ್ಲ ಅದು ಅನ್ಯ ಸಂಪತ್ತಿನಿಂದ ಹೇಗೆ ತುಂಬುವ ಸಾಧ್ಯತೆಯಿದೆ ? ಆದರೆ ಹೇಗೆ-ಹೇಗೆ ಪರಿಗ್ರಹದ ಆಶೆಯ ತ್ಯಾಗವಾಗುವುದು ಅದು ಹಾಗೆ-ಹಾಗೆ ತುಂಬುತ್ತ ಹೋಗುತ್ತದೆ. ಆದುದರಿಂದ ಸಮಸ್ತ ದುಃಖವನ್ನು ದೂರ ಮಾಡುವಲ್ಲಿ ಒಂದು ತ್ಯಾಗ ಧರ್ಮವೇ ಸಮರ್ಥವಿದೆ. ತ್ಯಾಗದಿಂದಲೇ ಅಂತರಂಗ-ಬಹಿರಂಗ ಬಂಧನವಿಲ್ಲದೆ ಅನಂತ ಸುಖಿಯಾಗಿ ಹೋಗುವೆ. ಪರಿಗ್ರಹದ ಬಂಧನದಿಂದ ಬಂಧಿಸಲ್ಪಟ್ಟ ಜೀವವು ಪರಿಗ್ರಹದ ತ್ಯಾಗದಿಂದಲೇ ಮುಕ್ತವಾಗುವುದು. ಆದುದರಿಂದ ತ್ಯಾಗ ಧರ್ಮವನ್ನು ಧಾರಣ ಮಾಡುವುದೇ ಶ್ರೇಷ್ಠವಿದೆ.

**ಆಕಿಂಚನ್ಯ ಧರ್ಮ :** ಎಲೈ ಆತ್ಮನೇ ! ಈ ದೇಹ, ಸ್ತ್ರೀ, ಪುತ್ರ, ಧನ, ಧಾನ್ಯ, ರಾಜ್ಯ, ಐಶ್ವರ್ಯ ಮೊದಲಾದುವಲ್ಲಿ ಒಂದು ಪರಮಾಣು ಮಾತ್ರವೂ ನಿನ್ನದಿಲ್ಲ. ಅವೆಲ್ಲವು ಪುದ್ಗಲದ್ರವ್ಯದ ಅವಸ್ಥೆಗಳಿವೆ, ಜಡವಿವೆ, ವಿನಾಶಶೀಲವಿವೆ,

ಅಚೇತನವಿವೆ. **ಈ ಪರದ್ರವ್ಯಗಳಲ್ಲಿ 'ಅಹಂ' ಎಂಬ ಸಂಕಲ್ಪವನ್ನು ತೀವ್ರ ದರ್ಶನಮೋಹಕರ್ಮದ ಉದಯವಿಲ್ಲದೆ ಯಾರು ಮಾಡುವ ಸಾಧ್ಯತೆಯಿದೆ ?** ಈ ಪರದ್ರವ್ಯಗಳಲ್ಲಿ 'ಅಹಂ' ಎಂಬ ಆತ್ಮತನದ ಮಿಥ್ಯಾಮನ್ನಣೆಯ ರೂಪದ ಸಂಕಲ್ಪವು ನನಗೆಂದೂ ಆಗದಿರಲಿ, ನಾನಂತೂ ಅಕಿಂಚನನಿದ್ದೇನೆ. ಈ ಪ್ರಕಾರದ ಆಕಿಂಚನ್ಯ ಭಾವನೆಯ ಪ್ರಭಾವದಿಂದ ಇಲ್ಲಿಯೇ ಕರ್ಮದ ಲೇಪದಿಂದ ರಹಿತ ಸಮಸ್ತ ಬಂಧದಿಂದ ರಹಿತನಾಗಿ ಹೋಗುತ್ತಾನೆ. ಆದುದರಿಂದ ಪ್ರತ್ಯಕ್ಷ ನಿರ್ವಾಣಕ್ಕೆ ಕಾರಣಭೂತವಾದ ಆಕಿಂಚನ್ಯ ಧರ್ಮವನ್ನೇ ಧಾರಣ ಮಾಡುವುದು.

**ಬ್ರಹ್ಮಚರ್ಯ ಧರ್ಮ :** ಕುಶೀಲವು ಮಹಾಪಾಪವಿದೆ, ಸಂಸಾರ ಪರಿಭ್ರಮಣದ ಬೀಜವಿದೆ. ಬ್ರಹ್ಮಚರ್ಯವನ್ನು ಪಾಲಿಸುವಂಥವರಿಂದ ಹಿಂಸೆ ಮೊದಲಾದ ಪಾಪಗಳ ಪ್ರಚಾರವು ದೂರ ಓಡುತ್ತದೆ. ಬ್ರಹ್ಮಚರ್ಯದಲ್ಲಿ ಸಮಸ್ತ ಗುಣಗಳ ಸಂಪತ್ತು ನಿವಾಸ ಮಾಡುತ್ತದೆ. ಅದರಿಂದ ಜಿನೇಂದ್ರಿಯತೆಯು ಪ್ರಕಟವಾಗುತ್ತದೆ, ಪರಲೋಕದಲ್ಲಿ ಅನೇಕ ಋದ್ಧಿಗಳ ಧಾರಕನಾದ ದೇವನಾಗುತ್ತಾನೆ.

**ಧರ್ಮದ ಪ್ರಕಟತೆ :** ದೇವಾಧಿದೇವ ಅರಹಂತ ಭಗವಂತರ ಮುಖಾರವಿಂದದಿಂದ ಪ್ರಕಟವಾದ ದಶಲಕ್ಷಣ ಧರ್ಮವು ಆತ್ಮನ ಸ್ವಭಾವವಿದೆ, ಪರವಸ್ತುವಿಲ್ಲ, ಕ್ರೋಧ ಮೊದಲಾದ ಕರ್ಮಜನಿತ ಉಪಾಧಿಯು ದೂರವಾದ ಮೇಲೆ ಆತ್ಮನ ಸ್ವಭಾವವು ತಾನಾಗಿಯೇ ಪ್ರಕಟವಾಗುತ್ತದೆ. ಕ್ರೋಧದ ಅಭಾವದಿಂದ ಕ್ಷಮಾಗುಣವು ಪ್ರಕಟವಾಗುತ್ತದೆ, ಮಾನದ ಅಭಾವದಿಂದ ಮಾರ್ದವ ಗುಣವು ಪ್ರಕಟವಾಗುತ್ತದೆ, ಮಾಯೆಯ ಅಭಾವದಿಂದ ಆರ್ಜವ ಗುಣವು ಪ್ರಕಟವಾಗುತ್ತದೆ, ಲೋಭದ ಅಭಾವದಿಂದ ಶೌಚ ಗುಣವು ಪ್ರಕಟವಾಗುತ್ತದೆ, ಅಸತ್ಯದ ಅಭಾವದಿಂದ ಸತ್ಯಗುಣವು ಪ್ರಕಟವಾಗುತ್ತದೆ, ಕಷಾಯಗಳ ಅಭಾವದಿಂದ ಸಂಯಮ ಗುಣವು ಪ್ರಕಟವಾಗುತ್ತದೆ, ಇಚ್ಛೆಯ ಅಭಾವದಿಂದ ತಪಗುಣವು ಪ್ರಕಟವಾಗುತ್ತದೆ, ಪರದಲ್ಲಿ ಮಮತೆಯ ಅಭಾವದಿಂದ ತ್ಯಾಗ ಗುಣವು ಪ್ರಕಟವಾಗುತ್ತದೆ, **ಪರದ್ರವ್ಯಗಳಿಂದ ಭಿನ್ನವಿರುವ ತನ್ನ ಆತ್ಮನ ಅನುಭವವಾಗುವುದರಿಂದ ಆಕಿಂಚನ್ಯ ಗುಣವು ಪ್ರಕಟವಾಗುತ್ತದೆ,** ವೇದದ ಅಭಾವದಿಂದ ಆತ್ಮ ಸ್ವರೂಪದಲ್ಲಿ ಪ್ರವೃತ್ತಿ ಮಾಡುವುದರಿಂದ ಬ್ರಹ್ಮಚರ್ಯ ಗುಣವು ಪ್ರಕಟವಾಗುತ್ತದೆ.

**ಧರ್ಮದ ಸ್ವರೂಪ :** ಈ ಹತ್ತು ಪ್ರಕಾರದ ಧರ್ಮವು ಆತ್ಮನ ಸ್ವಭಾವವಿದೆ. ಈ ಧರ್ಮವು ಯಾವನೋ ಕದಿಯುವಂಥವನಿಂದ ಕದಿಯಲಾಗುವುದಿಲ್ಲ, ದೋಚಿಕೊಳ್ಳುವಂಥವನಿಂದ ದೋಚಿಕೊಳ್ಳಲಾಗುವುದಿಲ್ಲ, ಕಳ್ಳನಿಂದ ಅಪಹರಿಸಿಕೊಂಡು ಹೋಗಲಾಗುವುದಿಲ್ಲ, ದೊರೆಯಿಂದ ಲೂಟಿ ಮಾಡಲಾಗುವುದಿಲ್ಲ, ಸ್ವದೇಶ-ಪರದೇಶದಲ್ಲಿ ಇದರ ಸ್ವರೂಪವೆಂದೂ ಬದಲಾಗುವುದಿಲ್ಲ, ಯಾರಾದರೂ ಕೆಡಸುವುದರಿಂದ ಕೆಟ್ಟು ಹೋಗುವುದಿಲ್ಲ, ಧನದಿಂದ ಕೊಂಡುಕೊಳ್ಳಲಾಗುವುದಿಲ್ಲ, ಆಕಾಶದಲ್ಲಿ, ಪಾತಾಳದಲ್ಲಿ, ಜಲದಲ್ಲಿ, ನೆಲದಲ್ಲಿ, ಪರ್ವತದಲ್ಲಿ, ತೀರ್ಥದಲ್ಲಿ, ಮಂದಿರದಲ್ಲಿ ಎಲ್ಲಿಯೂ ಧರ್ಮವನ್ನು ಇಡಲಾಗಿಲ್ಲ, ಧರ್ಮವಂತೂ ಆತ್ಮನ ನಿಜ ಸ್ವಭಾವವಿದೆ. **ಧರ್ಮದ ಲಾಭವು-ಪ್ರಾಪ್ತಿಯು ಸಮ್ಯಕ್ ಜ್ಞಾನ-ಸಮ್ಯಕ್ ಶ್ರದ್ಧೆಯಿಂದ ಆಗುತ್ತದೆ.**

**ಧರ್ಮ ಮಾಡುವುದು ಎಷ್ಟು ಸುಲಭವಿದೆಯೆಂದರೆ** ಬಾಲಕ- ಯುವಕ- ವೃದ್ಧ, ಧನವಂತ- ನಿರ್ಧನ, ಬಲಶಾಲಿ- ನಿರ್ಬಲ, ಸಹಾಯಸಹಿತ-ಸಹಾಯರಹಿತ, ರೋಗೀ-ನಿರೋಗಿ ಎಲ್ಲರಿಂದಲೂ ಧಾರಣ ಮಾಡಲಾಗುತ್ತದೆ, ಸ್ವಾಧೀನವಿದೆ. ಧರ್ಮವನ್ನು ಧಾರಣ ಮಾಡುವಲ್ಲಿ ಯಾವುದೇ ಖೇದ, ಕ್ಲೇಶ, ಅಪಮಾನ, ಭಯ, ವಿಷಾದ, ಕಲಹ, ಶೋಕ, ದುಃಖಗಳೆಂದೂ ಆಗುವುದಿಲ್ಲ, ಧರ್ಮಧಾರಣ ಮಾಡುವುದು ದುರ್ಲಭವಲ್ಲ. ಅದರಲ್ಲಿ ಯಾವ ಭಾರವನ್ನೂ ಹೊರಬೇಕಾಗಿಲ್ಲ, ದೂರ ದೇಶದಲ್ಲಿ ಹೋಗಬೇಕಿಲ್ಲ ಕ್ಷುಧೆ, ತೃಷೆ, ಶೀತ, ಉಷ್ಣತೆಯ ವೇದನೆಯನ್ನು ಸಹಿಸುವುದಿಲ್ಲ, ಯಾರೊಡನೆ ವಿಸಂವಾದ-ಕಲಹವಿಲ್ಲ, **ಅತ್ಯಂತ ಸುಲಭ, ಸಮಸ್ತ ದುಃಖ, ಕ್ಲೇಶಗಳಿಂದ ರಹಿತ ಸ್ವಾಧೀನ ಆತ್ಮನ ನಿಜ ಪರಿಣಮನವೇ ಇದೆ.** ಆದುದರಿಂದ ಸಮಸ್ತ ಸಂಸಾರದ ಪರಿಭ್ರಮಣದಿಂದ ಬಿಡುಗಡೆಯಾಗಿ ಅನಂತದರ್ಶನ, ಜ್ಞಾನ, ಸುಖ, ವೀರ್ಯ ಧಾರಕವಾದ ಸಿದ್ಧದಶೆಯು ಈ ಧರ್ಮವನ್ನು ಧಾರಣ ಮಾಡುವುದರ ಫಲವಿದೆ. ಈ ಪ್ರಕಾರ ಸಂಕ್ಷೇಪದಲ್ಲಿ ದಶಲಕ್ಷಣ ಧರ್ಮದ ವರ್ಣನೆ ಮಾಡಲಾಯಿತು.

**ವ್ರತಿಯ ಸ್ವರೂಪ :** ಯಾವನಿಗೆ ಶಲ್ಯಗಳ ಅಭಾವವಾಗಿ ಹೋಗುತ್ತವೆ ಅವನು ವ್ರತಿಯಿದ್ದಾನೆ. ಶಲ್ಯ ಸಹಿತನಿಗೆಂದೂ ವ್ರತಗಳಾಗುವುದಿಲ್ಲ, ಆದುದರಿಂದ ಶ್ರಾವಕರು ಮೂರು ಶಲ್ಯಗಳ ಸ್ವರೂಪವನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು. ನಿದಾನ ಶಲ್ಯ, ಮಾಯಾಶಲ್ಯ, ಮಿಥ್ಯಾದರ್ಶನಶಲ್ಯವೆಂದು ಈ ಮೂರು ಶಲ್ಯಗಳು ವ್ರತಗಳ ಘಾತ ಮಾಡುವಂಥವುಗಳಿವೆ.

**ನಿದಾನ ಶಲ್ಯ :** ನಿದಾನ ಶಲ್ಯದಲ್ಲಿ ಪ್ರಶಸ್ತನಿದಾನ, ಅಪ್ರಶಸ್ತನಿದಾನ, ಭೋಗಾರ್ಥನಿದಾನವೆಂದು ಮೂರು ಭೇದಗಳಿದ್ದು ಇವು ಮೂರು ಪ್ರಕಾರದ ನಿದಾನಗಳು ಸಂಸಾರದ ಕಾರಣವಿವೆ. ಇಲ್ಲಿ ನಿದಾನದ ಅರ್ಥವು ಭವಿಷ್ಯಕಾಲದ ಇಚ್ಛೆಯಿದೆ. ಸಂಯಮ ಧಾರಣ ಮಾಡುವ ಸಲುವಾಗಿ ಉತ್ತಮ ಕುಲ, ಉತ್ತಮ ಸಂಹನನ, ಉತ್ತಮ ಬಲ, ಉತ್ತಮ ವೀರ್ಯ, ಶುಭ ಸಂಗತಿ ಮತ್ತು ಧರ್ಮದಲ್ಲಿ ಬಂಧು ಜನರ ಸಹಾಯತೆ, ಉಜ್ವಲ ಬುದ್ಧಿ ಮೊದಲಾದವುಗಳ ಅಪೇಕ್ಷೆಯು ಅದು **ಪ್ರಶಸ್ತನಿದಾನ**ವಿದೆ.

ಅಭಿಮಾನದ ಸಲುವಾಗಿ ತನ್ನ ಆಜ್ಞೆ, ಆದರ ಹಾಗೂ ಉಚ್ಚತೆ ತೋರಿಸುವ ಸಲುವಾಗಿ ಉತ್ತಮಕುಲ, ಜಾತಿ, ಒಳ್ಳೆಯ ಬುದ್ಧಿ,ಪ್ರಬಲ ಶಕ್ತಿ ಮತ್ತು ಆಚಾರ್ಯತನ, ಗಣಧರತನ, ತೀರ್ಥಂಕರತನ ಇತ್ಯಾದಿಗಳ ಅಪೇಕ್ಷೆ ಮಾಡುವುದು ಅದು ಅಪ್ರಶಸ್ತ ನಿದಾನವಿದೆ.ಕ್ರೋಧಿಯಾಗಿ ಇತರರನ್ನು ಕೊಲ್ಲುವ ಇಚ್ಛೆ ಮಾಡುವುದು, ಇತರರ ಸ್ತ್ರೀ, ಪುತ್ರ, ರಾಜ್ಯ, ಐಶ್ವರ್ಯಗಳ ನಾಶದ ಇಚ್ಛೆ ಮಾಡುವುದು ಅದು ಕೂಡ **ಅಪ್ರಶಸ್ತನಿದಾನ**ವಿದೆ.

ಸಂಯಮ ಧಾರಣ ಮಾಡಿ ಮತ್ತು ಘೋರತರವಾದ ತಪಶ್ಚರ್ಯ ಮಾಡಿ ಅದರ ಫಲದಲ್ಲಿ ಇಂದ್ರಿಯಗಳ ವಿಷಯ, ರಾಜ್ಯ, ಐಶ್ವರ್ಯ, ಸ್ವರ್ಗದಲ್ಲಿಯ ದೇವತನ, ಅನೇಕ ಅಪ್ಸರೆಯರ ಸ್ವಾಮೀತನ, ಜಾತಿ-ಕುಲದಲ್ಲಿ ಉಚ್ಚತನ, ಚಕ್ರವರ್ತಿತ್ವ ಮೊದಲಾದವುಗಳ ಅಪೇಕ್ಷೆ ಮಾಡುವುದು ಅದು **ಭೋಗಾರ್ಥನಿದಾನ**ವಿದೆ. ಈ ನಿದಾನವು ದೀರ್ಘಕಾಲದವರೆಗೆ ಸಂಸಾರದಲ್ಲಿ ಪರಿಭ್ರಮಣ ಮಾಡಿಸುವಂಥದ್ದಿದೆಯೆಂದು ತಿಳಿಯುವುದು.

ಸಂಯಮದ ಪ್ರಭಾವದಿಂದ ಸಮಸ್ತ ಕರ್ಮಗಳ ನಾಶವಾಗಿ ಅತೀಂದ್ರಿಯ ಅವಿನಾಶೀ ನಿರ್ವಾಣದ ಅನಂತ ಸುಖವು ಪ್ರಾಪ್ತವಾಗುತ್ತದೆ. ಆ ಸಂಯಮದ ಪಾಲನೆ ಮಾಡಿ ಭೋಗಗಳ ಇಚ್ಛೆ ಮಾಡುವುದೆಂದರೆ ಯಾವ ಪ್ರಕಾರ ಓರ್ವನು ಚಿಂತಾಮಣಿ ರತ್ನವನ್ನು ಒಂದು ಕವಡೆಗೆ ಮಾರಿ ಬಿಡುತ್ತಾನೆ, ತನ್ನ ರತ್ನಗಳಿಂದ ತುಂಬಿ ಸಮುದ್ರದಲ್ಲಿ ಹೋಗುತ್ತಿರುವ ನೌಕೆಯನ್ನು ಸೌದೆಯ ಸಲುವಾಗಿ ಒಡೆಯುತ್ತಾನೆ, ದಾರದ ಸಲುವಾಗಿ ರತ್ನಗಳ ಮಾಲೆಯನ್ನು ಕತ್ತರಿಸುತ್ತಾನೆ, ಬೂದಿಯ ಸಲುವಾಗಿ ಗೋಶೀರ್ಷ ಚಂದನವನ್ನು ಸುಟ್ಟು ಹಾಕುತ್ತಾನೆ, ಅದೇ ಪ್ರಕಾರದ ಮೂರ್ಖತೆಯಿದೆ. **ಭೋಗಗಳ ಇಚ್ಛೆ ಮಾಡುವಂಥವನ ಪುಣ್ಯವು ಕೂಡ ನಷ್ಟವಾಗಿ ಹೋಗುತ್ತದೆ.** ಮತ್ತು ಪಾಪದ ಬಂಧವಾಗುತ್ತದೆ. ಪುಣ್ಯದ ಬಂಧವಂತೂ ಇಚ್ಛಾರಹಿತ ಭಾವದಿಂದ ಆಗುತ್ತದೆ.

ಸಮ್ಯಗ್ದೃಷ್ಟಿಯಂತೂ ಭೋಗಗಳ ಇಚ್ಛೆಯಿಂದ ರಹಿತನಿರುತ್ತಾನೆ. ಅವನಿಗಂತೂ ಇಂದ್ರ-ಅಹಮಿಂದ್ರ ಲೋಕದ ಸುಖವು ಕೂಡ ಸುಖಾಭಾಸ, ವಿನಾಶಶೀಲ, ಪರಾಧೀನ, ದುಃಖರೂಪವಾಗಿ ಕಂಡು ಬರುತ್ತದೆ. ಸಮ್ಯಗ್ದೃಷ್ಟಿಗಂತೂ ಆತ್ಮಿಕ, ಸ್ವಾಧೀನ, ಅತೀಂದ್ರಿಯ ಸುಖದ ಅನುಭವವಾಗಿರುವುದರಿಂದ ಅವನು ಇಂದ್ರಿಯಜನಿತ ಬೇಗೆಯಿಂದ, ಮಹಾಕ್ಲೇಶದಿಂದ ತುಂಬಿದ ತೃಷ್ಣೆಯ ರೂಪದ ಬೇಗೆಯನ್ನು ವೃದ್ಧಿಸುವಂಥ ವಿಷಯಾಧೀನ ಸುಖವನ್ನು ಸುಖವೆಂದು ಹೇಗೆ ಮನ್ನಿಸುವನು? **ಅಮೃತದ ಸ್ವಾದ ಸವಿದವನು ಕಟುಕ ಮಹಾದುರ್ಗಂಧಿತ ಬೇಗೆಯನ್ನುತ್ಪನ್ನಮಾಡುವಂಥ ಕಹಿ ಹಿಂಡಿಯ ಇಚ್ಛೆಯನ್ನು ಹೇಗೆ ಮಾಡುವನು ?**

ಸಮ್ಯಗ್ದೃಷ್ಟಿಗಂತೂ ಎಂಥ ಇಚ್ಛೆಯಿರುತ್ತದೆಯೆಂಬುದನ್ನು ಭಗವತೀ ಆರಾಧನೆಯಲ್ಲಿ ಹೇಳುತ್ತಾರೆ, -

**ದುಕ್ಖಕ್ಖಯ ಕಮ್ಮಕ್ಖಯ ಸಮಾಹಿಮರಣಂ ಚ ಬೋಹಿಲಾಹೋ ಯ ।**
**ಏಯಂ ಪತ್ಥೇಯವ್ವಂ ಣ ಪತ್ಥಣೀಯಂ ತಓ ಅಣ್ಣಂ ॥೧೨೧೯॥**

**ಅರ್ಥ :-** ನಮ್ಮ ಶರೀರಧಾರಣ ಮೊದಲಾದ, ಜನ್ಮ-ಮರಣ-ಕ್ಷುಧೆ-ತೃಷೆ ಮೊದಲಾದ ದುಃಖಗಳ ಕ್ಷಯವಾಗಲಿ, ನಮ್ಮ ಆತ್ಮನ ಗುಣಗಳನ್ನು ನಷ್ಟಮಾಡುವಂಥ ಮೋಹನೀಯ, ಜ್ಞಾನಾವರಣ, ದರ್ಶನಾವರಣ, ಅಂತರಾಯ ಕರ್ಮಗಳ

ಕ್ಷಯವಾಗಲಿ, ಈ ಪರ್ಯಾಯದಲ್ಲಿ ನಾಲ್ಕು ಆರಾಧನೆಗಳನ್ನು ಧಾರಣ ಮಾಡಿ, ಸಮಾಧಿಪೂರ್ವಕ ಮರಣವಾಗಲಿ, ಬೋಧಿ ಎಂದರೆ ರತ್ನತ್ರಯದ ಪ್ರಾಪ್ತಿಯಾಗಲೆಂದು ಸಮ್ಯಗ್ದೃಷ್ಟಿಯು ಯೋಗ್ಯ ಪ್ರಾರ್ಥನೆ ಮಾಡುತ್ತಾನೆ. ಇದರಿಂದ ಭಿನ್ನ ಅನ್ಯ ಪ್ರಕಾರದ ಪ್ರಾರ್ಥನೆಯನ್ನು ಈ ಭವದ ಸಲುವಾಗಿ ಅಥವಾ ಪರಭವದ ಸಲುವಾಗಿ ಮಾಡುವುದು ಯೋಗ್ಯವಿಲ್ಲ.

ಜೀವನು ಸಂಸಾರದಲ್ಲಿ ಪರಿಭ್ರಮಣ ಮಾಡುತ್ತ ಉಚ್ಚಕುಲ-ನೀಚಕುಲ, ರಾಜ್ಯ-ಐಶ್ವರ್ಯ, ಧನಾಢ್ಯತೆ-ನಿರ್ಧನತೆ, ದೀನತೆ, ರೋಗೀ-ನಿರೋಗೀತನ, ಸುರೂಪತೆ-ವಿರೂಪತೆ, ನಿರ್ಬಲತೆ-ಬಲವಂತತೆ, ಪಾಂಡಿತ್ಯತನ-ಮೂರ್ಖತನ, ಯಜಮಾನತೆ-ಸೇವಕತನ, ದೊರೆತನ-ದರಿದ್ರತನ, ಗುಣವಂತತೆ-ನಿರ್ಗುಣತೆಗಳನ್ನು ಅನಂತಾನಂತ ಬಾರಿ ಪಡೆದಿದ್ದಾನೆ ಮತ್ತು ಬಿಟ್ಟುಕೊಟ್ಟಿದ್ದಾನೆ. ಆದ್ದರಿಂದ ಸಮ್ಯಗ್ದೃಷ್ಟಿಯು ಇಂಥ ಕ್ಲೇಶರೂಪ ಸಂಯೋಗ-ವಿಯೋಗರೂಪ ಸಂಸಾರದ ನಿದಾನವನ್ನು ಹೇಗೆ ಮಾಡುವನು ?

ಈ ಸಂಸಾರದಲ್ಲಿ ಯಾವಾಗ ದುಃಖದ ಅನಂತ ಪರ್ಯಾಯಗಳು ಪ್ರಾಪ್ತವಾಗುತ್ತವೆ ಆಗ ಇಂದ್ರಿಯಜನ್ಯ ಸುಖದ ಒಂದು ಪರ್ಯಾಯವು ಪ್ರಾಪ್ತವಾಗುತ್ತದೆ, ಪುನಃ ಅನಂತ ಬಾರಿ ದುಃಖದ ಪರ್ಯಾಯಗಳು ಪ್ರಾಪ್ತವಾಗುತ್ತವೆ. ಈ ಪ್ರಕಾರ ಪರಿವರ್ತನ ಮಾಡುತ್ತ ಇಂದ್ರಿಯಜನಿತ ಸುಖವನ್ನೂ ಅನಂತಬಾರಿ ಪಡೆಯಲಾಗಿದೆ. ಈಗ ಸಮ್ಯಗ್ದೃಷ್ಟಿಯಾಗಿ ಇಂದ್ರಿಯಗಳ ಸುಖದ ಇಚ್ಛೆಯನ್ನು ಹೇಗೆ ಮಾಡುವುದು ?

**ಈ ಸಂಸಾರದಲ್ಲಿ ಸ್ವಯಂಭೂ ರಮಣಸಮುದ್ರದ ಸಮಸ್ತ ಜಲದ ಬರಾಬರಿಯಾಗಿ ದುಃಖವಿದೆ, ಮತ್ತು ಒಂದು ಕೂದಲೆಳೆಯ ತುದಿಯ ಮೇಲೆ ಎಷ್ಟು ಜಲ ನಿಲ್ಲುತ್ತದೆ ಅದರ ಅನಂತ ಭಾಗ ಮಾಡಿದ ಮೇಲೆ ಅದರೊಳಗಿಂದ ಒಂದು ಭಾಗದ ಬರಾಬರಿಯಾಗಿ ಇಂದ್ರಿಯ ಜನ್ಯ ಸುಖವಿದೆ.** ಆದರಿಂದ ತೃಪ್ತಿ ಹೇಗಾಗುವುದು ? ಭೋಗಗಳ ಸಂಯೋಗ ಹಾಗೂ ಸಂಪತ್ತದ ಸಂಯೋಗದ ಸುಖವೆಷ್ಟಾಗುತ್ತದೆ ಆದರಿಂದ ಅಸಂಖ್ಯಾತಗುಣಿತ ದುಃಖವು ಅದರ ವಿಯೋಗದ ಸಮಯದಲ್ಲಿ ಆಗುತ್ತದೆ. ಯಾವುದರ **ಸಂಯೋಗವಾಗುತ್ತದೆ ನಿಯಮದಿಂದ ಅದರ ವಿಯೋಗವು ಆಗಿಯೇ ಆಗುತ್ತದೆ.**

ಯಾವ ಪ್ರಕಾರ ಜೇನುತುಪ್ಪದಿಂದ ಲೇಪಿಸಿದ ಕರವಾಳದ ಧಾರೆಯನ್ನು ಯಾವನು ನಾಲಿಗೆಯಿಂದ ನೆಕ್ಕುತ್ತಾನೆ ಅವನಿಗೆ ಎಷ್ಟು ಸಮಯದ ಸ್ಪರ್ಶವಿದೆ ಅಷ್ಟು ಸಮಯ ಸಿಹಿಯ ಸುಖವಾಗುತ್ತದೆ, ಆದರೆ ನಾಲಿಗೆ ಕತ್ತರಿಸಿ ಬೀಳುವುದರಿಂದ ಅದರ ಮಹಾದುಃಖವು ಅಧಿಕ ಸಮಯದವರೆಗೆ ಆಗುತ್ತದೆ; ಅದೇ ಪ್ರಕಾರ ವಿಷಯಗಳ ಸಂಯೋಗದ ಸುಖವನ್ನು ತಿಳಿಯುವುದು. ಯಾವ ಪ್ರಕಾರ ಕಿಂಪಾಕಫಲವು ನೋಡಲು ಸುಂದರವಿದೆ, ತಿನ್ನುವಲ್ಲಿ ಸಿಹಿಯಿದೆ, ಆದರೆ ನಂತರ ಪ್ರಾಣದ ನಾಶ ಮಾಡಿಬಿಡುತ್ತದೆ, ವಿಷಮಿಶ್ರಿತ ಲಡ್ಡು ತಿನ್ನುವುದರಲ್ಲಂತೂ ಸಿಹಿಯಿದೆ, ಆದರೆ ನಂತರ ಪಚನವಾದ ಮೇಲೆ ಮಹಾದುಃಖವಿತ್ತು ಪ್ರಾಣದ ನಾಶ ಮಾಡುತ್ತದೆ. ಅದೇ ಪ್ರಕಾರ ಭೋಗಜನಿತ ಸುಖವನ್ನು ತಿಳಿಯುವುದು.

ಯಾವ ಪ್ರಕಾರ ಒಬ್ಬ ಮನುಷ್ಯನ ಹತ್ತಿರ ಅಧಿಕ ಧನವಿದ್ದು, ಅವನು ಆ ಅಧಿಕ ಧನಕ್ಕೆ ಪ್ರತಿಯಾಗಿ ಅಲ್ಪ ಧನ ಪಡೆಯಲಿಚ್ಛಿಸಿದರೆ ಸ್ವಲ್ಪ ಧನ ಸಿಕ್ಕು ಬಿಡುತ್ತದೆ. ಆದರೆ ಅವನ ಹತ್ತಿರ ಸ್ವಲ್ಪ ಧನವಿದ್ದು, ಅದಕ್ಕೆ ಪ್ರತಿಯಾಗಿ ಅವನು ಅಧಿಕ ಧನ ಪಡೆಯಲಪೇಕ್ಷಿಸಿದರೆ ದೊರಕುವುದಿಲ್ಲ. ಅದೇ ಪ್ರಕಾರ ಒಬ್ಬನು ಸ್ವರ್ಗದ ಅಧಿಕ ಸಂಪತ್ತು ಪ್ರಾಪ್ತವಾಗಲು ಯೋಗ್ಯವಾದ ಪುಣ್ಯ ಕಟ್ಟಿಕೊಳ್ಳುತ್ತಾನೆ, ನಂತರ ನಿದಾನದಿಂದ (ಸ್ವಲ್ಪ ಸಂಪತ್ತನ್ನು) ಬೇಡಿಕೊಂಡರೆ ಅವನಿಗೆ ಈ ಲೋಕದಲ್ಲಿ ರಾಜ್ಯ ಸಂಪತ್ತು ದೊರಕುತ್ತದೆ, ವ್ಯಂತರ ಮೊದಲಾದ ದೇವಗಳಲ್ಲಿ ಉತ್ಪನ್ನನಾಗುತ್ತಾನೆ.

**ನಿದಾನ ಶಲ್ಯ :** ಒಂದು ವೇಳೆ ತಮ್ಮದು ಅಧಿಕ ಪುಣ್ಯವಿದ್ದರೆ ನಿದಾನ ಮಾಡುವುದರಿಂದ ಅದರ ಘಾತವಾಗಿ ತುಚ್ಛ ಸಂಪತ್ತು ಪ್ರಾಪ್ತವಾಗಿ ಬಿಡುತ್ತದೆ, ಅನಂತರ ಸಂಸಾರದಲ್ಲಿ ಪರಿಭ್ರಮಣ ಮಾಡುವುದೇ ನಿದಾನದ ಫಲವಿದೆ. ಯಾವ ಪ್ರಕಾರ ಉದ್ದವಾದ ದಾರದಿಂದ ಕಟ್ಟಿಬಿಟ್ಟ ಪಕ್ಷಿಯು ದೂರದವರೆಗೆ ಹಾರಿ ಹೋದರೂ ಕೂಡ ಮರಳಿ ಅದೇ ಸ್ಥಾನದಲ್ಲಿ ಬಂದುಬಿಡುತ್ತದೆ, ಅದು ದೂರದವರೆಗೆ ಹಾರಿ ಹೋಗುವುದರಿಂದ ಲಾಭವೇನಾಯಿತು. ? ಕಾಲುಗಳನ್ನಂತೂ ದಾರದಿಂದ ಕಟ್ಟಿಬಿಡಲಾಗಿದೆ.

ಬೇರೆಡೆ ಹೋಗುವ ಸಾಧ್ಯತೆಯಿಲ್ಲ. ಅದೇ ಪ್ರಕಾರ ನಿದಾನ ಮಾಡುವಂಥವನು ಹೆಚ್ಚುದೂರ ಸ್ವರ್ಗ ಮೊದಲಾದುವಲ್ಲಿ ಮಹರ್ದಿಕ ದೇವನಾಗಿ ಹೋದರೂ ಕೂಡ ಸಂಸಾರದಲ್ಲಿಯೇ ಪರಿಭ್ರಮಣ ಮಾಡುವನು. ದೇವಲೋಕದಲ್ಲಿ ಹೋದರೂ ಕೂಡ ನಿದಾನದ ಪ್ರಭಾವದಿಂದ ಏಕೇಂದ್ರಿಯ ತಿರ್ಯಂಚಗಳಲ್ಲಿ ಪಂಚೇಂದ್ರಿಯ ತಿರ್ಯಂಚಗಳಲ್ಲಿ ಮತ್ತು ಮನುಷ್ಯರಲ್ಲಿ ಜನ್ಮ ತಾಳಿ ಪಾಪದ ಸಂಚಯ ಮಾಡಿ ಬಹಳಷ್ಟು ಕಾಲದವರೆಗೆ ಪರಿಭ್ರಮಣ ಮಾಡುತ್ತಾನೆ.

ಯಾವ ಪ್ರಕಾರ ಋಣಿಯಿರುವ ಕೈದಿಯು ಜೈಲರನಿಂದ ಅವಧಿ ಪಡೆದು ಕೆಲ ಸಮಯದ ಸಲುವಾಗಿ ಜೈಲಿನಿಂದ ಬಿಡುಗಡೆಯಾಗಿ ತನ್ನ ಮನೆಯಲ್ಲಿ ಬಂದು ಸುಖದಿಂದ ಇರುತ್ತಾನೆ, ಆದಾಗ್ಯೂ ಅವಧಿಯ ಸಮಯವು ಪೂರ್ಣವಾದ ಮೇಲೆ ಮರಳಿ ಜೈಲಿನಲ್ಲಿ ಹೋಗಿ ಇರಬೇಕಾಗುತ್ತದೆ; ಅದೇ ಪ್ರಕಾರ ನಿದಾನ ಸಹಿತನಾದ ಪುರುಷನೂ ತಪ-ಸಂಯಮದಿಂದ ಪುಣ್ಯಕಟ್ಟಿಕೊಂಡು ಸ್ವರ್ಗಲೋಕದಲ್ಲಿ ಹೊರಟು ಹೋಗುತ್ತಾನೆ, ಅಲ್ಲಿಯ ಆಯುಷ್ಯ ಪೂರ್ಣಮಾಡಿ ಸ್ವರ್ಗದಿಂದ ಚ್ಯುತನಾಗಿ ಪುನಃ ಸಂಸಾರದಲ್ಲಿಯೇ ಪರಿಭ್ರಮಣ ಮಾಡುತ್ತಾನೆ.

ಯಾವನು ಮುನಿತನದಲ್ಲಿ, ಶ್ರಾವಕತನದಲ್ಲಿ ಮಂದಕಷಾಯದ ಪ್ರಭಾವದಿಂದ ಮತ್ತು ತಪಶ್ಚರಣದ ಪ್ರಭಾವದಿಂದ ಅಹಮಿಂದ್ರದಲ್ಲಿ ಹಾಗೂ ಸ್ವರ್ಗದಲ್ಲಿ ಉತ್ಪನ್ನವಾಗುವ ಪುಣ್ಯ ಸಂಚಯ ಮಾಡಿರುತ್ತಾನೆ, ಅನಂತರ ಅವನು ಭೋಗದ ಇಚ್ಛಾರೂಪದ ನಿದಾನ ಮಾಡಿದರೆ ಭವನತ್ರಿಕ ಮೊದಲಾದ ಅಶುಭ ದೇವಗಳಲ್ಲಿ ಉತ್ಪನ್ನನಾಗಿ ಹೋಗುತ್ತಾನೆ. ಒಬ್ಬನಿಗೆ ಅಧಿಕ ಪುಣ್ಯವಿದ್ದು, ಅವನು ಅಲ್ಪ ಪುಣ್ಯದ ಫಲಕ್ಕೆ ಯೋಗ್ಯವಾದ ನಿದಾನ ಮಾಡುತ್ತಿದ್ದರೆ ಅಲ್ಪ ಪುಣ್ಯವುಳ್ಳ ದೇವ-ಮನುಷ್ಯದಲ್ಲಿ ಉತ್ಪನ್ನನಾಗಿ ಬಿಡುತ್ತಾನೆ, ಅಧಿಕ ಪುಣ್ಯವುಳ್ಳ ದೇವ-ಮನುಷ್ಯರಲ್ಲಿ ಉತ್ಪನ್ನನಾಗುವುದಿಲ್ಲ, ಯಾವನು ನಿರ್ವಾಣ ಸುಖವನ್ನು ಹಾಗೂ ಸ್ವರ್ಗಾದಿಗಳ ಸುಖವನ್ನು ಕೊಡುವಂಥ ಮುನಿ-ಶ್ರಾವಕರ ಉತ್ತಮ ಧರ್ಮವನ್ನು ಧಾರಣ ಮಾಡಿ ಅದನ್ನು ನಿದಾನ ಮಾಡಿ ಕೆಡಿಸುತ್ತಾನೆ. ಅವನು ಸೌದೆಯ ಸಲುವಾಗಿ ಕಲ್ಪವೃಕ್ಷವನ್ನು ಕತ್ತರಿಸಿ ಹಾಕಿದಂತೆಯೇ ಇದೆ. ಈ ಪ್ರಕಾರ ನಿದಾನ ಶಲ್ಯದ ದೋಷಗಳ ವರ್ಣನೆ ಮಾಡಲಾಯಿತು.

**ಮಾಯಾಶಲ್ಯ :** ಮಾಯಾಶಲ್ಯದ ದೋಷಗಳ ವರ್ಣನೆಯನ್ನು ಯಾರು ಮಾಡುವ ಸಾಧ್ಯತೆಯಿದೆ ? ಮಾಯಾಚಾರದ ದೋಷವನ್ನು ಈ ಮೊದಲು ಹೇಳಲಾಗಿದೆ. ಮಾಯಾಚಾರಿಯ ವ್ರತ, ಶೀಲ, ಸಂಯಮಗಳೆಲ್ಲವು ಭ್ರಷ್ಟವಿವೆ. ಯಾರು ಜಿನೇಂದ್ರ ಭಗವಂತರು ಹೇಳಿದ ಧರ್ಮದ ಧಾರಣ ಮಾಡಿ ತಮ್ಮ ಆತ್ಮನನ್ನು ದುರ್ಗತಿಗಳ ದುಃಖಗಳಿಂದ ರಕ್ಷಿಸ ಬಯಸುತ್ತಿದ್ದರೆ ಅವರು ಮಾಯಾ ಶಲ್ಯವನ್ನು ತಮ್ಮ ಹೃದಯದಿಂದ ತೆಗೆದು ಹಾಕುವುದೇ ಕೋಟ್ಯಂತರ ಉಪದೇಶಗಳ ಸಾರವಿದೆ ; ಯಶಸ್ಸು ಮತ್ತು ಧರ್ಮ ಇವೆರಡರ ನಾಶ ಮಾಡುವಂಥ ಮಾಯಾಚಾರದ ತ್ಯಾಗ ಮಾಡಿ, ಸರಳತೆಯನ್ನು ಅಂಗೀಕಾರ ಮಾಡಬೇಕಾಗುವುದು.

**ಮಿಥ್ಯಾದರ್ಶನ ಶಲ್ಯ :** ಮಿಥ್ಯಾತ್ವದ ವರ್ಣನೆ ಮೊದಲು ಮಾಡಲಾಗಿದೆ, **ಅದುವೇ ಸಮಸ್ತ ಸಂಸಾರದ ಬೀಜವಿದೆ. ಮಿಥ್ಯಾತ್ವದ ಪ್ರಭಾವದಿಂದ ಅನಂತಾನಂತ ಪರಿವರ್ತನೆ ಮಾಡಲಾಗಿದೆ. ಮಿಥ್ಯಾತ್ವದ ವಿಷವನ್ನು ವಮನ ಮಾಡಿದಲ್ಲದೆ ಸತ್ಯ ಧರ್ಮದಲ್ಲಿ ಪ್ರವೇಶವೇ ಆಗುವುದಿಲ್ಲ.** ಆದ್ದರಿಂದ ಮಿಥ್ಯಾತ್ವದ ಶಲ್ಯವನ್ನು ಕೂಡಲೇ ತ್ಯಜಿಸಬೇಕು. ಮಾಯೆ, ಮಿಥ್ಯಾತ್ವ ನಿದಾನ-ಈ ಮೂರು ಶಲ್ಯಗಳ ಅಭಾವವಾದಲ್ಲದೆ ಮುನಿ-ಶ್ರಾವಕ ಧರ್ಮವೆಂದೂ ಆಗುವುದಿಲ್ಲ. **ನಿಶಲ್ಯನೇ ವ್ರತಿಯಾಗುತ್ತಾನೆ.**

**ಕುಸಂಗತಿ ತ್ಯಾಗದ ಪ್ರೇರಣೆ :-** ದುಷ್ಟ ಜನರ ಸಂಗತಿ ಮಾಡಬೇಡಿರಿ. ಯಾರ ಸಂಗತಿಯಿಂದ ಪಾಪದಲ್ಲಿ ಗ್ಲಾನಿಯೆನಿಸುವುದಿಲ್ಲ, ಪಾಪದಲ್ಲಿ ಪ್ರವೃತ್ತಿಯಾಗುತ್ತದೆ ಅಂಥವರಸಂಗತಿಯನ್ನೆಂದೂ ಮಾಡಬಾರದು. ಜೂಜುಗಾರ, ಕಳ್ಳ, ಕಪಟಿ, ಪರಸ್ತ್ರೀ ಲಂಪಟ, ಜಿಹ್ವೇಂದ್ರಿಯದ ಲೋಲುಪಿ, ಕುಲಾಚಾರದಿಂದ ಭ್ರಷ್ಟ, ವಿಶ್ವಾಸಘಾತಕ, ಮಿತ್ರದ್ರೋಹಿ, ಗುರುದ್ರೋಹಿ, ಧರ್ಮದ್ರೋಹಿ, ಅಪಯಶದ ಭಯದಿಂದ ರಹಿತ, ನಿರ್ಲಜ್ಜ, ಪಾಪಕ್ರಿಯೆಯಲ್ಲಿ ನಿಪುಣ, ವ್ಯಸನೀ,

ಅಸತ್ಯವಾದಿ, ಅಸಂತೋಷಿ, ಅತಿಲೋಭೀ, ಅತಿನಿರ್ದಯೀ, ಕರ್ಕಶ ಪರಿಣಾಮಿ, ಕಲಹಪ್ರಿಯ, ವಿಸಂವಾದೀ, ದುರಾಚಾರೀ, ಪ್ರಚಂಡ ಪರಿಣಾಮಿ, ಅತಿಕ್ರೋಧೀ, ಪರಲೋಕದ ಅಭಾವ ಹೇಳುವಂಥ ನಾಸ್ತಿಕ, ಪಾಪದ ಭಯವಿಲ್ಲದವ, ತೀವ್ರ ಆಸಕ್ತಿಯ ಧಾರಕ, ಅಭಕ್ಷ್ಯದ ಭಕ್ಷಕ, ವೇಶ್ಯಾಸಕ್ತ, ಸೆರೆಗುಡುಕ, ನೀಚಕರ್ಮ ಮಾಡುವಂಥವ ಇವರೇ ಮೊದಲಾದವರ ಸಂಗತಿಯನ್ನು ಮಾಡಬಾರದು.

ಶ್ರಾವಕಧರ್ಮದ ರಕ್ಷಣೆ ಮಾಡಬಯಸುತ್ತಿದ್ದರೆ, ತಮ್ಮ ಹಿತ ಮಾಡಿಕೊಳ್ಳಬಯಸುತ್ತಿದ್ದರೆ ಕುಸಂಗತಿಯನ್ನು ಅಗ್ನಿಯ ಸಮಾನ ವಿಷದ ಸಮಾನ ದುಃಖಕರವೆಂದು ತಿಳಿದುಕೊಂಡು ದೂರದಿಂದಲೇ ಬಿಟ್ಟು ಬಿಡಬೇಕು. **ಎಂಥವರ ಸಹವಾಸ ಮಾಡುವಿರಿ, ಅವರಲ್ಲಿಯೇ ಪ್ರೀತಿಯಾಗುವುದು; ಯಾರಲ್ಲಿ ಪ್ರೀತಿಯಾಗುವುದು, ಅವರದೇ ವಿಶ್ವಾಸವಾಗುವುದು; ವಿಶ್ವಾಸವಾಗುವುದರಿಂದ ಅವರಂತೇಯೇ ಆಗುವ ಭಾವವಾಗುತ್ತದೆ, ಆದುದರಿಂದ ಎಂಥವರ ಸಂಗತಿ ಮಾಡುವಿರಿ ಅಂಥವರೇ ಆಗುವಿರಿ.** ಅಚೇತನವಿರುವ ಮಣ್ಣು ಕೂಡ ಸಂಸರ್ಗದಿಂದ ಸುಗಂಧಮಯ ಅಥವಾ ದುರ್ಗಂಧಮಯವಾಗಿ ಹೋಗುತ್ತದೆಯೆಂದ ಮೇಲೆ ಚೇತನಮನುಷ್ಯನು ಸಂಗತಿಯಿಂದ ಇತರರ ಗುಣರೂಪ ಅಥವಾ ದುರ್ಗುಣ ರೂಪವಾಗಿ ಹೇಗೆ ಪರಿಣಮಿಸಲಾರನು ?

**ಯಾವನು ಎಂಥವರ ಮಿತ್ರತೆ ಮಾಡುತ್ತಾನೆ ಅವನು ಅವರಂತಯೇ ಆಗಿ ಹೋಗುತ್ತಾನೆ.** ದುರ್ಜನರ ಸಂಗತಿ ಮಾಡುವುದರಿಂದ ಸಜ್ಜನನೂ ತನ್ನ ಸಜ್ಜನತೆಯನ್ನು ಬಿಟ್ಟುಕೊಟ್ಟು ದುರ್ಜನನಾಗಿ ಹೋಗುತ್ತಾನೆ. ಶೀತಲ ಜಲವು ಕೂಡ ಅಗ್ನಿಯ ಸಂಪರ್ಕ ಮಾಡುವುದರಿಂದ ತನ್ನ ಶೀತಲ ಸ್ವಭಾವವನ್ನು ಬಿಟ್ಟುಕೊಟ್ಟು ತಪ್ತತೆಗೆ ಪ್ರಾಪ್ತವಾಗುತ್ತದೆ. ಹಾಗೆ ಉತ್ತಮ ಪುರುಷನೂ ಅಧಮ ಪುರುಷನ ಸಂಗತಿ ಪಡೆದು ಅಧಮತೆಗೆ ಪ್ರಾಪ್ತನಾಗಿ ಹೋಗುತ್ತಾನೆ. ಹೇಗೆ ದೇವತೆಯ ಮಸ್ತಕದ ಮೇಲಿರುವಂಥ ಸುಗಂಧಿತ ಪುಷ್ಪಗಳಮಾಲೆಯೂ ಶವದ ಶರೀರದ ಸಂಸರ್ಗ ಮಾಡಿ ಸ್ಪರ್ಶ ಮಾಡಲೂ ಯೋಗ್ಯ ಉಳಿಯುವುದಿಲ್ಲ, ಹಾಗೆ ದುಷ್ಟರ ಸಂಗತಿಯಿಂದ ತ್ಯಾಗೀ ಸಂಯಮಿ ಪುರುಷರಲ್ಲಿ ಕೂಡ ದೋಷವಿರುವ ಸಂದೇಹ ಮಾಡಲಾಗುತ್ತದೆ. ಕಲಾಲನ (ಮದ್ಯ ಮಾರುವವನ) ಕೈಯಲ್ಲಿ ಹಾಲು ತುಂಬಿದ ಕೊಡವಿದ್ದರೂ ಕೂಡ ಅದರಲ್ಲಿ ಮದ್ಯವಿರುವುದರ ಸಂದೇಹ ಉತ್ಪನ್ನವಾಗುತ್ತದೆ; ಮತ್ತುಕಲಾಲನ ಮನೆಯಲ್ಲಿ ಹಾಲು ಕುಡಿಯುತ್ತಿರುವ ಬ್ರಾಹ್ಮಣನೂ ಜನರಿಗೆ ಮದ್ಯಪಾನ ಮಾಡುತ್ತಿರುವುದರ ಶಂಕೆಯನುತ್ಪನ್ನ ಮಾಡಿಸುತ್ತಾನೆ.

**ಜನರಂತೂ ಇತರರ ಛಿದ್ರ ನೋಡುವಂಥವರಿದ್ದಾರೆ, ಇತರರ ದೋಷ ಹೇಳುವಲ್ಲಿ ಆಸಕ್ತರಿದ್ದಾರೆ,** ನೀವು ದುಷ್ಟರ, ದುರಾಚಾರಿಗಳ ಸಂಗತಿ ಮಾಡಿದರೆ ತಾವು ಕೂಡ ಜನರಲ್ಲಿ ನಿಂದೆಗೆ ಪ್ರಾಪ್ತರಾಗಿ ಧರ್ಮದ ಅವಮಾನ (ನಿಂದೆ) ಮಾಡುವಿರಿ,ಆದುದರಿಂದ ಕುಸಂಗತಿಯನ್ನು ಮಾಡಬೇಡಿರಿ. ದುಷ್ಟಮನುಷ್ಯರ ಸಂಗತಿಯಿಂದ ನಿರ್ದೋಷ ಮನುಷ್ಯರು ಕೂಡ ಶೀಘ್ರವಾಗಿ ದೋಷಯುಕ್ತ ಮಿಥ್ಯಾಮಾರ್ಗಿಯಾಗಿ ಬಿಡುತ್ತಾರೆ. **ಮಿಥ್ಯಾತ್ವ ಮತ್ತು ಕಷಾಯಗಳ ಪರಿಚಯವಂತೂ ಅನಾದಿಕಾಲದ್ದಿದೆ; ಆದರೆ ವೀತರಾಗ ಭಾವವಂತೂ ಈಗ ಮಹಾಕಷ್ಟದಿಂದ ಉತ್ಪನ್ನವಾಗಿದೆ, ಕುಸಂಗತಿಯನ್ನು ಪಡೆದು ಕ್ಷಣ ಮಾತ್ರದಲ್ಲಿ ಹೊರಟು ಹೋಗುವುದು.**

ಅನಾದಿಕಾಲದ ಮೋಹಕರ್ಮವು ಅತ್ಯಂತ ಪ್ರಬಲವಿದೆ. ಅದರ ಉದಯದಿಂದ ಜೀವನು ಯಾವ ಶಿಕ್ಷಣವಿಲ್ಲದೆ ತಾನಾಗಿಯೇ ವಿಷಯ ಕಷಾಯಗಳಲ್ಲಿ ಪ್ರವರ್ತಿಸುತ್ತಾನೆ, ಪುನಃಕುಸಂಗತಿಯಿಂದಂತೂ ಹವೆಯ ಸಂಗತಿಯಿಂದ ಅಗ್ನಿಯ ಸಮಾನ ಅತ್ಯಂತ ಉಜ್ವಲಿತನಾಗಿ ಹೋಗುತ್ತಾನೆ. ಆದುದರಿಂದ ಕುಸಂಗತಿಯನ್ನು ಬಿಟ್ಟುಕೊಟ್ಟು ಶುಭ ಸಂಗತಿ ಮಾಡಬೇಕಾಗುವುದು. ಸಜ್ಜನರುಗಳ ಸಂಗತಿಯಿಂದ ದುಷ್ಟರು ಕೂಡ ತಮ್ಮ ದೋಷಗಳನ್ನು ಬಿಟ್ಟುಕೊಡುತ್ತಾರೆ.

**ಸತ್ಸಂಗತಿ ಮಾಡುವ ಪ್ರೇರಣೆ : ಸತ್ಸಂಗತಿಯಿಂದ ನಿರ್ಗುಣ ಪುರುಷರೂ ಜಗತ್ತಿನಲ್ಲಿ ಮಾನ್ಯರಾಗಿ ಬಿಡುತ್ತಾರೆ.** ನಿರ್ಗಂಧ ಪುಷ್ಪವನ್ನೂ ದೇವತೆಯ ಸಂಗತಿಯಾಗುವುದರಿಂದ ಜನರು ತಮ್ಮ ಮಸ್ತಕದ ಮೇಲೆ ಧರಿಸುತ್ತಾರೆ. ಯಾವೊಬ್ಬ ಪುರುಷನಿಗೂ ಧರ್ಮದಲ್ಲಿ ಪ್ರೀತಿಯಿಲ್ಲದಿದ್ದರೆ, ಪರೀಷಹ ಸಹನೆ ಮಾಡುವಲ್ಲಿ ಮತ್ತು ಇಂದ್ರಿಯ ವಿಷಯಗಳನ್ನು ತ್ಯಾಗ

ಮಾಡುವಲ್ಲಿ ಅತ್ಯಂತ ಪರಾಙ್ಮುಖತೆಯಿದ್ದರೂ ಕೂಡ ಸಂಯಮಿ-ವ್ರತಿ-ತ್ಯಾಗಿ ಪುರುಷರ ಸಂಗತಿಯಲ್ಲಿ ಇರುವುದರ ಪ್ರಭಾವದಿಂದ ಲಜ್ಜೆಯಿಂದ, ಭಯದಿಂದ, ಅಭಿಮಾನದಿಂದ ಅನ್ಯಾಯದ ವಿಷಯ-ಕಷಾಯಗಳಿಂದ ವಿರಕ್ತನಾಗಿ ಹೋಗುತ್ತಾನೆ. ಯಾವನು ಪ್ರಕೃತಿಯಿಂದ ಮಂದ ಕಷಾಯಿ, ಧರ್ಮಾನುರಾಗಿ, ಪಾಪದಿಂದ ಭಯ ಭೀತನಿರುತ್ತಾನೆ ಅವನಿಗೆ ಒಂದು ವೇಳೆ ಉತ್ತಮ ಸಂಗತಿ ದೊರಕಿದರೆ ಪರಮ ಧರ್ಮದ ಗ್ರಹಣವಾಗಿ ಹೋಗುತ್ತದೆ, ಮತ್ತು ಅವನು ಸಂಸಾರದ ದಡವನ್ನೂ ಪ್ರಾಪ್ತಮಾಡಿಕೊಳ್ಳುತ್ತಾನೆ.

ಯಾರಿಂದ ಸಮ್ಯಕ್ ಧರ್ಮದ ಪ್ರವರ್ತನೆಯಾಗುವುದು, ಯಾರ ಸಂಗತಿಯಿಂದ ಅನೇಕ ಜನರು ವಿಷಯ ಕಷಾಯಗಳಿಂದ ವಿರಕ್ತರಾಗಿ ಬಿಡುವರು, ತ್ಯಾಗ-ಸಂಯಮ-ತಪದಲ್ಲಿ ಲೀನರಾಗುವರು, ಅಂಥ ನ್ಯಾಯಮಾರ್ಗಿ ಧರ್ಮಾಚರಣೆಯ ಧಾರಕ ಓರ್ವ ಧರ್ಮಾತ್ಮ ಪುರುಷನಿಂದಲೇ ಜಗತ್ತು ಶೋಭಿಸುತ್ತದೆ, ಕೃತಾರ್ಥವಾಗಿ ಹೋಗುತ್ತದೆ. ಧರ್ಮ ರಹಿತ ವಿಷಯ ಕಷಾಯೀ ಪುರುಷರು ಹೆಚ್ಚಿರುವುದರಿಂದ ಏನು ಸಾಧ್ಯವಿದೆ ? - ಒಂದೇ ಕಲ್ಪವೃಕ್ಷವು ಸಮಸ್ತ ವೇದನೆಯ ನಾಶ ಮಾಡುತ್ತದೆ, ವಾಂಛಿತ ಸುಖವನ್ನು ಕೊಡುತ್ತದೆ; ಆದರೆ ಅಧಿಕ ವಿಷ ವೃಕ್ಷಗಳು ಕೇವಲ ಆಸಕ್ತಿ, ಸಂತಾಪ, ಮರಣದ ಕಾರಣವಿರುವುದರಿಂದ ಅವುಗಳಿಂದೇನು ಸಾಧ್ಯವಿದೆ ?

**ಈ ಜಗತ್ತಿನಲ್ಲಿ ಎಷ್ಟು ಅನರ್ಥಗಳು ಜನ್ಮತಾಳುತ್ತವೆ. ಅವೆಲ್ಲವು ಕುಸಂಗದಿಂದ ಆಗುತ್ತವೆ.** ಕುಸಂಗತಿಯಿಲ್ಲದೆ ಯಾವನೂ ಜೂಜುಗಾರ, ಕಳ್ಳ, ಪರಸ್ತ್ರೀ ಲಂಪಟ, ವೇಶ್ಯಾಸಕ್ತ, ಅಭಕ್ಷ್ಯ-ಭಕ್ಷಕ, ಮದ್ಯ ಕುಡುಕನಾಗುವುದಿಲ್ಲ. ದೊಡ್ಡ-ದೊಡ್ಡ ಅನರ್ಥಗಳು-ದೋಷಗಳು ಕುಸಂಗತಿದಿಂದಲೇ ಆಗುತ್ತವೆ. ಆದುದರಿಂದ ಉಭಯಲೋಕಗಳಲ್ಲಿ ತಮ್ಮ ಹಿತ ಬಯಸುತ್ತಿದ್ದರೆ ಕುಸಂಗತಿ ಮಾಡಬಾರದು. ಯಾರು ಉತ್ತಮ ಕುಲ ಉತ್ತಮ ಧರ್ಮ ಪಡೆದರೂ ಕೂಡ ಕುದೇವ-ಕುಧರ್ಮ-ಪಾಖಂಡಿಗಳ ಉಪಾಸನೆ ಮಾಡುತ್ತಾರೆ, ಗಾಂಜ ಸೇದುತ್ತಾರೆ, ಗುಡಗುಡಿ ಸೇದುತ್ತಾರೆ, ತಂಬಾಕು ತಿನ್ನುತ್ತಾರೆ, ರಾತ್ರೀ ಭಕ್ಷಣ ಮಾಡುತ್ತಾರೆ, ವೇಶ್ಯೆಯ ಎಂಜಲು ತಿನ್ನುತ್ತಾರೆ, ಜೂಜು ಆಡುತ್ತಾರೆ, ಕಳವು ಮಾಡುತ್ತಾರೆ, ನಿಂದೆ ಮಾಡುತ್ತಾರೆ, ಪರಧನ-ಪರಸ್ತ್ರೀಯರ ಕಡೆಗೆ ಆಸೆಯಿಂದ ನೋಡುತ್ತಾರೆ, ರಸನೇಂದ್ರಿಯದ ಲೋಲುಪಿಯಿದ್ದಾರೆ, ನಿರ್ದಯ ಪರಿಣಾಮಿ, ಕುವಚನವಾಡುವಲ್ಲಿ ಪ್ರವೃತ್ತ, ಪರವಿಘ್ನ ಸಂತೋಷಿ - ಇವೆಲ್ಲ ದೋಷಗಳು ಸತ್ಸಂಗತಿಯಿಲ್ಲದೆ ಕುಸಂಗತಿಯಿಂದಲೇ ಆಗುತ್ತವೆಯೆಂಬುದನ್ನು ಪ್ರತ್ಯಕ್ಷ ಕಾಣುತ್ತೇವೆ. ಈ ವಿಷಮ ಕಲಿಕಾಲದಲ್ಲಿ ಯಾವನು ಕುಸಂಗತಿಯನ್ನು ಬಿಟ್ಟುಕೊಟ್ಟು ಶುಭ ಸಂಗತಿ ಪಡೆಯುತ್ತಾನೆ ಅವನು ಮಹಾಪುಣ್ಯಾಧಿಕಾರಿಯಾದ ಮನುಷ್ಯನಿದ್ದಾನೆ.

**ಸ್ವಪ್ರಶಂಸೆಯ ತ್ಯಾಗ :** ಜಿನಧರ್ಮವನ್ನು ಧಾರಣ ಮಾಡಿದ್ದರೆ ತಮ್ಮ ಪ್ರಶಂಸೆ ಮತ್ತು ಪರನಿಂದೆಯನ್ನು ಮಾಡಬಾರದು. ಯಾರು ತಮ್ಮ ಮುಖದಿಂದ ತಮ್ಮ ಪ್ರಶಂಸೆ ಮಾಡುತ್ತಾರೆ ಅವರು ತಮ್ಮ ಯಶದ ನಾಶ ಮಾಡಿಕೊಳ್ಳುತ್ತಾರೆ. ಅಭಿಮಾನಿಯ ಹೊರತಾಗಿ ಬೇರೆ ಯಾರೂ ತಮ್ಮ ಪ್ರಶಂಸೆ ಮಾಡಿಕೊಳ್ಳುವುದಿಲ್ಲ, ತನ್ನ ಪ್ರಶಂಸೆ ಮಾಡಿಕೊಳ್ಳುವಂಥ ಪುರುಷನು ಹುಲ್ಲು ಕಡ್ಡಿಯಷ್ಟು ಚಿಕ್ಕವನಾಗುತ್ತಾನೆ, ಅವಜ್ಞೆಗೆ ಪಾತ್ರನಾಗುತ್ತಾನೆ, ಗುಣಗಳು ವಿದ್ಯಮಾನವಿದ್ದರೂ ತನ್ನ ಮುಖದಿಂದ ಹೇಳಿದ ಮೇಲೆ ಅವನು ಗುಣ ರಹಿತನಾಗಿ ದೋಷಗಳಿಗೆ ಪಾತ್ರನಾಗಿ ಹೋಗುತ್ತಾನೆ. ಅವನಲ್ಲಿ ಬೇರೆ ಯಾವ ದೋಷವೇ ಇಲ್ಲ, ಆದರೆ ತನ್ನ ಪ್ರಶಂಸೆಯನ್ನು ತಾನು ಮಾಡಿಕೊಳ್ಳುವುದು ಅದು ಅತ್ಯಂತ ದೊಡ್ಡ ದೋಷವಿದೆ. **ತನ್ನ ಮುಖದಿಂದ ತನ್ನ ಪ್ರಶಂಸೆ ಮಾಡಿಕೊಳ್ಳದಿರುವುದು ಅದು ದೊಡ್ಡ ಗುಣವಿದೆ.**

ತನ್ನ ಗುಣಗಳ ಪ್ರಶಂಸೆ ಮಾಡಿಕೊಳ್ಳದಂಥ ಪುರುಷನ ವಿದ್ಯಮಾನ ಗುಣಗಳು ನಷ್ಟವಾಗಿ ಹೋಗುವುದಿಲ್ಲ, ಹೇಗೆಂದರೆ ತನ್ನ ತೇಜಸ್ಸಿನ ಪ್ರಶಂಸೆ ಮಾಡಿಕೊಳ್ಳದಂಥ ಸೂರ್ಯನ ತೇಜಸ್ಸು ಜಗತ್ತಿನಲ್ಲಿ ವಿಖ್ಯಾತವೇ ಆಗಿರುತ್ತದೆ. ಒಂದು ವೇಳೆ ತನ್ನಲ್ಲಿ ಗುಣಗಳಿಲ್ಲದೆ ತನ್ನ ಪ್ರಶಂಸೆ ಮಾಡಿಕೊಳ್ಳುವುದರಿಂದ ಅವರಲ್ಲಿ ಗುಣವಂತತೆಯು ಪ್ರಕಟವಾಗುವ ಸಾಧ್ಯತೆಯಿಲ್ಲ; ಹೇಗೆಂದರೆ ಸ್ತ್ರೀಯ ಸಮಾನ ಹಾವಭಾವ, ವಿಲಾಸ, ವಿಭ್ರಮ, ಶೃಂಗಾರ, ಬಟ್ಟೆ ಮೊದಲಾದುವನ್ನು ಧಾರಣ ಮಾಡಿ ಸ್ತ್ರೀಯ ಹಾಗೆಯೇ ಆಚರಣೆ ಮಾಡುವಂಥ ನಪುಂಸಕನು ಸ್ತ್ರೀಯಾಗಿ ಹೋಗಲಾರನು, ಅವನು ನಪುಂಸಕನಾಗಿಯೇ ಉಳಿಯುವನು.

ತಮ್ಮಲ್ಲಿ ಗುಣಗಳು ವಿದ್ಯಮಾನವಿದ್ದರೂ ಮತ್ತು ಯಾರಾದರೂ ಅವನ ಕೀರ್ತಿಯ ಸ್ತುತಿ-ಪ್ರಶಂಸೆ ಮಾಡುತ್ತಿದ್ದರೆ ಉತ್ತಮ ಪುರುಷರಂತೂ ತಮ್ಮ ಕೀರ್ತಿ ಕೇಳಿ ಲೋಕದಲ್ಲಿ ಲಜ್ಜೆಯ ಅನುಭವ ಮಾಡುತ್ತಾರೆ. **ಸತ್ಪುರುಷರಿಗೆ ತಮ್ಮ ಕೀರ್ತಿಯು ಒಳ್ಳೆಯದೆನಿಸುವುದಿಲ್ಲ.** ಅವರಂತೂ ತಮ್ಮ ಕೀರ್ತಿ ಕೇಳಿ ಅತ್ಯಂತ ಲಜ್ಜಿತರಾಗಿ ಆತ್ಮನಿಂದೆಯನ್ನೇ ಮಾಡಿಕೊಳ್ಳುತ್ತಾರೆ. ''ನಾನು ಅನೇಕ ದೋಷಗಳಿಂದ ತುಂಬಿದ ಸಂಸಾರಿಯಿದ್ದೇನೆ, ಜನರು ನನ್ನ ಪ್ರಶಂಸೆ ಮಾಡಿ ನನ್ನ ಮೇಲೆ ದೊಡ್ಡ ಭಾರ ಹೊರಿಸುತ್ತಿದ್ದಾರೆ. ಯಾರು ಆತ್ಮನ ಪರಮವಿಶುದ್ಧತೆಯ ಇಚ್ಛುಕರಾಗಿ ಮೋಹ, ಕಾಮ, ಕ್ರೋಧಾದಿಗಳ ಮೇಲೆ ವಿಜಯ ಪ್ರಾಪ್ತ ಮಾಡಿಕೊಂಡಿದ್ದಾರೆ. ಅವರು ಪ್ರಶಂಸಾ ಯೋಗ್ಯರಿದ್ದಾರೆ. ಸಂಸಾರಿಯಾದ ನಾವು ರಾಗ-ದ್ವೇಷಗಳಿಂದ ವ್ಯಾಪ್ತ, ಇಂದ್ರಿಯ ವಿಷಯಗಳ ದಾಸ, ಪರಿಗ್ರಹದಲ್ಲಿ ಆಸಕ್ತ ಅತ್ಯಂತ ನಿಂದಾಯೋಗ್ಯರಿದ್ದೇವೆ. ಯಾರದು ಒಂದು ಗಳಿಗೆಯಾದರೂ ಪ್ರಮಾದದಿಂದ ಯುಕ್ತ ಧರ್ಮದಿಂದ ರಹಿತವಾಗಿ ವ್ಯತೀತವಾಗುತ್ತದೆ ಅವರು ಜಗತ್ತಿನಲ್ಲಿ ಮಹಾಮೂರ್ಖರಿದ್ದಾರೆ, ಅತ್ಯಂತ ನಿಂದ್ಯರಿದ್ದಾರೆ.''

**ಈ ಮನುಷ್ಯ ಜನ್ಮವು ಅತ್ಯಂತ ದುರ್ಲಭವಿದೆ, ಪುನಃ ಇದರಲ್ಲಿ ಜಿನಧರ್ಮದ ಪ್ರಾಪ್ತಿಯಾಗುವುದು ಅತಿ ದುರ್ಲಭತರವಿದೆ.** ಇಂಥ ಸಮಯದಲ್ಲಿ ಕೂಡ ಯಾರು ಧರ್ಮ ಬಿಟ್ಟು ವಿಷಯಗಳಲ್ಲಿ ಲೀನರಾಗುತ್ತಾರೆ. ಅವರು ತಮ್ಮ ಮನೆಯಲ್ಲಿ ಉತ್ಪನ್ನವಾದ ಕಲ್ಪವೃಕ್ಷವನ್ನು ಕತ್ತರಿಸಿ ವಿಷವೃಕ್ಷವನ್ನು ನೆಡುತ್ತಾರೆ, ಚಿಂತಾಮಣಿ ರತ್ನವನ್ನು ಕಾಗೆಯನ್ನು ಹಾರಿಸಲು ಎಸೆದು ಬಿಡುತ್ತಾರೆ, ಚಿಂತಾಮಣಿರತ್ನವನ್ನು ಗಾಜಿನ ತುಂಡಿನಲ್ಲಿ ಸೇರಿಸಿ ಮಾರಿ ಬಿಡುತ್ತಾರೆ. **ಕೋಟ್ಯಂತರ ಧನದಲ್ಲೂ ಪ್ರಾಪ್ತವಾಗುವದು ದುರ್ಲಭವಿರುವಂಥ ಈ ಮನುಷ್ಯ ಜನ್ಮದ ಒಂದೊಂದು ಗಳಿಗೆಯೂ ವ್ಯರ್ಥವಾಗಿ ಹೋಗುತ್ತಿದೆ.** ''ನಾನು ಕೂಡ ಅನ್ಯ ಜನರ ಕಥೆಯಲ್ಲಿ ಹಾಗೂ ಅವರ ರಾಗ-ದ್ವೇಷರೂಪದ ಪರಿಣತಿಯನ್ನು ನೋಡಿ ಕಷಾಯಯುಕ್ತನಾಗಿ ದುರ್ಧ್ಯಾನದಿಂದ ಮನುಷ್ಯ ಜನ್ಮವನ್ನು ಕಳೆಯುತ್ತಿದ್ದೇನೆ. ಆದುದರಿಂದ ನನ್ನಂಥ ನಿಂದಾಯೋಗ್ಯರು ಬೇರಾರೂ ಇಲ್ಲ.'' ಈ ಪ್ರಕಾರ ತಮ್ಮ ನಿಂದೆ, ಗರ್ಹೆ ಮಾಡಿಕೊಳ್ಳುತ್ತಿರುವ ಉತ್ತಮ ಪುರುಷರಿಗೆ ತಮ್ಮ ಪ್ರಶಂಸೆಯು ಹೇಗೆ ರುಚಿಸುವುದು ? ರುಚಿಸುವುದಿಲ್ಲ, ಅವರಂತೂ ತಮ್ಮನ್ನು ಕೀಳಾಗಿಯೇ ಕಾಣುತ್ತಾರೆ. **ವಚನಗಳಿಂದ ತನ್ನ ಪ್ರಶಂಸೆ ಮಾಡಿಕೊಳ್ಳುವವನು ನೀಚಗೋತ್ರ ಕರ್ಮದ ಬಂಧ ಮಾಡಿಕೊಳ್ಳುತ್ತಾನೆ.** ಇಲ್ಲಿ ಕೂಡ ಜನರಲ್ಲಿ ಮಹಾನಿಂದ್ಯನಾಗುತ್ತಾನೆ. ಸತ್ಪುರುಷರು ತಮ್ಮ ಗುಣಗಳನ್ನು ತಾವು ಪ್ರಕಟ ಮಾಡುವುದಿಲ್ಲ. ಆದಾಗ್ಯೂ ಅವರ ಉಜ್ವಲ ಆಚರಣೆಯಿಂದ ಜಗತ್ತಿನಲ್ಲಿ ಅವರ ಗುಣಗಳು ವಿಖ್ಯಾತವಾಗಿ ಹೋಗುತ್ತವೆ. ಹೇಗೆಂದರೆ ಚಂದ್ರನ ಪ್ರಕಾಶ, ಶೀತಲತೆ ಹಾಗೂ ಆಹ್ಲಾದಕತೆಯು ಹೇಳದೆಯೇ ಜಗತ್ತಿನಲ್ಲಿ ಹರಡಿಹೋಗುತ್ತದೆ.

**ಪರನಿಂದೆಯ ತ್ಯಾಗ :** ಪರರ ನಿಂದೆಯನ್ನೆಂದೂ ಮಾಡಬಾರದು. ಪರನಿಂದೆ ಮಾಡುವುದರ ಸಮಾನ ಬೇರೊಂದು ದೋಷವಿಲ್ಲ, ಪರದ ನಿಂದೆಯು ಮಹಾವೈರದ ಕಾರಣವಿದೆ, ದುರ್ಧ್ಯಾನದ ಕಾರಣವಿದೆ, ಭಯದ ಕಾರಣವಿದೆ, ದುಃಖ-ಶೋಕ-ಪಶ್ಚಾತ್ತಾಪ-ವಿಸಂವಾದ-ಅಪ್ರೀತಿಯ ಕಾರಣವಿದೆ, ನಿಂದೆಯಕಾರಣವಿದೆ. ಇತರರ ನಿಂದೆ ಮಾಡುವಂಥವನು ತನ್ನ ಧರ್ಮ, ಯಶಸ್ಸು, ದೊಡ್ಡಸ್ತನದ ನಾಶ ಮಾಡಿಕೊಳ್ಳುತ್ತಾನೆ. ಯಾರು ಇತರರ ದೋಷ ಪ್ರಕಟ ಮಾಡಿ ಸ್ವಯಂ ನಿರ್ದೋಷರಾಗಲು ಬಯಸುತ್ತಾರೆ, ಅವರು ಇತರರ ಮೂಲಕ ಔಷಧ ಸೇವನೆ ಮಾಡುವುದರಿಂದ ತಮ್ಮ ನಿರೋಗತೆಯನ್ನು ಬಯಸುವಂಥವರ ಸಮಾನರಿದ್ದಾರೆ.

**ಅನ್ಯರ ನಿಂದೆ ಮಾಡುವುದು ಅದು ಕೋಟಿ ದೋಷಗಳ ಶಿರೋಮಣಿಯಿದೆ. ಜಿನಧರ್ಮವನ್ನು ಧಾರಣ ಮಾಡಿದ್ದರೆ ಇನ್ನೊಬ್ಬರ ದೋಷ ಹೇಳಬಾರದು.** ಸತ್ಪುರುಷರುಗಳಂತೂ ಇತರರ ದೋಷ ನೋಡಿ ಸ್ವಯಂ ಲಜ್ಜಿತರಾಗಿ ಹೋಗುತ್ತಾರೆ, ಮತ್ತು ತಮ್ಮ ಸಾಮರ್ಥ್ಯದ ಅನುಸಾರ ಇತರರ ದೋಷ ಮರೆ ಮಾಡುತ್ತಾರೆ; ಅವರಂತೂ ಯಾವ ಪ್ರಕಾರ ತಮ್ಮ ಅಪವಾದದಿಂದ ಹೆದರುತ್ತಾರೆ. ಅದೇ ಪ್ರಕಾರ ಇತರರ ಅಪವಾದವಾಗುವುದರ ಕುರಿತು ಅತ್ಯಂತ ಭಯಭೀತರಿರುತ್ತಾರೆ.

ಸಂಸಾರೀ ಜೀವರುಗಳಿಗೆ ಜ್ಞಾನಾವರಣ-ದರ್ಶನಾವರಣ ಕರ್ಮದ ಉದಯವು ಪ್ರಬಲವಿದ್ದು ಅದರ ಕಾರಣ ಜೀವರುಗಳು ಅಜ್ಞಾನಕ್ಕೆ ಪ್ರಾಪ್ತರಾಗುತ್ತಿದ್ದಾರೆ. ಮೋಹನೀಯ ಕರ್ಮದ ಉದಯದಿಂದ ರಾಗೀ, ದ್ವೇಷೀ, ಕಾಮೀ, ಕ್ರೋಧೀ, ಲೋಭೀ, ಮಾನೀ, ಕಪಟಿಗಳಾಗುತ್ತಿದ್ದಾರೆ. ಭಯವಂತ, ಶೋಕವಂತ, ಗ್ಲಾನಿವಂತ, ರತಿಯ ವಶೀಭೂತ, ಅರತಿಯ ವಶೀಭೂತರಾಗಿ ಅನೇಕ ವಿಕಾರರೂಪದ ಕುಚೇಷ್ಟೆಗಳನ್ನು ಮಾಡುತ್ತಲಿದ್ದಾರೆ.

ಯಾವ ಪ್ರಕಾರ ಒಬ್ಬನು ಮದ್ಯ ಕುಡಿದು ಪರವಶನಾಗಿ ತನ್ನನ್ನು ಮರೆತು ಬಿಡುತ್ತಾನೆ; ಮದ್ದಗುಣಿಕೆ ತಿಂದು ಉನ್ಮತ್ತತೆಯಿಂದ ಪರವಶನಾಗಿ ತನ್ನನ್ನು ಮರೆತು ನಿಂದ್ಯ ಚೇಷ್ಟೆ ಮಾಡತೊಡಗುತ್ತಾನೆ; ಅದೇ ಪ್ರಕಾರ ಸಂಸಾರೀ ಜೀವನು ವಿಷಯ ಕಷಾಯಗಳ ವಶನಾಗಿ ನಿಂದ್ಯ ಚೇಷ್ಟೆ ಮಾಡುತ್ತಾನೆ. ಅವನ ಮೇಲಂತೂ ಕರುಣೆ ಮಾಡಬೇಕು, ದೋಷಗಳಿಂದ ಬಿಡಿಸಬೇಕು; ನಿಂದೆ, ದೂಷಣೆ ಹೇಗೆ ಮಾಡುವುದು ? ಇತರರ ದೋಷಾರೋಪಣೆ ಮಾಡಿ ಅನೇಕ ನಿಂದ್ಯ ಪರ್ಯಾಯಗಳಲ್ಲಿ ದುರ್ಗತಿಗಳಲ್ಲಿ ತಿರಸ್ಕಾರವನ್ನೇ ಪಡೆಯಲಾಗಿದೆ.

ಸಮ್ಯಗ್ದೃಷ್ಟಿಯಂತೂ ನಿತ್ಯ ಪ್ರಾರ್ಥಿಸುವುದೇನೆಂದರೆ ಇತರರ ದೋಷ ಹೇಳುವಲ್ಲಿ ನನಗೆ ಗಾಢ ಮೌನವಿರಲಿ, ಸಮಸ್ತ ಜೀವರುಗಳ ಕುರಿತು ನನ್ನಿಂದ ಪ್ರಿಯ ಹಿತರೂಪ ವಚನಗಳೇ ಹೊರಡಲಿ, **ಜಿನಧರ್ಮಿಗಳು ಗುಣಗ್ರಾಹಿಗಳೇ ಇರುತ್ತಾರೆ.** ಅವರು ಮಿಥ್ಯಾ ದೃಷ್ಟಿಗಳ, ತೀವ್ರ ಕಷಾಯೀ ಜೀವರುಗಳ ಮಿಥ್ಯಾ ಆಚರಣೆಯನ್ನು ನೋಡಿ ವೈರ ಬುದ್ಧಿಯಿಂದ ನಿಂದೆ ಮಾಡುವುದಿಲ್ಲ, ಇವರ ನಿಂದೆಯಾದರೆ ಒಳ್ಳೆಯದಿದೆಯೆಂದು ಅವರ ಅಭಿಪ್ರಾಯವಿರುವುದಿಲ್ಲ, ಅವರಂತೂ ದೋಷಗಳನ್ನು **ಮಿಥ್ಯಾತ್ವವನ್ನು ಅನಂತಕಾಲದವರೆಗೆ ದುಃಖ ಕೊಡುವಂಥವುಗಳೆಂದು ತಿಳಿದುಕೊಂಡು** ಕರುಣೆಯ ಬುದ್ಧಿಯಿಂದ ಮಂದಕಷಾಯವುಳ್ಳ ಜೀವರುಗಳಿಗೆ ಗುಣ- ದೋಷಗಳ ಹಾನಿ- ವೃದ್ಧಿಯ ಸ್ವರೂಪವನ್ನು ತೋರಿಸಿಕೊಡುತ್ತಾರೆ.

**ನಿದ್ರೆಯ ತ್ಯಾಗ :** ನಿದ್ರೆ, ಆಲಸ್ಯ, ಪ್ರಮಾದಗಳ ಮೇಲೆ ವಿಜಯ ಸಾಧಿಸಬೇಕು. ನಿದ್ರೆಯು ಸಮಸ್ತ ಧರ್ಮದ ಅಭಾವ ಮಾಡುತ್ತದೆ. ಯಾರು ನಿದ್ರೆಯನ್ನು ಜಯಿಸಿಲ್ಲ ಅವರ ಆರು ಆವಶ್ಯಕ, ಸ್ವಾಧ್ಯಾಯ, ಧ್ಯಾನ, ಜಪ ಮೊದಲಾದ ಸಮಸ್ತ ಉತ್ತಮ ಕಾರ್ಯಗಳು ನಷ್ಟವಾಗಿ ಹೋಗುತ್ತವೆ. ಮುನಿಗಳಿಗಂತೂ ನಿದ್ರೆಯನ್ನು ಜಯಿಸುವ ಸಲುವಾಗಿಯೇ ತಪಸ್ಸು ಇದೆ. ದರ್ಶನಾವರಣಕರ್ಮದ ಉದಯಜನಿತ ನಿದ್ರೆಯು ಸರ್ವಘಾತಿ ಪ್ರಕೃತಿಯಿದೆ. ಆತ್ಮನನ್ನು ಅಚೇತನದ ಹಾಗೆಯೇ ಮಾಡಿ ಬಿಡುತ್ತದೆ. ಯಾರು ನಿದ್ರೆಯನ್ನು ಜಯಿಸುವುದಿಲ್ಲ ಅವರ ಸಮಸ್ತ ಹಿತರೂಪದ ಕಾರ್ಯಗಳು ನಷ್ಟವಾಗಿ ಹೋಗುವವು.

ಶಾಸ್ತ್ರ ಓದುವ ಸಮಯ ಅಥವಾ ಕೇಳುವ ಸಮಯದಲ್ಲಿ ನಿದ್ರೆಯು ಬಂದು ಬಿಟ್ಟರೆ, ತೂಕಡಿಕೆಯು ಬಂದು ಬಿಟ್ಟರೆ ಶಾಸ್ತ್ರ ಓದುವುದು- ಕೇಳುವುದು ಆಗುವುದಿಲ್ಲ, ಆದರೆ ಶಾಸ್ತ್ರ ಓದುವಲ್ಲಿ- ಕೇಳುವಲ್ಲಿ ಅರುಚಿಯಾಗುವುದು. ಧ್ಯಾನ, ಸಾಮಾಯಿಕ ಮಾಡುವ ಸಮಯದಲ್ಲಿ ನಿದ್ರೆಯು ಬಂದು ಬಿಟ್ಟರೆ ಧ್ಯಾನ, ಜಪ, ಸಾಮಾಯಿಕ, ಆತ್ಮಧ್ಯಾನ, ಭಾವನೆಗಳೆಲ್ಲವೂ ನಷ್ಟವಾಗಿ ಹೋಗುವವು. ನಿದ್ರೆಯಲ್ಲಿ ಜೀವವು ಏಕೇಂದ್ರಿಯದ ಸಮಾನವಾಗಿ ಹೋಗುತ್ತದೆ. ನಿದ್ರೆಯು ಸಮಸ್ತ ಜ್ಞಾನವನ್ನು ನಷ್ಟಮಾಡಿ ಬಿಡುತ್ತದೆ. **ನಿದ್ರೆಯ ಸಮಯದೊಳಗೆ ಆತ್ಮನಲ್ಲಿ ಬುದ್ಧಿಪೂರ್ವಕ ಅನೇಕ ವಿಕಲ್ಪಗಳು ಉತ್ಪನ್ನವಾಗುತ್ತವೆ.** ಬುದ್ಧಿ ಪೂರ್ವಕವಾಗಿ ಆತ್ಮನ ಹಿತ ಮಾಡುವ ಭಾವನೆಯ ಅಭಾವವಾಗಿ ಹೋಗುತ್ತದೆ.

**ಹಗಲು ಹೊತ್ತಿನಲ್ಲಿ ನಿದ್ರೆ ಮಾಡುವುದರಿಂದ ದರ್ಶನಾವರಣ ಕರ್ಮದ ಆಸ್ರವವಾಗುತ್ತದೆ.** ಮುನಿರಾಜರಂತೂ ಒಂದು ಪ್ರಹರ ರಾತ್ರಿಯು ಕಳೆದು ಹೋದ ನಂತರ ಖೇದ- ಪ್ರಮಾದಗಳ ನಿವಾರಣೆಯ ಸಲುವಾಗಿ ಮಧ್ಯರಾತ್ರಿಯಲ್ಲಿ ಎರಡು ಪ್ರಹರ ಶಯನ ಮಾಡುತ್ತಾರೆ. ಸ್ವಲ್ಪ ನಿದ್ರೆ ಮಾಡಿ ಪುನಃ ಜಾಗೃತರಾಗಿ ಹನ್ನೆರಡು ಭಾವನೆಗಳ ಚಿಂತನೆ ಮಾಡುತ್ತಾರೆ, ಪುನಃ ಕ್ಷಣ ಮಾತ್ರ ನಿದ್ರೆ ಬಂದು ಹೋಗುತ್ತದೆ, ಪುನಃ ಜಾಗೃತರಾಗಿ ಧರ್ಮಧ್ಯಾನದಲ್ಲಿ ಲೀನರಾಗಿ ಹೋಗುತ್ತಾರೆ. ಈ ಪ್ರಕಾರ ಮಧ್ಯದ ಎರಡು ಪ್ರಹರಗಳಲ್ಲಿ ಕೂಡ ಅನೇಕ ಬಾರಿ ಜಾಗೃತರಾಗಿ ಧರ್ಮಧ್ಯಾನ ಮಾಡುತ್ತಿರುತ್ತಾರೆ. **ಎಂದಾದರೊಮ್ಮೆ ಮುಹೂರ್ತ ಮಾತ್ರದ ನಿದ್ರೆಯಲ್ಲೂ ಅಚೇತರಾಗಿ ಹೋಗುತ್ತಿದ್ದರೆ ನಿದ್ರೆಯನ್ನು ಜಯಿಸುವ ಸಲುವಾಗಿ ಒಂದು ಉಪವಾಸ, ಎರಡು ಉಪವಾಸ, ಮೂರು ಉಪವಾಸ, ನಾಲ್ಕು, ಐದು ಇತ್ಯಾದಿ ಉಪವಾಸ ಮತ್ತು ರಸಪರಿತ್ಯಾಗ ಮೊದಲಾದ ಮಹಾನ ಅನಶನ ಮೊದಲಾದ ತಪಗಳ ಮೂಲಕ ನಿದ್ರೆಯ ಅಭಾವ ಮಾಡುತ್ತಾರೆ.** ನಿದ್ರೆಯನ್ನು ಜಯಿಸುವ ಸಲುವಾಗಿ ಮತ್ತು ಕಾಮವನ್ನು ಜಯಿಸುವ ಸಾವಧಾನತೆಯ ಸಲುವಾಗಿ ಯಾವಾಗಲೂ ಅನಶನ ಮೊದಲಾದ ತಪಸ್ಸು ಮಾಡುತ್ತಿರುತ್ತಾರೆ.

ನಿದ್ರೆಯಲ್ಲಿಯಂತೂ ಸಮಸ್ತಪರಿಣಾಮಗಳ ಸಾವಧಾನತೆಯ ಹಾಗೂ ವಚನ-ಕಾಯದ ಸಾವಧಾನತೆಯ ಅಭಾವವಾಗಿ ಹೋಗುತ್ತದೆ, ಯಾರಿಗೆ ಉತ್ತಮ ಮನುಷ್ಯ ಜನ್ಮ ಮತ್ತು ಉತ್ತಮ ಧರ್ಮದ ನಾಶ ಮಾಡಿ ಏಕೇಂದ್ರಿಯ ಸಮಾನವಾಗಿ ಮನುಷ್ಯ ಆಯುವನ್ನು ಪೂರ್ಣ ಮಾಡುವುದಿದೆ ಅವನು ಹೆಚ್ಚು ನಿದ್ರೆ ಮಾಡುತ್ತಾನೆ. **ಹಗಲು ಹೊತ್ತಿನಲ್ಲಿ ನಿದ್ರೆ ಮಾಡುವವನ ವ್ರತ-ಸಂಯಮಗಳೇ ಹೊರಟು ಹೋಗುತ್ತವೆ.** ಖೇದ, ಆಲಸ್ಯ ಮೊದಲಾದುವನ್ನು ದೂರ ಮಾಡುವ ಸಲುವಾಗಿ ರಾತ್ರಿಯಲ್ಲಿ ಅಲ್ಪ ನಿದ್ರೆ ಮಾಡುತ್ತಾರೆ.

**ನಿದ್ರೆ-ಆಲಸ್ಯ ಮೊದಲಾದುವಂತೂ ಜೀವದ ಅಂತರಂಗ ಮಹಾವೈರಿಗಳಿವೆ.** ನಿದ್ರೆಯಲ್ಲಿ ಹೇಯ-ಉಪಾದೇಯ ಕಾರ್ಯ-ಅಕಾರ್ಯ, ಹಿತ-ಅಹಿತ, ಯೋಗ್ಯ-ಅಯೋಗ್ಯದ ವಿಚಾರ ರಹಿತನಾಗುತ್ತಾನೆ. ನಿದ್ರೆಯನ್ನು ಜಯಿಸಿದಲ್ಲದೆ ಈ ಲೋಕದ ಸಮಸ್ತ ಕಾರ್ಯಗಳು ನಷ್ಟವಾಗಿ ಹೋಗುತ್ತವೆಂದ ಮೇಲೆ ಪರಮಾರ್ಥರೂಪದ ಕಾರ್ಯ ಹೇಗಾಗುವವು. ಆದುದರಿಂದ ವಿದ್ಯೆ, ವಿನಯ, ಸಂಯಮ, ತಪ, ಸ್ವಾಧ್ಯಾಯ, ಧ್ಯಾನ, ಜಪದ ಸಿದ್ಧಿಯನ್ನು ಬಯಸುತ್ತಿದ್ದರೆ ನಿದ್ರೆಯನ್ನು ಜಯಿಸಿ, ಖೇದ-ಗ್ಲಾನಿ-ಆಲಸ್ಯಗಳನ್ನು ದೂರ ಮಾಡುವ ಸಲುವಾಗಿ ಅಲ್ಪ ನಿದ್ರೆ ಮಾಡಬೇಕಾಗುವುದು.

**ಎಂಟು ಶುದ್ಧಿಗಳು :** ಈಗ ಎಂಟು ಪ್ರಕಾರದ ಶುದ್ಧಿಯ ವರ್ಣನೆ ಮಾಡುತ್ತಾರೆ. ಈ ಎಂಟು ಶುದ್ಧಿಗಳಂತೂ ಪರಮವೀತರಾಗ ಸಾಧು ಮುನಿಗಳಿಗೇ ಆಗುತ್ತಿದ್ದರೂ ಯಾರು ಸಾಧುತ್ವದ ಧಾರಣ ಮಾಡುವ ಇಚ್ಛೆಯುಳ್ಳವರಿದ್ದಾರೆ ಮತ್ತು ಸಾಧು ಧರ್ಮದ ಭಾವನೆ ಭಾವಿಸುವ ಇಚ್ಛೆಯುಳ್ಳ ಗೃಹಸ್ಥರಿದ್ದಾರೆ. ಅವರು ಈ ಎಂಟು ಶುದ್ಧಿಗಳನ್ನು ತಿಳಿದುಕೊಳ್ಳುವುದು ಯೋಗ್ಯವಿದೆ. ಭಾವಶುದ್ಧಿ, ಕಾಯಶುದ್ಧಿ, ವಿನಯಶುದ್ಧಿ, ಈರ್ಯಾಪಥಶುದ್ಧಿ, ಭಿಕ್ಷಾಶುದ್ಧಿ, ಪ್ರತಿಷ್ಠಾಪನಶುದ್ಧಿ, ಶಯನಾಸನಶುದ್ಧಿ, ಮತ್ತು ವಾಕ್ಯಶುದ್ಧಿಯೆಂದು ಇವು ಎಂಟು ಪ್ರಕಾರದ ಶುದ್ಧಿಗಳಿವೆ.

**ಭಾವಶುದ್ಧಿ :** ಮೋಹನೀಯ ಕರ್ಮದ ಕ್ಷಯೋಪಶಮದಿಂದ ಉತ್ಪನ್ನವಾದ ಮೋಕ್ಷಮಾರ್ಗದಲ್ಲಿನ ರುಚಿಯಿಂದ ಪರಿಣಾಮದಲ್ಲಿ ಎಂಥ ಉಜ್ವಲತೆಯಾಗುತ್ತದೆಯೆಂದರೆ ಕೇವಲ ಒಂದು ರತ್ನತ್ರಯವೇ ಮೋಕ್ಷಮಾರ್ಗವಿದೆ, ಅನ್ಯವೆಲ್ಲವು ಸಂಸಾರದಲ್ಲಿ ಸಿಕ್ಕಿಸುವಂಥ ಕುಮಾರ್ಗಗಳಿವೆಯೆಂಬ ದೃಢ ಶ್ರದ್ಧೆಯು ಉತ್ಪನ್ನವಾಗುತ್ತದೆ. ಆತ್ಮನ ಹಿತವು ಮೋಕ್ಷವಿದೆ, ಈ ಮೋಕ್ಷವು ಕರ್ಮಬಂಧನವಿಲ್ಲದ ಅವಸ್ಥೆಯಿದೆ, ಮತ್ತು ಕರ್ಮಬಂಧನದ ಬಿಡುಗಡೆಯು ರತ್ನತ್ರಯದಿಂದಲೇ ಆಗುತ್ತದೆ. ಇಂಥ ದೃಢ ಶ್ರದ್ಧೆ-ಜ್ಞಾನದಿಂದ ಉತ್ಪನ್ನವಾದ ಸಂಸಾರ-ಶರೀರ-ಭೋಗಗಳಿಂದ ವಿರಕ್ತತೆಯ ರೂಪದ ಸಮಸ್ತ ರಾಗ-ದ್ವೇಷ ಮೊದಲಾದ ಮಲರಹಿತವಾದ ಉಜ್ವಲತೆಯು ಅದು ಭಾವಶುದ್ಧಿಯಿದೆ.

**ಭಾವದೊಳಗಿಂದ ವಿಷಯಗಳ ಇಚ್ಛೆ, ರಾಗ-ದ್ವೇಷಾದಿಗಳ ಉಪದ್ರವ, ಮಿಥ್ಯಾತ್ವರೂಪದ ಮಹಾಮಲವು ದೂರವಾದಲ್ಲದೆ ಮುನಿಯ ಆಚಾರ ಹಾಗೂ ಶ್ರಾವಕನ ಆಚಾರವು ಉಜ್ವಲತೆಗೆ ಪ್ರಾಪ್ತವಾಗುವುದಿಲ್ಲ,** ಯಾವ ಪ್ರಕಾರ ಅತ್ಯಂತ ಸ್ವಚ್ಛವಿರುವ ಗೋಡೆಯ ಮೇಲೆ ಚಿತ್ರವು ಚೆನ್ನಾಗಿ ಮೂಡುತ್ತದೆ, ಅದೇ ಮಲಿನವಾದ ಗೋಡೆಯ ಮೇಲೆ ಚಿತ್ರಕಾರನು ಎಷ್ಟೇ ಜಾಗರೂಕತೆಯಿಂದ ಚಿತ್ರ ಬರೆದರೂ ಅದು ಸರಿಯಾಗಿ ಬರುವುದಿಲ್ಲ; ಅದೇ ಪ್ರಕಾರ **ಮಿಥ್ಯಾತ್ವ ಹಾಗೂ ಕಷಾಯಗಳಿಂದ ಲಿಪ್ತನಿರುವ ಪುರುಷನಿಗೆ ಕೂಡ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರಗಳಾಗುವುದಿಲ್ಲ.** ಈ ಪ್ರಕಾರ ಈ ಭಾವಶುದ್ಧಿಯನ್ನು ಹೇಳಲಾಯಿತು.

**ಕಾಯಶುದ್ಧಿ :-** ಸಾಧುಗಳ ಕಾಯಶುದ್ಧಿಯು ಹೇಗಿರುತ್ತದೆಂಬುದನ್ನು ಹೇಳುತ್ತಾರೆ. ಅದು ಆವರಣರಹಿತ, ಆಭರಣ ರಹಿತ, ಸಂಸ್ಕಾರ ರಹಿತ, ವಿಕಾರ ರಹಿತ ಮತ್ತು ಯತ್ನಾಚಾರ ಸಹಿತವಿದ್ದು ಅವರ ಆ ಶುದ್ಧಿಯ ಹೆಸರು ಕಾಯಶುದ್ಧಿಯಿದೆ. ಅವರು ನೂಲಿನ, ರೇಶ್ಮೆಯ, ಸಣಬಿನ, ಹುಲ್ಲಿನ, ರೋಮದ, ಚರ್ಮದ, ವೃಕ್ಷದ ಎಲೆಯ-ಸಿಪ್ಪೆಯ ವಸ್ತ್ರಗಳ ಆವರಣದಿಂದ ರಹಿತ ಮತ್ತು ಭಸ್ಮ ಬಳೆಯುವುದರಿಂದ ರಹಿತ ಹಾಗೂ ಆವರಣರಹಿತವಿರುವುದು ಅದು ಅವರ ಕಾಯಶುದ್ಧಿಯಿದೆ. ಅದು ಸಮಸ್ತ ಆಭರಣಗಳಿಂದ ರಹಿತವಿದೆ, **ಅದು ಸ್ನಾನ, ಗಂಧ, ಲೇಪನ ಮೊದಲಾದ ಸಂಸ್ಕಾರದಿಂದ ರಹಿತವಿದೆ.** ಶರೀರದ ಮೇಲೆ ಮಣ್ಣು, ಧೂಳು, ತೃಣ, ಬೆವರು ಮೊದಲಾದವು ಮೆತ್ತಿಕೊಂಡರೂ ಅದನ್ನು ದೂರ

ಮಾಡದಿರುವುದು ಅದು ಸಂಸ್ಕಾರರಹಿತವಿದೆ. ಕಣ್ಣು, ಮೂಗು, ಮಸ್ತಕ, ಲಲಾಟ, ಓಷ್ಠ ಸ್ಕಂಧ, ಕೈ, ಬೆರಳು ಇತ್ಯಾದಿಗಳನ್ನು ಅಲ್ಲಾಡಿಸಿ ಸಂಕೇತ ಮಾಡುವ ರೂಪದ ವಿಕಾರದಿಂದ ರಹಿತವಿದೆ.

ಸರ್ವತ್ರ ಕ್ರಿಯೆಯಲ್ಲಿ ಯತ್ನಾಚಾರದೊಡನೆ ಪ್ರಶಮ ಸುಖದ ಮೂರ್ತಿಯ ಸಮಾನವೇ ಕಂಡು ಬರುತ್ತಾರೆ. ಅದೇನು ಶರೀರವಿದ್ದರೂ ಅವರಿಗೆ ಬೇರೆ ಯಾವುದರಿಂದಲೂ ಭಯವಿಲ್ಲ, ಮತ್ತು ಬೇರೆ ಯಾವುದಕ್ಕೂ ಅವರಿಂದ ಭಯವಿಲ್ಲದಂಥ ಕಾರ್ಯದ ವಿಶುದ್ಧಿಯು ಸಾಧುಗಳಿಗೇ ಇರುತ್ತದೆ. ಏಕದೇಶ ಶುದ್ಧಿಯ ಧಾರಕರಾದ ಶ್ರಾವಕರು ಕೂಡ ಅವುಗಳಿಂದ ತಮಗೆ ಹಾಗೂ ಇತರರಿಗೆ ಕಾಮಭಾವ ಉತ್ಪನ್ನವಾಗದಂಥ ಅಭಿಮಾನವುತ್ಪನ್ನವಾದಂಥ, ಭಯವು ಉತ್ಪನ್ನವಾಗದಂಥ ವಸ್ತ್ರಾಭರಣಗಳನ್ನು ಧರಿಸುತ್ತಾರೆ. ಜನರಲ್ಲಿ ಮಾನ್ಯ ತಮ್ಮ ಪದವಿಗೆ ಅನುಕೂಲ, ಅವಸ್ಥೆಗೆ ಯೋಗ್ಯವಿರುವ ಬಟ್ಟೆಗಳನ್ನು ತೊಡುವುದು ಮತ್ತು ಅಂಗಗಳ ಚೇಷ್ಟೆ ಕಣ್ಣುಗಳಿಂದ ನೋಡುವುದು, ವಚನಗಳನ್ನಾಡುವುದು, ಕೂಡ್ರುವುದು, ಮಲಗುವುದು, ನಡೆಯುವುದು, ರಾಗ, ಅಭಿಮಾನ ಮೊದಲಾದ ದೋಷಗಳಿಂದ ರಹಿತವಾದ ಪ್ರವರ್ತನೆ ಮಾಡುವುದು ಅದು ಕಾಯಶುದ್ಧಿಯಿದೆ.

**ವಿನಯಶುದ್ಧಿ :** ಅರಹಂತ ಮೊದಲಾದ ಪರಮಗುರುಗಳ ಪೂಜೆಯಲ್ಲಿ ಯಥಾಯೋಗ್ಯ ಲೀನತೆ ಮತ್ತು ಸಮ್ಯಗ್ಜ್ಞಾನಾದಿಗಳಲ್ಲಿ ಯಥಾವಿಧಿ ಭಕ್ತಿ ಸಹಿತವಾಗಿರುವುದು ಅದು ವಿನಯಶುದ್ಧಿಯಿದೆ. ಯಾವಾಗಲೂ ಗುರುಗಳಿಗೆ ಅನುಕೂಲವಾಗಿ ಪ್ರವರ್ತಿಸುವುದು, ಪ್ರಶ್ನೆ ಮಾಡುವಲ್ಲಿ, ಸ್ವಾಧ್ಯಾಯದಲ್ಲಿ, ವಾಚನದಲ್ಲಿ, ಕಥನದಲ್ಲಿ, ವಿನಂತಿಯಲ್ಲಿ ನಿಪುಣತೆ ಮತ್ತು ದೇಶ, ಕಾಲ, ಭಾವಗಳನ್ನು ತಿಳಿದುಕೊಂಡು ದಕ್ಷತೆಯೊಡನೆ ಆಚಾರ್ಯರಿಗೆ ಅನುಕೂಲವಾಗಿ ಪ್ರವರ್ತಿಸುವುದು-ಆಚರಣೆ ಮಾಡುವುದು ಅದು ವಿನಯಶುದ್ಧಿಯಿದೆ. ವಿನಯವೇ ಸಮಸ್ತ ಚಾರಿತ್ರಸಂಪದದ ಮೂಲವಿದೆ, ವಿನಯವೇ ಪುರುಷನ ಆಭೂಷಣವಿದೆ, ವಿನಯವೇ ಸಂಸಾರ ಸಾಗರದಿಂದ ದಾಟುವ ಸಲುವಾಗಿ ನೌಕೆಯಿದೆ. ಆದುದರಿಂದ ಗೃಹಸ್ಥರು ಕೂಡ ಮನ-ವಚನ-ಕಾಯದಿಂದ ಪ್ರತ್ಯಕ್ಷ-ಪರೋಕ್ಷ ವಿನಯವನ್ನು ಧಾರಣ ಮಾಡಬೇಕು. ಇದರ ವಿಶೇಷ ವರ್ಣನೆಯನ್ನು ಮುಂದೆ ತಪದ ಪ್ರಕರಣದಲ್ಲಿ ಮಾಡಲಾಗುವುದು.

**ಈರ್ಯಾಪಥಶುದ್ಧಿ :** ಸಾಧುಗಳ ಈರ್ಯಾಪಥ ಶುದ್ಧಿಯು ಹೀಗಿರುತ್ತದೆ. ಅನೇಕ ಪ್ರಕಾರದ ಜೀವಗಳ ಸ್ಥಾನ, ಜೀವಗಳ ಉತ್ಪತ್ತಿರೂಪ ಯೋನಿ ಹಾಗೂ ಜೀವವಿರುವಂಥ ಯಾವ-ಯಾವ ಆಶ್ರಯ ಸ್ಥಾನಗಳಿವೆ ಅವನ್ನು ತಿಳಿದುಕೊಂಡು ಯತ್ನಾಚಾರಪೂರ್ವಕ ಆ ಜೀವಗಳಿಗೆ ಕಷ್ಟವಾಗುವುದನ್ನು ದೂರದಿಂದಲೇ ತ್ಯಾಗ ಮಾಡಿ ಗಮನ ಮಾಡುತ್ತಾರೆ. ತಮ್ಮ ಜ್ಞಾನದಿಂದ ಸೂರ್ಯಪ್ರಕಾಶದಲ್ಲಿ ನೇತ್ರೇಂದ್ರಿಯದ ಮೂಲಕ ಬೆಳಕಿನಲ್ಲಿ ನೋಡುತ್ತ ಗಮನ ಮಾಡುತ್ತಾರೆ. ಮಾರ್ಗದಲ್ಲಿ ಅವಸರದೊಡನೆ ಶೀಘ್ರತೆಯಿಂದ ಗಮನ, ವಿಲಂಬತೆಯೊಡನೆ ಗಮನ, ಸಂಭ್ರಮಪೂರ್ವಕ (ಮರೆತು) ಗಮನ, ವಿಸ್ಮಯ ರೂಪದ ಆಶ್ರಯ ಮಾಡುತ್ತ ಗಮನ, ಕ್ರೀಡೆ ಮಾಡುತ್ತ ಗಮನ, ಶರೀರವನ್ನು ವಿಕಾರಯುಕ್ತವಾಗಿ ಮಾಡುತ್ತ ಗಮನ, ದಿಸೆಗಳ ಕಡೆಗೆ ನೋಡುತ್ತ ಗಮನ ಮಾಡುವುದು-ಇವು ಗಮನದ ದೋಷಗಳಿವೆ. ಈ ದೋಷಗಳಿಂದ ರಹಿತ ಮುಂದೆ ಮುಂದೆ ನಾಲ್ಕು ಮೊಳ ನೆಲವನ್ನು ನೋಡುತ್ತ, ಯಾವ ಮಾರ್ಗದ ಮೇಲೆ ಅನೇಕ ಮನುಷ್ಯರು, ಚಕ್ಕಡಿ, ಎತ್ತು, ಕುದುರೆ ಮೊದಲಾದವು ನಡೆದು ಹೋಗಿವೆ, ಯಾವ ಮಾರ್ಗದಲ್ಲಿ ಪ್ರಾತಃಕಾಲದ ವಾಯುವಿನ ಸ್ಪರ್ಶವಾಗಿ ಹೋಗಿದೆ, ಯಾವ ಮಾರ್ಗದಲ್ಲಿ ಸೂರ್ಯನ ಕಿರಣಗಳ ಸಂಚಾರವಾಗಿ ಹೋಗಿದೆ ಆ ಮಾರ್ಗದ ಮೇಲೆ ಹಗಲುಹೊತ್ತಿನಲ್ಲಿ ಗಮನ ಮಾಡುವಂಥ ಸಾಧುಗಳಿಗೆ ಈರ್ಯಾಸಮಿತಿಯಿರುತ್ತದೆ.

**ಈರ್ಯಾಸಮಿತಿಯಿದ್ದ ಮೇಲೆಯೇ ಸಂಯಮವು ಪ್ರತಿಷ್ಠಿತ** (ಆದರಯೋಗ್ಯ) **ವಾಗುತ್ತದೆ, ಸುನೀತಿಯು ಇದ್ದ ಮೇಲೆಯೇ ವೈಭವವು ಪ್ರತಿಷ್ಠಿತವಾಗುತ್ತದೆ.** ಇದರದೇ ಏಕದೇಶ ಧರ್ಮವನ್ನು ಅಂಗೀಕಾರ ಮಾಡುವಂಥ ಗೃಹಸ್ಥರು ಕೂಡ ಈರ್ಯಾಪಥದ ಶುದ್ಧಿರೂಪ ಗಮನ ಮಾಡುವ ಭಾವನೆಯನ್ನಿಡಬೇಕು, ಮತ್ತು ಶಕ್ತಿಗನುಸರಿಸಿ ಮಾರ್ಗದಲ್ಲಿ ಕ್ರಿಮಿ-ಕೀಟಕ, ಹಸಿರು ಹುಲ್ಲು, ಗರಿಕೆ, ಕೊಳಚೆ ಇವೇ ಮೊದಲಾದುವನ್ನು ಉಲ್ಲಂಘಿಸಿ ದಯೆಯ ಪರಿಣಾಮದಿಂದ ಗಮನ ಮಾಡುವುದು ಉಚಿತವಿದೆ. ನೋಡಿ-ಶೋಧಿಸಿ ಗಮನ ಮಾಡುವಂಥ ಗೃಹಸ್ಥರಿಗೆ ಇಹಲೋಕದಲ್ಲಿ ಕೂಡ

ಹೊಂಡದಲ್ಲಿ ಹೊರಳಿ ಬೀಳುವ, ಎಡವುವ, ಚೇಳು-ಸರ್ಪ ಮೊದಲಾದ ದುಷ್ಟ ಜೀವಗಳ ಬಾಧೆಯಾಗುವುದಿಲ್ಲ, ಜಿನದೇವರ ಆಜ್ಞೆಯ ಪಾಲನೆಯೂ ಆಗಿ ಹೋಗುತ್ತದೆ.

**ಭಿಕ್ಷಾಶುದ್ಧಿ :** ಆಹಾರದ ಶುದ್ಧಿ; ಈಗ ಮುನೀಶ್ವರರ ಭಿಕ್ಷಾಶುದ್ಧಿಯ ವರ್ಣನೆ ಮಾಡುತ್ತಾರೆ. ಸಾಧುಗಳು ಯಾವಾಗ ಭಿಕ್ಷೆಯ ಸಲುವಾಗಿ ವನದಿಂದ ನಗರಗಳಿಗೆ ಬರುತ್ತಾರೆ ಆಗ ದೇಶದ ರೀತಿಯನ್ನು ಕಾಲವನ್ನು ತಿಳಿದುಕೊಂಡು ಮತ್ತು ನಗರ-ಗ್ರಾಮಗಳನ್ನು ಉಪದ್ರವ ರಹಿತವೆಂದು ತಿಳಿದುಕೊಂಡು ಹೋಗುತ್ತಾರೆ. ಅಗ್ನಿಯ ಉಪದ್ರವ, ಪರಚಕ್ರದ (ಅನ್ಯ ಧರ್ಮದ ಪ್ರಚಾರ-ಉತ್ಸವದ) ಉಪದ್ರವ, ದೊರೆ ಮೊದಲಾದ ಮಹಂತ ಪುರುಷರ ಮರಣದ ವಿಘ್ನ ಮತ್ತು ತಮ್ಮ ಧರ್ಮದಲ್ಲಿ ವಿಘ್ನವಿರುವುದನ್ನು ತಿಳಿದು ಭಿಕ್ಷೆಗೆ ಹೋಗುವುದಿಲ್ಲ, ಮಹಾ ಹಿಂಸೆಯಾಗುವುದನ್ನು ತಿಳಿದರೂ ಹೋಗುವುದಿಲ್ಲ.

ಯಾವ ಕಾಲದಲ್ಲಿ ಯಂತ್ರಗಳ, ಆಯುಧಗಳ ಅತ್ಯಂತ ಉಗ್ರ ಶಬ್ದವಾಗುತ್ತ ಒಮ್ಮೆಲೆ ಮಂದವಾದರೆ ಮತ್ತು ಅನೇಕ ವೇಷಧಾರಿಗಳು ಭಿಕ್ಷೆಗೆ ಬರುತ್ತಿದ್ದರೆ, ಆ ಕಾಲದಲ್ಲಿ ಮಲಮೂತ್ರದ ಬಾಧೆಯಿದ್ದರೆ ಆ ಬಾಧೆಯನ್ನು ನಿವಾರಿಸಿ ನಂತರ ಪಿಂಛದಿಂದ ತಮ್ಮ ಶರೀರದ ಮುಂದಿನ-ಹಿಂದಿನ ಭಾಗವನ್ನು ಶೋಧಿಸಿ, ಕಮಂಡಲು-ಪಿಂಛಿ ತೆಗೆದುಕೊಂಡು ಗಮನ ಮಾಡುತ್ತಾರೆ. ಮಾರ್ಗದಲ್ಲಿ ಹೆಚ್ಚು ಶೀಘ್ರವಾಗಿ ಗಮನ ಮಾಡುವುದಿಲ್ಲ, ವಿಲಂಬ ಮಾಡುತ್ತ ಗಮನ ಮಾಡುವುದಿಲ್ಲ, ಮಾರ್ಗದಲ್ಲಿ ಯಾರೊಡನೆಯೂ ಮಾತುಕತೆ ಮಾಡುವುದಿಲ್ಲ, ಮಾರ್ಗದಲ್ಲಿ ವನಪ್ರದೇಶದ, ನಗರದ, ಗ್ರಾಮದ ಶೋಭೆಯನ್ನು ನೋಡುವುದಿಲ್ಲ. ಎಲ್ಲಿ ಕಲಹ, ವಿಸಂವಾದ, ಕೌತುಕ, ನೃತ್ಯ, ಗೀತ ಮೊದಲಾದವು ನಡೆಯುತ್ತಿದ್ದರೆ ಅವನ್ನು ದೂರದಿಂದಲೇ ಬಿಟ್ಟುಕೊಟ್ಟು ಗಮನ ಮಾಡುತ್ತಾರೆ. ಮಾರ್ಗದಲ್ಲಿ ದುಷ್ಟ ತಿರ್ಯಂಚ, ದುಷ್ಟ ಮನುಷ್ಯ, ಹೆಚ್ಚು ಮನುಷ್ಯ, ಸ್ತ್ರೀ ಮತ್ತು ಪತ್ರ, ಫಲ, ಪುಷ್ಪ, ಬೀಜ, ಜಲ, ಕೊಳೆ ಮೊದಲಾದವು ಬಿದ್ದುಕೊಂಡಿರುವ ಭೂಮಿಯನ್ನು ಬಿಟ್ಟು ದೂರದಿಂದ ಗಮನ ಮಾಡುತ್ತಾರೆ.

ಆಚಾರಾಂಗ ಶಾಸ್ತ್ರದಲ್ಲಿ ಹೇಳಿದ ದೇಶ-ಕಾಲವನ್ನು ತಿಳಿದುಕೊಳ್ಳುವಲ್ಲಿ ನಿಪುಣ ಮತ್ತು ಮಾರ್ಗದಲ್ಲಿ ಗಮನ ಮಾಡುತ್ತಿರುವ ಸಾಧುವು ದಾತಾರನ ಹಾಗೂ ಭೋಜನದ ಚಿಂತನೆ ಮಾಡುವುದಿಲ್ಲ. ಇಂದು ನನಗೆ ಯಾವ ದಾತಾರನು ಭೋಜನ ಕೊಡುವನು, ನನಗೆ ಭೋಜನವು ಬೇಗ ದೊರೆತರೆ ಒಳ್ಳೆಯದು; ಸಿಹಿ ಉಪ್ಪುಗೂಡಿದ, ಬಿಸಿಯಾದ, ಆರಿದ, ಸ್ವಾದಿಷ್ಟವಾದ ಅಥವಾ ಸ್ವಾದವಿಲ್ಲದ ಭೋಜನವು ದೊರೆತರೆ ಒಳ್ಳೆಯದಿದೆಯೆನ್ನುವುದಿಲ್ಲ. ಅವರಂತೂ ಅಂತರಾಯ ಕರ್ಮದ ಕ್ಷಯೋಪಶಮದ ಅನುಸಾರ ಲಾಭ-ಅಲಾಭ ತಿಳಿದುಕೊಂಡು ಭೋಜನದ ಲಾಭ-ಅಲಾಭದಲ್ಲಿ, ಮಾನ-ಅಪಮಾನದಲ್ಲಿ, ಮನದ ವೃತ್ತಿಯನ್ನು ಸಮಾನವಿಡುತ್ತ, ಧರ್ಮಧ್ಯಾನ ರೂಪದ ಚಿಂತನೆ ಮಾಡುತ್ತ, ನಾಲ್ಕು ಆರಾಧನೆಗಳ ಆಶ್ರಯ ಸಹಿತ, ಕ್ಷುಧೆ-ತೃಷೆ ಮೊದಲಾದವುಗಳ ವೇದನೆಯ ಚಿಂತನೆಯನ್ನೂ ಮಾಡದೆ ಭಿಕ್ಷೆಯ ಸಲುವಾಗಿ ಗಮನ ಮಾಡುತ್ತಾರೆ.

**ಲೋಕನಿಂದ್ಯ ಕುಲದಲ್ಲಿ ಗಮನ ಮಾಡುವುದಿಲ್ಲ.** ಉತ್ತಮ ಕುಲದವರಿದ್ದರೂ ಎಲ್ಲಿ ದಾನ ಶಾಲೆಯಿದೆ, ಮದುವೆ ಮೊದಲಾದವು ನಡೆಯುತ್ತಿವೆ, ಮರಣದ ಸೂತಕವಿದೆ, ಗೀತ-ನೃತ್ಯಗಳು ನಡೆಯುತ್ತಿವೆ, ವಾದ್ಯ-ವಾದಿತ್ರ ಬಾರಿಸುವ ಉತ್ಸವ ನಡೆಯುತ್ತಿದೆ, ರೋದನವಾಗುತ್ತಲಿದೆ, ಭಿಕ್ಷೆ-ಭೋಜನದ ಸಲುವಾಗಿ ಬಹಳಷ್ಟು ಜನರು ಏಕತ್ರವಾಗುತ್ತಿದ್ದಾರೆ, ಕಲಹ-ವಿಸಂವಾದ-ಜೂಜು ಕ್ರೀಡೆಗಳು ನಡೆಯುತ್ತಿವೆ; ಬಾಗಿಲು ಹಾಕಲ್ಪಟ್ಟದೆ, ಹೋಗುವವರನ್ನು ಯಾರಾದರೂ ತಡೆಯುತ್ತಿದ್ದಾರೆ, ಆನೆ-ಕುದುರೆ-ಒಂಟೆ-ಎತ್ತು ಮೊದಲಾದವು ದಾರಿಯಲ್ಲಿ ನಿಂತುಕೊಂಡಿವೆ ಅಥವಾ ಕಟ್ಟಿ ಹಾಕಲಾಗಿವೆ, ಅದೆಷ್ಟೋ ಮನುಷ್ಯರ ಸಂದಣಿಯಾಗುತ್ತಲಿದೆ, ಇಕ್ಕಟ್ಟಾದ ಮಾರ್ಗದಲ್ಲಿ ಜನರ ದಟ್ಟಣೆಯಿಂದ ಬರ-ಹೋಗುವುದಾಗುತ್ತಲಿದೆ, ನಾಭಿಗಿಂತ ಅಧಿಕ ಕೆಳಗಿರುವ ಬಾಗಿಲದೊಳಗಿಂದ ಹೋಗಬೇಕಾಗುತ್ತಿದ್ದರೆ, ಹೆಚ್ಚು ಎತ್ತರವಾದ ಮೆಟ್ಟಲುಗಳ ಮೇಲೆ ಹತ್ತಬೇಕಾಗುತ್ತಿದ್ದರೆ, ಅಂಥ ಮನೆಗಳಲ್ಲಂತೂ ಸಾಧುಗಳು ಆಹಾರದ ಸಲುವಾಗಿ ಪ್ರವೇಶವನ್ನೇ ಮಾಡುವುದಿಲ್ಲ.

**ಚಂದ್ರನ ಚಂದ್ರಿಕೆಯ ಹಾಗೆ ಬಡವ-ಬಲ್ಲಿದರೆಲ್ಲರ ಮನೆಗಳಲ್ಲಿ ಹೋಗುತ್ತಾರೆ.** ದೀನ, ಅನಾಥ, ನಿಂದ್ಯ ಕರ್ಮದಿಂದ ಆಜೀವಿಕೆ ಮಾಡುವಂಥ, ಗೀತ-ನೃತ್ಯ-ವಾದ್ಯದಿಂದ ಜೀವನ ಸಾಗಿಸುವಂಥ ಇತ್ಯಾದಿ ಅಯೋಗ್ಯ ಮನೆಗಳಲ್ಲಿ ಭಿಕ್ಷೆಯ ಸಲುವಾಗಿ ಹೋಗುವುದಿಲ್ಲ. ಭಿಕ್ಷೆಯ ಸಲುವಾಗಿ ಮನೆಗಳಲ್ಲಿ ಹೋಗುತ್ತಿದ್ದರೆ ಎಲ್ಲಿಯವರೆಗೆ ಅನ್ಯ ಭಿಕ್ಷುಗಳಿಗೆ ಹಾಗೂ

ಎಲ್ಲ ಜನರಿಗೆ ಬರುವುದರ ನಿರ್ಬಂಧವಿಲ್ಲ. ಅಲ್ಲಿಯವರೆಗೇ ಹೋಗುತ್ತಾರೆ. **ಆಶೀರ್ವಾದ, ಧರ್ಮಲಾಭ ಮೊದಲಾದುವನ್ನು ಮುಖದಿಂದ ಹೇಳುವುದಿಲ್ಲ. ಹುಂಕೃತಿ-ಹುಬ್ಬುಗಳಿಂದ ಸೂಚನೆ ಮೊದಲಾದುವನ್ನು** ಮಾಡುವುದಿಲ್ಲ. ಹೊಟ್ಟೆಯ ಕೃಶತೆಯನ್ನು ತೋರಿಸುವುದಿಲ್ಲ, ಕೈಗಳಿಂದ ಬೇಡುವ ಸೂಚನೆ ಮಾಡುವುದಿಲ್ಲ; ದಾತಾರರನ್ನು ನೋಡುವ ಸಲುವಾಗಿ, ಭೋಜನವನ್ನು ನೋಡುವ ಸಲುವಾಗಿ, ಮೇಲ್ಭಾಗ ಅಥವಾ ದಿಶೆ-ವಿದಿಶೆಗಳಲ್ಲಿ ನೋಡುವುದಿಲ್ಲ, ಹೆಚ್ಚು ಸಮಯದವರೆಗೆ ಎದ್ದು ನಿಂತುಕೊಳ್ಳುವುದಿಲ್ಲ, ಮಿಂಚಿನ ಹೊಳಪಿನಂತೆ ಅರ್ಧ ಅಂಗಳದವರೆಗೆ ಹೋಗಿ ನಿಂತುಕೊಳ್ಳುತ್ತಾರೆ; ತಿಷ್ಠ, ತಿಷ್ಠ-ಎಂದು ಮೂರು ಸಾರಿ ಆದರಪೂರ್ವಕ ಹೇಳಿ ನಿಲ್ಲಿಸಿಕೊಂಡರೆ ನಿಂತುಕೊಳ್ಳುತ್ತಾರೆ, ಒಂದು ಸಾರಿ ಹೊರಟು ಬಂದರೆಂದರೆ ಪುನಃ ಅದೇ ಮನೆಯಲ್ಲಿ ಹೋಗುವುದಿಲ್ಲ, ಮತ್ತೆ ಬೇರೆ ಮನೆಯಲ್ಲಿ ಪ್ರವೇಶ ಮಾಡುತ್ತಾರೆ, ಅಂತರಾಯವಾಗಿ ಹೋದರೆ ಪುನಃ ಬೇರೆ ಯಾವ ಮನೆಯಲ್ಲಿಯೂ ಹೋಗುವುದಿಲ್ಲ, ಮರಳಿ ನೇರವಾಗಿ ವನದ ಕಡೆಗೇನೇ ಹೊರಟು ಹೋಗುತ್ತಾರೆ.

ದೀನತೆಯಿಲ್ಲದೆ, ಯಾಚನೆಯಿಲ್ಲದೆ, ಪ್ರಾಸುಕ ಆಹಾರವನ್ನು ಆಚಾರಾಂಗ ಶಾಸ್ತ್ರದಲ್ಲಿ ಹೇಳಿದುದರ ಅನುಸಾರ ನಲವತ್ತಾರು ದೋಷ, ಹದಿನಾಲ್ಕು ಮಲ, ಮೂವತ್ತೆರಡು ಅಂತರಾಯರಹಿತ ಭೋಜನವನ್ನು ಕೇವಲ ಪ್ರಾಣ ರಕ್ಷಣೆಯ ಕಾರಣದಿಂದ ಅಂಗೀಕಾರ ಮಾಡುತ್ತಾರೆ. ಸುಂದರ ರಸ-ನೀರಸದಲ್ಲಿ, ಲಾಭ-ಅಲಾಭದಲ್ಲಿ ಸಂತೋಷಿಯಾಗಿರುವುದು ಅದು ಸಾಧುವಿನ ಭಿಕ್ಷೆಯಿದೆ. ಈ ಭಿಕ್ಷೆಯ ಶುದ್ಧತೆಯಿಂದ ಯಾವ ಪ್ರಕಾರ ಸಾಧು ಪುರುಷರ ಸೇವೆಯಿಂದ ಗುಣಗಳ ಸಂಪತ್ತು ಪ್ರಾಪ್ತವಾಗಿ ಹೋಗುತ್ತದೆ ಅದೇ ಪ್ರಕಾರ ಚಾರಿತ್ರದ ಉಜ್ವಲ ಸಂಪತ್ತು ಪ್ರಾಪ್ತವಾಗುತ್ತದೆ.

**ಮುನಿವರರ ಭಿಕ್ಷೆಯು ಐದು ಪ್ರಕಾರದಿಂದ ಆಗುತ್ತದೆ.** ಗೋಚರೀ ವೃತ್ತಿ, ಅಕ್ಷಮ್ರಕ್ಷಣವೃತ್ತಿ, ಉದರಾಗ್ನಿ ಪ್ರಶಮನ ವೃತ್ತಿ, ಭ್ರಾಮರೀವೃತ್ತಿ, ಗರ್ತಪೂರಣವೃತ್ತಿಯೆಂದು ಐದು ಪ್ರಕಾರದಿಂದ ಆಹಾರದಲ್ಲಿ ಸಾಧುಗಳ ಪ್ರವೃತ್ತಿಯಾಗುತ್ತದೆಯೆಂದು ತಿಳಿಯುವುದು.

**ಗೋಚರೀವೃತ್ತಿ ಭಿಕ್ಷೆ :-** ಯಾವ ಪ್ರಕಾರ ಆಕರ್ಷಕವಾದ ವಸ್ತ್ರಾಭರಣಗಳನ್ನು ಧರಿಸಿ, ರೂಪು-ಯೌವನದಿಂದ ಯುಕ್ತಳಾದ ಸುಂದರ ಸ್ತ್ರೀಯ ಮೂಲಕ ಹಾಕಲ್ಪಟ್ಟ ಹುಲ್ಲನ್ನು ಗೋವು ತಿನ್ನುತ್ತದೆ, ಆದರೆ ಆ ಸ್ತ್ರೀಯ ಅಂಗಾಂಗಳ ಸೌಂದರ್ಯ, ಆಭರಣ, ವಸ್ತ್ರಗಳನ್ನು ನೋಡುವುದಿಲ್ಲ, ಕೇವಲ ಹುಲ್ಲು ತಿನ್ನುವುದೇ ಅದರ ಪ್ರಯೋಜನವಿದೆ; ಅದೇ ಪ್ರಕಾರ ಸಾಧುಗಳು ಕೂಡ ದಾತಾರನ ರೂಪು, ಆಭರಣ, ಸೌಂದರ್ಯವನ್ನು ನೋಡುವುದಿಲ್ಲ, ನವಧಾ ಭಕ್ತಿಯಿಂದ ಬಲಗೊಂಡು ಕರೆದೊಯ್ದು ನಂತರ ಕೈಯ್ಯಲ್ಲಿ ಹಾಕಿದ ಭೋಜನದ ತುತ್ತನ್ನು ಭಕ್ಷಣ ಮಾಡುತ್ತಾರೆ ಅದು ಗೋಚರೀ ವೃತ್ತಿಯಿದೆ.

ಯಾವ ಪ್ರಕಾರ ಗೋವು ವನದಲ್ಲಿ ಅನೇಕ ಸ್ಥಾನಗಳಲ್ಲಿ ನಿಂತುಕೊಳ್ಳುತ್ತ ಹೇಗೆ ಹುಲ್ಲು ದೊರಕುತ್ತದೆ ಹಾಗೆ ಭಕ್ಷಣ ಮಾಡುತ್ತದೆ, ವನದ ಶೋಭೆ, ವೃಕ್ಷಗಳ ಶೋಭೆಯನ್ನು ನೋಡುವಲ್ಲಿ ಪರಿಣಾಮ ತೊಡಗಿಸುವುದಿಲ್ಲ, ಅದೇ ಪ್ರಕಾರ ಸಾಧುಗಳು ಕೂಡ ಗೃಹಸ್ಥರ ಮನೆಯಲ್ಲಿ ಹೋಗಿ ಕೇವಲ ತಮ್ಮ ಕೈಯಲ್ಲಿಟ್ಟಿರುವ ಭೋಜನದ ತುತ್ತನ್ನು ತಿನ್ನುವಲ್ಲಿ ದೃಷ್ಟಿಯಿಡುತ್ತಾರೆ. ಗೃಹಸ್ಥನ ವಿಶಾಲ ಮನೆ, ಶಯ್ಯೆ, ಆಸನ ಮೊದಲಾದುವನ್ನು ನೋಡುವಲ್ಲಿ; ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚಿನ ಪಾತ್ರೆ ಮೊದಲಾದುವನ್ನು ನೋಡುವಲ್ಲಿ; ಅನೇಕ ಭೋಜನ ಹಾಗೂ ಪರಿವಾರ ಜನರನ್ನು ನೋಡುವಲ್ಲಿ ಪರಿಣಾಮ ತೊಡಗಿಸುವುದಿಲ್ಲ; ಪರಿವಾರ ಜನರ ಕೋಮಲ, ಲಲಿತರೂಪು-ವೇಷ ವಿಲಾಸಗಳನ್ನು ನೋಡುವಲ್ಲಿ ಇಚ್ಛಾರಹಿತರಾಗಿ ರೂಕ್ಷ-ಆರ್ದ್ರ ಆಹಾರವನ್ನು ನೋಡದೆ ಗೋವಿನ ಸಮಾನ ಭೋಜನ ಮಾಡುತ್ತಾರೆ, ಅದು ಗೋಚರೀವೃತ್ತಿ ಅಥವಾ ಗವೇಷಣವೆಂದು ಕರೆಸಿಕೊಳ್ಳುತ್ತದೆ.

**ಅಕ್ಷಮ್ರಕ್ಷಣವೃತ್ತಿ ಭಿಕ್ಷೆ :** ಯಾವ ಪ್ರಕಾರ ವ್ಯಾಪಾರಸ್ಥನು ರತ್ನಗಳಿಂದ ತುಂಬಿದ ಗಾಡಿಯ ಗಾಲಿಯಲ್ಲಿ ಎಣ್ಣೆ ಮೊದಲಾದ ಸ್ನಿಗ್ಧ ಪದಾರ್ಥದ ಹೆರೆ ಹಾಕಿ ತನ್ನ ಇಚ್ಛಿತ ಸ್ಥಾನಕ್ಕೆ-ದೇಶಾಂತರಕ್ಕೆ ತೆಗೆದುಕೊಂಡು ಹೋಗುತ್ತಾನೆ; ಅದೇ ಪ್ರಕಾರ ಸಾಧುಗಳು ಕೂಡ ಗುಣರೂಪದ ರತ್ನಗಳಿಂದ ತುಂಬಿದ ತನ್ನ ದೇಹರೂಪದ ಗಾಡಿಗೆ ನಿರ್ದೋಷ ಭೋಜನರೂಪದ ಹೆರೆ ಹಾಕಿ ತನ್ನ ಇಚ್ಛಿತ ಸಮಾಧಿರೂಪದ ನಗರಕ್ಕೆ ತೆಗೆದುಕೊಂಡು ಹೋಗುತ್ತಾರೆ, ಅದನ್ನು ಅಕ್ಷಮ್ರಕ್ಷಣ ವೃತ್ತಿಯೆಂದು ಹೇಳುತ್ತಾರೆ.

**ಉದರಾಗ್ನಿ ಪ್ರಶಮನವೃತ್ತಿ ಭಿಕ್ಷೆ :** ಯಾವ ಪ್ರಕಾರ ಅನೇಕ ವಸ್ತ್ರ, ಆಭರಣ ಮೊದಲಾದವುಗಳಿಂದ ತುಂಬಿದ ಬೊಕ್ಕಸ ಮನೆಗೆ ತಗಲಿದ ಬೆಂಕಿಯನ್ನು ಗೃಹಸ್ಥನು ಶುದ್ಧ ಅಥವಾ ಅಶುದ್ಧ ಜಲದಿಂದ ಆರಿಸಿ ತನ್ನ ವಸ್ತುಗಳ ರಕ್ಷಣೆ ಮಾಡುತ್ತಾನೆ ಅದೇ ಪ್ರಕಾರ ಸಾಧುಗಳು ಕೂಡ ತಮ್ಮ ಉದರರೂಪದ ಬೊಕ್ಕಸದಲ್ಲಿ ಉತ್ಪನ್ನವಾದ ಕ್ಷುಧೆ-ತೃಷೆರೂಪದ ಅಗ್ನಿಯನ್ನು ಸುಂದರ-ಅಸುಂದರ (ಸರಸ-ನೀರಸ) ಭೋಜನದಿಂದ ಆರಿಸುತ್ತಾರೆ. ಅದು ಉದರಾಗ್ನಿ ಪ್ರಶಮನವೃತ್ತಿಯಿದೆ.

**ಭ್ರಮರಾಹಾರ ವೃತ್ತಿ ಭಿಕ್ಷೆ :** ಯಾವ ಪ್ರಕಾರ ದುಂಬಿಯು ಹೂವಿಗೆ ಸ್ವಲ್ಪ ಕೂಡ ಕಷ್ಟ-ಬಾಧೆಯನ್ನು ತಗಲಿಸದೆ ಹೂವಿನ ಗಂಧವನ್ನು ತೆಗೆದುಕೊಳ್ಳುತ್ತದೆ, ಅದೇ ಪ್ರಕಾರ ಸಾಧುಗಳು ಕೂಡ ದಾತಾರನಿಗೆ ಸ್ವಲ್ಪ ಕೂಡ ಬಾಧೆಯಾಗದ ರೀತಿಯಿಂದ ಭೋಜನ ಮಾಡುತ್ತಾರೆ, ಅದು ಭ್ರಮರಾಹಾರ ವೃತ್ತಿಯಿದೆ.

**ಗರ್ತಪೂರಣವೃತ್ತಿ ಭಿಕ್ಷೆ :** ಯಾವ ಪ್ರಕಾರ ಗೃಹಸ್ಥನ ಮನೆಯ ಅಂಗಳದಲ್ಲಿ ಒಂದಿಷ್ಟು ತಗ್ಗು ಬಿದ್ದು ಬಿಟ್ಟಿದ್ದರೆ ಅವನು ಆ ತಗ್ಗನ್ನು ಮಣ್ಣು, ಕಲ್ಲು ಮೊದಲಾದವುಗಳಿಂದ ತುಂಬಿ ಬಿಡುತ್ತಾನೆ, ಅದೇ ಪ್ರಕಾರ ಸಾಧುಗಳು ಕೂಡ ಉದರರೂಪದ ತಗ್ಗನ್ನು ಸರಸ-ನೀರಸ ಭೋಜನದಿಂದ ತುಂಬುತ್ತಾರೆ, ಅದನ್ನು ಗರ್ತಪೂರಣ ವೃತ್ತಿಯೆಂದು ಹೇಳುತ್ತಾರೆ. ಈ ಪ್ರಕಾರ ಐದು ಪ್ರಕಾರದಿಂದ ಭೋಜನ ಮಾಡುವಂಥ ಸಾಧುಗಳ ಭಿಕ್ಷಾಶುದ್ಧಿಯಿರುತ್ತದೆ.

ಶ್ರಾವಕನೂ ಅನ್ಯಾಯ ಬಿಟ್ಟುಕೊಟ್ಟು, ಹೆಚ್ಚು ಹಿಂಸೆಯ ಕಾರಣವಿರುವ ವ್ಯವಹಾರ ಆರಂಭವನ್ನು ಬಿಟ್ಟುಕೊಟ್ಟು ಕರ್ಮದ ಉದಯದಿಂದ ಪ್ರಾಪ್ತವಾದ ಧನದಲ್ಲಿ ಸಂತೋಷಧಾರಣ ಮಾಡಿ, ಇತರರಿಗೆ ಕಷ್ಟಕೊಡದೆ, ನ್ಯಾಯದಿಂದ ಸಂಪಾದಿಸಿದ ಧನವನ್ನು ಮದ-ವಿಷಾದ-ದೀನತೆಯಿಂದ ರಹಿತನಾಗಿ ದಾನದ ವಿಭಾಗ ಮಾಡಿ ಭೋಗಿಸುತ್ತಾನೆ. ಅಭಕ್ಷ್ಯ ಮೊದಲಾದ ಸದೋಷ ಭೋಜನದ ತ್ಯಾಗ ಮಾಡಿ ಹಗಲಿನಲ್ಲಿ ಭೋಗಾಂತರಾಯ-ಲಾಭಾಂತರಾಯಕರ್ಮದ ಕ್ಷಯೋಪಶಮದ ಪ್ರಮಾಣ, ದೊರೆತ ಸರಸ-ನೀರಸದಲ್ಲಿ ಕುಟುಂಬದ ವಿಭಾಗ ಮತ್ತು ದಾನದ ವಿಭಾಗ ಮಾಡಿ ಭೋಜನಾದಿಗಳನ್ನು ಮಾಡುತ್ತಾನೆ. **ಗೃಹಸ್ಥನ ಭೋಜನದ ಶುದ್ಧತೆಯು ಲಾಲಸಾರಹಿತ, ಗೃದ್ಧತಾರಹಿತವಾಗಿಯೇ** ಇರುತ್ತದೆ.

**ಪ್ರತಿಷ್ಠಾಪನ ಶುದ್ಧಿ :** ಸಂಯಮೀ ಪುರುಷರು ತಮ್ಮ ಶರೀರದ ಉಗುರು, ಕೂದಲು, ಕಫ, ಮೂಗಿನ ಮಲ, ಮೂತ್ರ, ಮಲ ಮೊದಲಾದುವನ್ನು ದೇಶ-ಕಾಲ ತಿಳಿದುಕೊಂಡು, ವಿರೋಧರಹಿತ, ಎಲ್ಲ ಜೀವಗಳಿಗೆ ಬಾಧೆಯಾಗುವುದಿಲ್ಲ, ಇತರರ ಪರಿಣಾಮ ಮಲಿನವಾಗುವುದಿಲ್ಲ-ಅಂಥ ಕ್ಷೇತ್ರದಲ್ಲಿ ಕ್ಷೇಪಿಸುತ್ತಾರೆ ಅವರಿಗೆ ಪ್ರತಿಷ್ಠಾಪನ ಶುದ್ಧಿಯಿರುತ್ತದೆ. ಗೃಹಸ್ಥನೂ ತನ್ನ ಶರೀರದ ಮಲ ಹಾಗೂ ಜಲ,ಕಸ-ಕಡ್ಡಿ, ಬೂದಿ, ಮಣ್ಣು, ಕಲ್ಲು, ಕಟ್ಟಿಗೆಗಳನ್ನು ಯತ್ನಪೂರ್ವಕ ಎಸೆಯುತ್ತಾನೆ. ಯಾವ ಚಿಕ್ಕ-ಪುಟ್ಟ ಜೀವಗಳ ವಿರಾಧನೆಯಾಗಬಾರದು, ಯಾರ ಜತೆ ಕಲಹ-ವಿಸಂವಾದವಾಗಬಾರದು, ತಮ್ಮ ಶರೀರಕ್ಕೆ ಬಾಧೆಯಾಗಬಾರದು, ಅನ್ಯ ಜನರಿಗೆ ಗ್ಲಾನಿಯುತ್ಪನ್ನವಾಗಬಾರದು ಆ ಪ್ರಕಾರ ಕ್ಷೇಪಣೆ ಮಾಡಬೇಕಾಗುವುದು.

**ಶಯನಾಸನಶುದ್ಧಿ :** ಶಯನಾಸನ ಶುದ್ಧಿಯು ಸಾಧುಗಳ ಮುಖ್ಯ ಆಚರಣೆಯಿದೆ. ಎಲ್ಲಿ ಸ್ತ್ರೀಯರು, ನಪುಂಸಕ, ಮದ್ಯಗುಡುಕ, ಬೇಟೆಗಾರ ಇತ್ಯಾದಿ ಪಾಪೀ ಜನರ ಬರ-ಹೋಗುವಿಕೆಯಲ್ಲಿ; ಎಲ್ಲಿ ಶೃಂಗಾರ, ಶರೀರ, ವಿಕಾರ, ಮೋಹಕ ಆಭರಣ ಧರಿಸಿದ ಸ್ತ್ರೀಯರು ಸಂಚರಿಸುವರು, ವೇಶ್ಯೆಯರ ಕ್ರೀಡೆಯ ವನ, ಉಪವನ, ಗೀತ-ನೃತ್ಯ-ವಾದ್ಯಗಳಿಂದ ವ್ಯಾಪ್ತವಾದ ಸ್ಥಾನಗಳನ್ನಂತೂ ದೂರದಿಂದಲೇ ತ್ಯಾಗ ಮಾಡಿರುತ್ತಾರೆ. ಪರ್ವತಗಳ ಅಕೃತ್ರಿಮ ಗುಹೆ, ವೃಕ್ಷಗಳ ಪೊಟರೆ, ಶೂನ್ಯಗೃಹ, ತಮ್ಮ ಸಲುವಾಗಿ ಮಾಡದಿರುವ, ಆರಂಭ ರಹಿತವಾದ ಸ್ಥಾನಗಳಲ್ಲಿ ಮತ್ತು ಶುದ್ಧ ಭೂಮಿಯಲ್ಲಿ ಶಯನ ಆಸನ ಮಾಡುತ್ತಾರೆ.

ಗೃಹಸ್ಥರೂ ವಿಷಯಗಳ ವಿಕಾರ ರಹಿತ, ಸ್ತ್ರೀ, ನಪುಂಸಕ, ದುಷ್ಟ, ಕಲಹ, ವಿಸಂವಾದ, ವಿಕಥೆ ಮೊದಲಾದುವಿಂದ ರಹಿತ, ಪರಿಣಾಮದ ಉಜ್ವಲತೆಯು ಕೆಟ್ಟು ಹೋಗದಂಥ ಸ್ಥಾನಗಳಲ್ಲಿ ಶಯನ ಆಸನ ಮಾಡುತ್ತಾರೆ. **ಸ್ಥಾನದ ದೋಷದಿಂದ ಪರಿಣಾಮದಲ್ಲಿ ದುರ್ಧ್ಯಾನವಿರುತ್ತದೆ, ದುಷ್ಟ ಚಿಂತನೆಯಾಗುತ್ತದೆ.** ಆದುದರಿಂದ ತಮ್ಮ ಆಜೀವಿಕೆ ಮೊದಲಾದವುಗಳ ಸಾಧನೆಯನ್ನು ನ್ಯಾಯಮಾರ್ಗದಿಂದ ಮಾಡಿ, ನಿರಾಕುಲ ಸ್ಥಾನದಲ್ಲಿಯೇ ಶಯನ ಆಸನ ಮಾಡಬೇಕಾಗುವುದು.

**ವಾಕ್ಯಶುದ್ಧಿ :** ಸಾಧುಗಳು ಪೃಥ್ವೀಕಾಯ ಮೊದಲಾದ ಜೀವಗಳ ವಿರಾಧನೆಯ ಪ್ರೇರಣೆಯಿಂದ ರಹಿತ, ಕಠೋರ, ಕಟುಕ ಮೊದಲಾದ ಪರಪೀಡೆಗೆ ಕಾರಣವಾದ ವಚನಗಳಿಂದ ರಹಿತ, ವ್ರತ-ಶೀಲ-ಸಂಯಮದ ಉಪದೇಶರೂಪ ವಚನಗಳನ್ನು ಹೇಳುತ್ತಾರೆ, ಹಿತ-ಮಿತ-ಮಧುರ-ಮನೋಹರ ವಚನಗಳನ್ನು ಹೇಳುತ್ತಾರೆ ಅದು ವಾಕ್ಯಶುದ್ಧಿಯಿದೆ. ಗೃಹಸ್ಥನೂ ಎಷ್ಟು ವಚನ ಹೇಳುತ್ತಾನೆ ಅವನು ವಿವೇಕಪೂರ್ವಕವಾಗಿಯೇ ಹೇಳುತ್ತಾನೆ. **ಲೋಕವಿರುದ್ಧ, ಧರ್ಮವಿರುದ್ಧ, ಹಿಂಸೆಯ ಪ್ರೇರಕ, ಅಸತ್ಯ, ಕಟುಕ, ಕರ್ಕಶ ಮೊದಲಾದ ವಚನಗಳನ್ನೆಂದೂ ಹೇಳುವುದಿಲ್ಲ.** ಹೀಗೆ ಎಂಟು ಪ್ರಕಾರದ ಸಂಯಮಿಗಳ ಶುದ್ಧಿಯ ವಿಚಾರ ಮಾಡುತ್ತಾನೆ, ಭಾವನೆ ಭಾವಿಸುತ್ತಿದ್ದರೆ ಅವನು ಹೆಚ್ಚು ಪಾಪಗಳಿಂದ ಲಿಪ್ತನಾಗುವುದಿಲ್ಲ, ಧರ್ಮ ಭಾವನೆಯ ವೃದ್ಧಿ ಮಾಡುತ್ತಾನೆ.

## ತಪ ಭಾವನೆ

ಗೃಹಸ್ಥರೂ ತಪ ಭಾವನೆ ಭಾವಿಸುವುದು ಯೋಗ್ಯವಿದೆ. ತಪದ ಮುಖ್ಯತೆಯಂತೂ ಮುನೀಶ್ವರರಿಗೇ ಇರುತ್ತದೆ, ಆದಾಗ್ಯೂ, ಗೃಹಸ್ಥನು ಕೂಡ ತಪದ ಭಾವನೆಯನ್ನು ಭಾವಿಸುತ್ತಿದ್ದರೆ ರೋಗಾದಿಗಳ ಕಷ್ಟ ಬಂದ ಮೇಲೆ ಚಂಚಲನಾಗುವುದಿಲ್ಲ, ಇಂದ್ರಿಯಗಳ ವಿಕಲತೆಯನ್ನು ಜಯಿಸುತ್ತಾನೆ, ವೃದ್ಧಾವಸ್ಥೆಯಲ್ಲಿ ವೃದ್ಧಾಪ್ಯದಿಂದ ಬುದ್ಧಿಯು ಚಲಿತವಾಗುವುದಿಲ್ಲ, ಊಟ-ತಿಂಡಿಯಲ್ಲಿ ವಿಕಲತೆಯ ಅಭಾವವಾಗುತ್ತದೆ, ಸಂತೋಷವೃತ್ತಿಯು ಪ್ರಕಟವಾಗುತ್ತದೆ, ದೀನತೆಯು ಅಭಾವವಾಗಿ ಹೋಗುತ್ತದೆ, ಲೋಕದಲ್ಲಿ ಯಶಸ್ಸು ಉಜ್ವಲವಾಗುತ್ತದೆ, ಪರಲೋಕದಲ್ಲಿ ಸ್ವರ್ಗದ ಪ್ರಾಪ್ತಿಯಾಗುತ್ತದೆ. ಆದ್ದರಿಂದ ತಪಸ್ಸು ಮಾಡುವುದು ಯೋಗ್ಯವಿದೆ.

**ಬಾಹ್ಯತಪ :** ಬಾಹ್ಯ ಮತ್ತು ಅಭ್ಯಂತರವೆಂದು ತಪಸ್ಸು ಎರಡು ಪ್ರಕಾರದ್ದಿದೆ. ಬಾಹ್ಯತಪದಲ್ಲಿ ಅನಶನ, ಅವಮೌದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತಶಯ್ಯಾಸನ ಮತ್ತು ಕಾಯಕ್ಲೇಶವೆಂದು ಆರು ಭೇದಗಳಿವೆ. ಈ ಆರು ಪ್ರಕಾರದ ಬಾಹ್ಯ ತಪಗಳ ವರ್ಣನೆ ಮಾಡುತ್ತಾರೆ.

**ಅನಶನ ತಪ :** ಈಗ ಅನಶನ ತಪದ ಸ್ವರೂಪ ಹೇಳುತ್ತಾರೆ. ಅನಶನ ಎಂದರೆ ಭೋಜನದ ತ್ಯಾಗ ಮಾಡುವುದು ಅದು ಅನಶನ ತಪವಿದೆ. ಇಷ್ಟಫಲದ ಅಪೇಕ್ಷೆಯಿಂದ ರಹಿತವಾಗಿ ಭೋಜನದ ತ್ಯಾಗ ಮಾಡುವುದು ಅದು ಅನಶನ ತಪವಿದೆ. ಯಾರು ಯಶಸ್ಸಿನ ಸಲುವಾಗಿ, ಖ್ಯಾತಿಯ ಸಲುವಾಗಿ, ಜಗತ್ತಿನ ಜನರಿಂದ ಪೂಜೆ-ನಮಸ್ಕಾರಾದಿಗಳನ್ನು ಮಾಡಿಸಿಕೊಳ್ಳುವ ಸಲುವಾಗಿ, ಮಂತ್ರ ಸಾಧನೆಯ ಸಲುವಾಗಿ, ಧನದ ಸಲುವಾಗಿ, ಋದ್ಧಿ ಪ್ರಾಪ್ತಿಯ ಸಲುವಾಗಿ, ವೈರಿಗಳ ಘಾತದ ಸಲುವಾಗಿ, ಪರಲೋಕದಲ್ಲಿ ರಾಜ್ಯಪ್ರಾಪ್ತಿಯ ಸಲುವಾಗಿ, ಕಷಾಯದಿಂದ ವೈರದಿಂದ ದುಃಖಿಯಾಗಿ ತನ್ನ ಪ್ರಾಣಘಾತದ ಸಲುವಾಗಿ ಯಾರು ಅನಶನ ಮಾಡುತ್ತಾರೆ ಅವರ ಅನಶನವು ಸಮ್ಯಕ್‌ತಪವಲ್ಲ, ಅದು ಕೇವಲ ಸಂಸಾರ ಪರಿಭ್ರಮಣದ ಕಾರಣವಿದೆ.

ಯಾರು ಇಂದ್ರಿಯ ವಿಷಯಗಳ ಲಾಲಸೆಯನ್ನು ಕಡಿಮೆ ಮಾಡುವ ಸಲುವಾಗಿ, ಷಟ್ಕಾಯ ಜೀವಗಳ ದಯೆಯ ಸಲುವಾಗಿ, ರಾಗಭಾವ ಕುಂದಿಸುವ ಸಲುವಾಗಿ, ನಿದ್ರೆಯನ್ನು ಜಯಿಸುವ ಸಲುವಾಗಿ, ಕರ್ಮಗಳ ನಿರ್ಜರೆಯ ಸಲುವಾಗಿ, ಧ್ಯಾನದ ಸಿದ್ಧಿಯ ಸಲುವಾಗಿ, ದೇಹದ ಸುಖೀತನವನ್ನು ನಾಶ ಮಾಡುವ ಸಲುವಾಗಿ ಉಪವಾಸ ಮೊದಲಾದುವನ್ನು ಮಾಡುತ್ತಾರೆ ಅದು ಅನಶನ ತಪವಿದೆ. ಅನಶನ ತಪವನ್ನು ಕಾಲದ ಮರ್ಯಾದೆಯಿಂದ, ಹಾಗೂ ಆಜೀವನದ ಸಲುವಾಗಿಯೆಂದು ಹೀಗೆ ಎರಡು ಪ್ರಕಾರದಿಂದ ಮಾಡಲಾಗುತ್ತದೆ.

ಸಮಸ್ತ ಜನರು ಒಂದು ದಿವಸದಲ್ಲಿ ಎರಡು ಸಾರೆ ಭೋಜನ ಮಾಡುತ್ತಾರೆ. ಅದರಲ್ಲಿ ಪ್ರಾತಃಕಾಲದ ಒಂದು ಬಾರಿ ಭೋಜನ ಮಾಡುವುದು, ಸಂಧ್ಯಾಕಾಲದ ಎರಡನೇ ಬಾರಿ ಭೋಜನದ ತ್ಯಾಗ ಮಾಡುವುದು ಅದು ಕೂಡ ಅನಶನವಿದೆ. ಮೊದಲನೇ ದಿವಸ ಒಂದು ಬಾರಿ ಭೋಜನ ಮಾಡಿ ಎರಡನೇ ಬಾರಿಯ ಭೋಜನದ ತ್ಯಾಗ, ಎರಡನೇ ದಿವಸ ಎರಡೂ ಬಾರಿಯ ಭೋಜನದ ತ್ಯಾಗ ಮತ್ತು ಮುಂದಿನ ಪಾರಣೆಯ ದಿವಸ ಒಂದು ಭೋಜನದ ತ್ಯಾಗ ಮಾಡಿ ಒಂದ ಬಾರಿ ಉಣ್ಣುವುದು, ಆದು ನಾಲ್ಕು ಭೋಜನದ ತ್ಯಾಗರೂಪ ಚತುರ್ಥವಿದೆ, ಇದಕ್ಕೆ ಉಪವಾಸವೆಂದು ಹೇಳುತ್ತಾರೆ.

ಆರು ಭೋಜನಗಳ ತ್ಯಾಗವನ್ನು ಎರಡು ಉಪವಾಸವೆಂದು ಹೇಳುತ್ತಾರೆ, ಎಂಟು ಭೋಜನದ ತ್ಯಾಗವನ್ನು 'ತೇಲಾ' ವೆಂದು ಹೇಳುತ್ತಾರೆ, ಹತ್ತು ಭೋಜನದ ತ್ಯಾಗವನ್ನು 'ಚೋಲಾ' ವೆಂದು ಹೇಳುತ್ತಾರೆ. ಈ ಪ್ರಕಾರದ ಕಾಲದ ಮರ್ಯಾದೆಯ ರೂಪವಾಗಿರುವ ಅನಶನ ತಪವನ್ನು ತಿಳಿಯುವುದು ಆಯುವಿನ ಕೊನೆಯಲ್ಲಿ ಯಾವಜ್ಜೀವನ ಭೋಜನದ ತ್ಯಾಗ ಮಾಡುವುದು ಅದು ಯಾವಜ್ಜೀವನ ಅನಶನವಿದೆ.

**ಇಂದ್ರಿಯಗಳ ಉಪಶಮನದ ಸಲುವಾಗಿ ಭಗವಂತರು ಉಪವಾಸ ಮಾಡಲು ಹೇಳಿದ್ದಾರೆ.** ಆದ್ದರಿಂದ ಇಂದ್ರಿಯಗಳನ್ನು ಜಯಿಸುವಂಥ ಮುನಿಗಳನ್ನು ಭೋಜನ ಮಾಡುತ್ತಿದ್ದರೂ ಉಪವಾಸ ಮಾಡುವಂಥವರೆಂದು ತಿಳಿಯುವುದು. **ಯಾರು ಉಪವಾಸ ಮಾಡುತ್ತಿದ್ದರೂ ಇಂದ್ರಿಯಗಳನ್ನು ವಿಷಯಗಳಿಂದ ತಡೆಯುವುದಿಲ್ಲ, ಆರಂಭ ಮಾಡುತ್ತಾರೆ, ಕಷಾಯರೂಪವಾಗಿ ಪ್ರವರ್ತಿಸುತ್ತಾರೆ ಅವರ ಅನಶನ ತಪವು ನಿಷ್ಫಲವಾಗುತ್ತದೆ,** ಅದು ಕರ್ಮಗಳ ನಿರ್ಜರೆ ಮಾಡುವುದಿಲ್ಲ. ಈ ಪ್ರಕಾರ ಅನಶನ ತಪದ ಸ್ವರೂಪವನ್ನು ಹೇಳಲಾಗಿದೆ.

ಯಾವ ಪ್ರಕಾರ ವಾತ-ಪಿತ್ತ-ಕಫಾದಿಗಳು ವಿಕಾರಕ್ಕೆ ಪ್ರಾಪ್ತವಾಗಲಾರವು, ರೋಗ ಶಾಂತವಾಗುವುದು, ಧರ್ಮದಲ್ಲಿ ಉತ್ಸಾಹವು ಹೆಚ್ಚುವುದು ಆ ಪ್ರಕಾರ ತಮ್ಮ ಪರಿಣಾಮಗಳ ವಿಶುದ್ಧಿಯ ವೃದ್ಧಿ ಬಯಸುತ್ತ ದೇಶದ ಅನುಕೂಲ, ಕಾಲದ ಅನುಕೂಲ, ಆಹಾರ-ಪಾನೀಯದ ಯೋಗ್ಯತೆಯ ಅನುಕೂಲ, ಕುಟುಂಬ ಮೊದಲಾದವರ ಸಹಾಯತೆಯ ಅನುಕೂಲ, ಸಂಹನನದ ಅನುಸಾರ ಹೇಗೆ ಶರೀರವು ವಿಕಾರಕ್ಕೆ ಪ್ರಾಪ್ತವಾಗುವುದಿಲ್ಲ ಹಾಗೆ ಶ್ರಾವಕರು ಕೂಡ ತಮ್ಮ ಶಕ್ತಿಯ ಅನುಸಾರವಾಗಿ ಅನಶನ ತಪವನ್ನು ಅಂಗೀಕಾರ ಮಾಡುವುದು ಶ್ರೇಷ್ಠವಿದೆ.

**ಅವಮೌದರ್ಯ ತಪ :** ಅವಮೌದರ್ಯ ತಪದ ಸ್ವರೂಪವನ್ನು ಹೀಗೆ ತಿಳಿಯುವುದು. ಅವಮ್ ಎಂದರೆ ನ್ಯೂನ ಎಂದರೆ ಸ್ವಲ್ಪ ಕಡಿಮೆ, ಉದರದಲ್ಲಿ ಎಂದರೆ ಪೂರ್ಣ ಉದರದಿಂದ ಸ್ವಲ್ಪ ಕಡಿಮೆ ಭೋಜನ ಮಾಡಲಾಗುತ್ತದೆ, ಅದನ್ನು ಅವಮೌದರ್ಯ ತಪವೆಂದು ಹೇಳುತ್ತಾರೆ. ಎಷ್ಟು ಆಹಾರದಿಂದ ಉದರವು ಪೂರ್ಣ ತುಂಬುತ್ತದೆ ಅದಕ್ಕಿಂತ ನ್ಯೂನ ಎಂದರೆ ಸ್ವಲ್ಪ ಕಡಿಮೆ ಭೋಜನ ಮಾಡುವುದು ಅದು ಊನೋದರ ಅಥವಾ ಅವಮೌದರ್ಯ ತಪವಿದೆ. ಅವಮೌದರ್ಯ ತಪದಿಂದ ಇಂದ್ರಿಯಗಳ ಸಂಯಮವಾಗುತ್ತದೆ, ಭೋಜನದ ಗೃದ್ಧತೆಯ ಅಭಾವವಾಗುತ್ತದೆ. ಅಲ್ಪಾಹಾರ ಮಾಡುವುದರಿಂದ ವಾತ-ಪಿತ್ತ-ಕಫ ಮೊದಲಾದವು ಪ್ರಕೋಪಕ್ಕೆ ಪ್ರಾಪ್ತವಾಗುವುದಿಲ್ಲ; ರೋಗಗಳ ಉಪಶಮವಾಗುತ್ತದೆ, ನಿದ್ರೆ-ಆಲಸ್ಯಗಳ ಮೇಲೆ ವಿಜಯವಾಗುತ್ತದೆ; ಸ್ವಾಧ್ಯಾಯದಲ್ಲಿ, ಸಾಮಾಯಿಕದಲ್ಲಿ, ಕಾಯೋತ್ಸರ್ಗದಲ್ಲಿ, ಧ್ಯಾನದಲ್ಲಿ ಖೇದವಾಗುವುದಿಲ್ಲ; ಧ್ಯಾನ, ಸ್ವಾಧ್ಯಾಯ ಮೊದಲಾದ ಆವಶ್ಯಕಗಳು ಸುಖದಿಂದ ಆಗುತ್ತವೆ. ಅವಮೌದರ್ಯ ತಪ ಮಾಡುವುದರಿಂದ ಉಪವಾಸದ ಖೇದ, ಉಷ್ಣ ಮೊದಲಾದವು ವ್ಯಾಪಿಸುವುದಿಲ್ಲ, ಉಪವಾಸವು ಸುಖದಿಂದ ಆಗುತ್ತದೆ. ಹೆಚ್ಚು ಭೋಜನ ಮಾಡಿದರೆ ಧ್ಯಾನ, ಕಾಯೋತ್ಸರ್ಗ ಮೊದಲಾದ ಆವಶ್ಯಕಗಳು ಸುಖದಿಂದ ಆಗುವುದಿಲ್ಲ, ಆಲಸ್ಯ, ನಿದ್ರೆಗಳು ಪ್ರಬಲವಾಗಿ ಬಿಡುತ್ತವೆ, ಹೆಚ್ಚು ಬಾಯಾರಿಕೆಯಾಗುತ್ತದೆ, ಉಷ್ಣದ ಬಾಧೆಯು ಹೆಚ್ಚು ತೊಂದರೆಪಡಿಸುತ್ತದೆ.

ಆದುದರಿಂದ ಇಂದ್ರಿಯಗಳ ಲಾಲಸೆಯನ್ನು ಕಡಿಮೆ ಮಾಡುವ ಸಲುವಾಗಿ, ಮನಸ್ಸನ್ನು ತಡೆಯುವ ಸಲುವಾಗಿ ಜ್ಞಾನೀ ಮುನಿಗಳಂತೂ ಅರ್ಧ ಭೋಜನ, ಕಾಲು ಭಾಗ ಭೋಜನ ಕ್ರಮದಿಂದ ಒಂದೊಂದು ಎರಡೆರಡು ತುತ್ತು ಕಡಿಮೆ ಮಾಡುತ್ತ ಒಂದು ತುತ್ತಿನವರೆಗೆ ಅವಮೌಧ್ಯರ್ಯದ ಭೇದ ಮಾಡುತ್ತಾರೆ; ಆದರೆ ಯಾರು ಸಿಹಿ ಭೋಜನದ ಲಾಭದ ಸಲುವಾಗಿ, ಕೀರ್ತಿ-ಪ್ರಶಂಸೆ ಪಡೆಯುವ ಸಲುವಾಗಿ ಅಲ್ಪ ಭೋಜನ ಮಾಡುತ್ತಾರೆ ಅದು ಅವಮೌದರ್ಯತಪವಲ್ಲ. ಆಹಾರದಲ್ಲಿನ ಲಾಲಸೆಯನ್ನು ಕಡಿಮೆ ಮಾಡುವ ಸಲುವಾಗಿ, ಅವಮೌದರ್ಯ ಮಾಡಲಾಗುತ್ತದೆ. ಗೃಹಸ್ಥ ಶ್ರಾವಕರ ಸಲುವಾಗಿ ಕೂಡ ಅಂತರಾಯಕರ್ಮದ ಕ್ಷಯೋಪಶಮದ ಅನುಸಾರ ಪ್ರಾಪ್ತವಾದ ಭೋಜನದಲ್ಲಿ ಸಂತೋಷ ಮಾಡಿ, ಭೋಜನದ ಲಾಲಸೆಯನ್ನು ಬಿಟ್ಟುಕೊಟ್ಟು, ಇಚ್ಛೆಯ ನಿರೋಧದ ಸಲುವಾಗಿ ಅವಮೌದರ್ಯ ತಪ ಮಾಡುವುದು ಉಚಿತವಿದೆ, ಶ್ರೇಷ್ಠವಿದೆ.

**ವೃತ್ತಿಪರಿಸಂಖ್ಯಾನ ತಪ :** ವೃತ್ತಿ ಪರಿಸಂಖ್ಯಾನ ತಪವು ಮುನಿರಾಜರಿಗೆ ಆಗುತ್ತದೆ; ಅದರ ಸ್ವರೂಪ ಹೇಳುತ್ತಾರೆ. ಮುನಿರಾಜರು ಆಹಾರಕ್ಕೆ ಹೋಗುವ ಸಮಯದಲ್ಲಿ ಹೀಗೆ ಪ್ರತಿಜ್ಞೆ ಮಾಡುತ್ತಾರೆ. ಇಂದು ಒಂದೇ ಮನೆಗೆ ಹೋಗುವೆನು, ಅಥವಾ ಎರಡು, ಮೂರು, ಐದು, ಏಳು ಮನೆಗಳ ನಿಯಮ ಮಾಡಿ ಹೋಗುತ್ತಾರೆ; ಇಂದು ನೇರವಾದ ಮಾರ್ಗದಲ್ಲಿಯೇ ದೊರೆತರೆ, ವಕ್ರ ಮಾರ್ಗದಲ್ಲಿ ದೊರೆತರೆ, ಇಂಥ ದಾತಾರನಿದ್ದರೆ, ಇಂಥ ಭೋಜನವಿದ್ದರೆ ಇಂಥ ಪಾತ್ರೆಯಲ್ಲಿ ಇದ್ದರೆ, ಇಂಥ ವಿಧಿಯಿಂದ ದೊರೆತರೆ ಆಹಾರ ಗ್ರಹಣ ಮಾಡುವೆನು, ಅನ್ಯ ಪ್ರಕಾರದಿಂದ ಮಾಡಲಾರೆನು. ಇಂಥ ಕಠಿಣ-ಕಠಿಣತರವಾದ ಪ್ರತಿಜ್ಞೆ ಮಾಡಿಕೊಂಡು ಆಹಾರದ ಸಲುವಾಗಿ ಗಮನ ಮಾಡುತ್ತಾರೆ, ಅವರಿಗೆ ವೃತ್ತಿಪರಿಸಂಖ್ಯಾನ ತಪವಾಗುತ್ತದೆ. ಈ ದುರ್ಧರತರ ತಪವು ಮುನಿರಾಜರುಗಳಿಂದಲೇ ಆಗುತ್ತದೆ. ಅನ್ಯ ಗೃಹಸ್ಥರು ಇದನ್ನು ಧಾರಣ ಮಾಡುವಲ್ಲಿ ಸಮರ್ಥರಾಗುವುದಿಲ್ಲ.

**ಗೃಹಸ್ಥರೂ ವೀತರಾಗ ಗುರುಗಳ ಪ್ರಸಾದದಿಂದ ಈ ಪ್ರಕಾರದ ಪ್ರತಿಜ್ಞೆ ಮಾಡುತ್ತಾರೆ.** ನಾನು ಜಿನಧರ್ಮ ಪಡೆದಿರುವುದರಿಂದ ಈ ಉಜ್ವಲ ಧರ್ಮದ ಘಾತವಾಗದ ರೀತಿಯಿಂದಲೇ ಆಜೀವಿಕೆ ಮಾಡುವೆನು; ಯಾವುದರಲ್ಲಿ ಶ್ರದ್ಧೆ, ಜ್ಞಾನ, ವ್ರತಗಳು ನಷ್ಟವಾಗಿ ಹೋಗುತ್ತವೆ ಅಂಥ ಆಜೀವಿಕೆ ಮಾಡಲಾರೆನು. ಯಾವುದರಲ್ಲಿ ಅಧಿಕ ಹಿಂಸೆ, ಅಸತ್ಯ, ಮಾಯಾಚಾರ ಮಾಡಬೇಕಾಗುತ್ತದೆ ಅಂಥ ನೌಕರಿಯನ್ನೂ ಮಾಡಲಾರೆನು; ದುಷ್ಟ ಪಾಪದ ವಾಣಿಜ್ಯ ವ್ಯವಹಾರ ಮಾಡಲಾರೆನು; ಉಜ್ವಲ ವಾಣಿಜ್ಯ ಅಧಿಕ ಆರಂಭವಿಲ್ಲದ, ಕಪಟವಿಲ್ಲದ, ಅಸತ್ಯವಿಲ್ಲದ ಯಾವ ಆಜೀವಿಕೆಯಿದೆ ಅದನ್ನೇ ನನಗೆ ಮಾಡುವುದಿದೆ, ಬೇರೆ ಮಾಡುವುದಿಲ್ಲ, ಇವೇ ಮೊದಲಾದ ಆಜೀವಿಕೆಯ ನಿಯಮ ಮಾಡುತ್ತಾನೆ.

ಇಷ್ಟು ಪರಿಗ್ರಹ, ಇಷ್ಟು ಧನ, ಇಷ್ಟೇ ವಸ್ತ್ರಗಳಿಂದ ಭೋಗೋಪಭೋಗ ಮಾಡುವುದು, ರೋಗವಾದರೆ ಇಂತಿಷ್ಟೆ ಔಷಧ ಸ್ವೀಕರಿಸುವೆನು, ಈ ಔಷಧಗಳ ಹೊರತಾಗಿ ಅನ್ಯ ಔಷಧಗಳನ್ನು ಸ್ವೀಕರಿಸಲಾರೆನು, ಇಂದು ನನ್ನ ಮನೆಯಲ್ಲಿ ಸಿದ್ಧವಾಗಿರುವಂಥ ಆಹಾರವನ್ನೇ ಸ್ವೀಕರಿಸುವೆನು, ನಾನು ಮುಖದಿಂದ ಹೇಳಿ ಮಾಡಿಸಿಕೊಳ್ಳುವುದಿಲ್ಲ, ಬೇಡಿ ತಿನ್ನುವುದಿಲ್ಲ, ಇಂದು ನಾನು ನಮ್ಮ ಮನೆಯಲ್ಲಿ, ನಮ್ಮ ಮನೆಯವರೇ ಮಾಡಿದ, ತಟ್ಟೆಯಲ್ಲಿ ಮೊದಲು ಬಾರಿ ಎಷ್ಟು ಆಹಾರ ಬಡಿಸಲಾಗುತ್ತದೆ ಅಷ್ಟೇ ಭೋಜನ ಮಾಡುವೆನು, ಪುನಃ ಮತ್ತೊಮ್ಮೆ ಬೇಡಲಾರೆನು. ಇತ್ಯಾದಿ ಪ್ರಕಾರದಿಂದ ಇಚ್ಛೆಗಳನ್ನು ನಿರೋಧಿಸುವ ಸಲುವಾಗಿ ಗೃಹಸ್ಥರು ಕೂಡ ತಮ್ಮ ಮನಸ್ಸಿನಲ್ಲಿ ಪ್ರತಿಜ್ಞೆ ಮಾಡುತ್ತಾರೆ.

**ರಸಪರಿತ್ಯಾಗ ತಪ :** ಈಗ ರಸ ಪರಿತ್ಯಾಗ ತಪದ ಸ್ವರೂಪ ಹೇಳುತ್ತಾರೆ, ಹಾಲು, ಮೊಸರು, ತುಪ್ಪ, ಲವಣ, ಬೆಲ್ಲ, ಎಣ್ಣೆ ಇವು ಆರು ಪ್ರಕಾರದ ರಸಗಳಿವೆ. ಇವುಗಳೊಳಗಿಂದ ಜಿಹ್ವೆ ಮೊದಲಾದ ಇಂದ್ರಿಯಗಳ ನಿಗ್ರಹದ ಸಲುವಾಗಿ, ಮನದ ಲೋಲುಪತೆಯನ್ನು ನಾಶಿಸುವ ಸಲುವಾಗಿ ಕಾಮವನ್ನು ಜಯಿಸುವ ಸಲುವಾಗಿ, ನಿದ್ರೆಯನ್ನು ಕುಂದಿಸುವ ಸಲುವಾಗಿ, ಸಂಯಮ ಸಾಧಿಸುವ ಸಲುವಾಗಿ, ರಸಗಳ ತ್ಯಾಗ ಮಾಡುವುದು, ಒಮ್ಮೆ ಒಂದು ರಸದ ತ್ಯಾಗ, ಒಮ್ಮೆ ಎರಡು ರಸದ ತ್ಯಾಗ, ಒಮ್ಮೆ ಮೂರು ರಸದ ತ್ಯಾಗ, ಒಮ್ಮೆ ಆರೂ ರಸಗಳ ತ್ಯಾಗ ಮಾಡುವುದು ಅದು ರಸಪರಿತ್ಯಾಗ ತಪವಿದೆ.

ಸಂಸಾರೀ ಜೀವನು ಸಿಹಿ ರಸ ಮೊದಲಾದುವನ್ನು ತಿನ್ನುವ ಲೋಲುಪಿಯಾಗಿ ಅಭಕ್ಷ್ಯ ಭಕ್ಷಣ ಮಾಡುತ್ತಾನೆ, ಲಜ್ಜೆ ಬಿಟ್ಟು ಕೊಡುತ್ತಾನೆ, ವ್ರತ-ತಪ ಕೆಡಿಸಿ ಬಿಡುತ್ತಾನೆ, ಭೋಜನದ ಲೋಲುಪತೆಯಿಂದ ಶೂದ್ರ, ಮೊದಲಾದ ಅಯೋಗ್ಯಕುಲದವರಲ್ಲಿ ಭೋಜನ ಮಾಡುತ್ತಾನೆ, ದೈನ್ಯತೆಯಿಂದ ಅಂಗಲಾಚುತ್ತಾನೆ, ಸಿಹಿ ತಿನ್ನುವ ಸಲುವಾಗಿ ಕಾದಾಡುತ್ತಾನೆ, ಸಾಯುತ್ತಾನೆ, ಬೀಳುತ್ತಾನೆ, ಪ್ರಾಯಶಃ ರಸಗಳ ಲೋಭಿಯಾಗಿ ಭ್ರಷ್ಟನಾಗಿ ಹೋಗುತ್ತಾನೆ.

**ಯಾರೋ ಧನ್ಯ ಪುರುಷರಿಗೆ ರಸರೂಪದ ಭೋಜನ ಮಾಡುವಲಾಲಸೆಯಿರುವುದಿಲ್ಲ.** ಉತ್ತಮ ಗೃಹಸ್ಥರಂತೂ ಮೊದಲಿನಿಂದಲೇ ಅನೇಕ ಪ್ರಕಾರದ ತುಪ್ಪ, ಸಿಹಿ ರಸಗಳಲ್ಲಿನ ಲಾಲಸೆಯನ್ನು ಬಿಟ್ಟುಕೊಟ್ಟು ತಮ್ಮ ಮನೆಯಲ್ಲಿಯೇ ಸ್ನಿಗ್ಧ, ರೂಕ್ಷ, ಇತ್ಯಾದಿ ವಿಧಿಯು ಸಹಜವಾಗಿ ದೊರಕಿಸಿಕೊಟ್ಟಂಥ ಭೋಜನವನ್ನು ಸಂತೋಷದಿಂದ ಮಾಡುತ್ತಾರೆ. ರಸರೂಪ ಭೋಜನದ ಚರ್ಚೆಯನ್ನು ಸ್ವಪ್ನದಲ್ಲಿಯೂ ಮಾಡುವುದಿಲ್ಲ. **ರಸಗಳ ಲಂಪಟತೆಯು ಉಭಯಲೋಕಗಳಲ್ಲಿ ಭ್ರಷ್ಟಮಾಡುವಂಥದ್ದಿದೆ.** ಆದುದರಿಂದ ಲಾಲಸೆಯನ್ನು ಬಿಡುವ ಸಲುವಾಗಿ, ಇಂದ್ರಿಯಗಳನ್ನು

ವಶದಲ್ಲಿಟ್ಟುಕೊಳ್ಳುವ ಸಲುವಾಗಿ, ಪರಮ ಸಂವರ-ನಿರ್ಜರೆ ಮಾಡುವ ಸಲುವಾಗಿ, ದೀನತೆಯ ಅಭಾವ ಮಾಡುವ ಸಲುವಾಗಿ,ಸಂತೋಷ ಧಾರಣ ಮಾಡುವ ಸಲುವಾಗಿ ರಸಪರಿತ್ಯಾಗ ತಪ ಮಾಡುವುದೇ ಶ್ರೇಷ್ಠವಿದೆ.

**ವಿವಿಕ್ತಶಯನಾಸನ ತಪ :** ಈಗ ವಿವಿಕ್ತಶಯನಾಸನ ತಪದ ಸ್ವರೂಪ ಹೇಳುತ್ತಾರೆ. ಶೂನ್ಯಗೃಹ, ಏಕಾಂತಸ್ಥಾನ, ವಿಕಲತ್ರಯ ಜೀವಗಳ ಬಾಧೆಯಿಂದ ರಹಿತ, ಸ್ತ್ರೀ-ನಪುಂಸಕ-ಅಸಂಯಮಿ ಪುರುಷರ ಬರ-ಹೋಗುವಿಕೆಯಿಲ್ಲದ ಸ್ಥಾನದಲ್ಲಿ ಪರ್ವತಗಳ ಗುಹೆ, ವನಖಂಡದಲ್ಲಿ ಧ್ಯಾನ-ಅಧ್ಯಯನ ಮಾಡುವುದು, ಶಯನ-ಆಸನ ಮಾಡುವುದು ಅದು ವಿವಿಕ್ತಶಯನಾಸನ ತಪವಿದೆ. ಅದರಿಂದ ಏಕಾಂತದಲ್ಲಿ ವಾಸಿಸುವಂಥ ಸಾಧುಗಳಿಗೆ ಹಿಂಸೆಯ ಅಭಾವ, ಮಮತೆಯ ಅಭಾವ, ವಿಕಥೆಯ ಅಭಾವ, ಕಾಮದ ಅಭಾವವಾಗುತ್ತದೆ, ಮತ್ತು ಧ್ಯಾನ-ಅಧ್ಯಯನದ ಸಿದ್ಧಿಯೂ ಆಗುತ್ತದೆ. ಇನ್ನೊಬ್ಬರು ಜತೆಯಲ್ಲಿ ಇದ್ದರೆ ಮಾತುಕತೆಗಳಾಗುತ್ತವೆ, ಅದರಿಂದ ಧ್ಯಾನವು ಚಂಚಲವಾಗಿ ಹೋಗುತ್ತದೆ, ರಾಗಭಾವವು ವೃದ್ಧಿಸಿ ಹೋಗುತ್ತದೆ. ಆದುದರಿಂದ ಸಂಯಮಶೀಲರು ಏಕಾಂತದಲ್ಲಿಯೇ ಶಯನ ಆಸನ ಮಾಡುತ್ತಾರೆ.

ಧರ್ಮಾತ್ಮ ಗೃಹಸ್ಥರೂ ಪಾಪದಿಂದ ಭಯಭೀತರಾಗಿ,ತಮ್ಮ ಗೃಹಾಚಾರದ ಆಜೀವಿಕೆ ಮೊದಲಾದ ಕಾರ್ಯಗಳನ್ನು ನ್ಯಾಯ ಮಾರ್ಗದಿಂದ, ಅಲ್ಪ ಆರಂಭಗಳ ರೂಪದ ಪಾಪಕಾರ್ಯಗಳಿಂದಲೂ ಭಯಭೀತರಾಗಿ, ಶರೀರದ ಸ್ನಾನ, ಭೋಜನ ಮೊದಲಾದ ಕಾರ್ಯಮಾಡಿ ಏಕಾಂತ ಮನೆಯಲ್ಲಿ, ತಮ್ಮ ಮನೆಯಲ್ಲಿ, ಜಿನಮಂದಿರದಲ್ಲಿ, ಧರ್ಮಶಾಲೆಯಲ್ಲಿ, ವನದ ಚೈತ್ಯಾಲಯಾದಿಗಳಲ್ಲಿ, ಸಾಧರ್ಮಿಜನರ ಸಂಗತಿಯಲ್ಲಿ ಧರ್ಮಚರ್ಚೆ ಮಾಡುತ್ತ,ಸ್ವಾಧ್ಯಾಯ, ಜಿನಾಗಮದ ಪಠಣ, ಪಾಠಣ, ಪ್ರವಚನ, ಜಿನಾಗಮದ ಶ್ರವಣ, ಪಂಚ ಣಮೋಕಾರದ ಸ್ಮರಣೆ ಮಾಡುತ್ತ ಹಗಲು-ರಾತ್ರಿಗಳನ್ನು ವ್ಯತೀತ ಮಾಡುತ್ತಾರೆ, ಸ್ತ್ರೀಕಥೆ, ರಾಜಕಥೆ, ಭೋಜನಕಥೆ, ದೇಶಕಥೆಗಳನ್ನೆಂದೂ ಮಾಡುತ್ತಿರದೆ ಸಮಯ ವ್ಯತೀತ ಮಾಡುತ್ತಾರೆ. ಕಾಮವಿಕಾರವನ್ನು ಹೆಚ್ಚಿಸುವಂಥ, ರಾಗವನ್ನುತ್ಪನ್ನ ಮಾಡುವಂಥ ಶಯನ-ಆಸನಗಳ ತ್ಯಾಗ ಮಾಡುತ್ತಾರೆ. ಗೃಹಸ್ಥರಿಗೆ ಕೂಡ ವಿವಿಕ್ತ ಶಯನಾಸನ ತಪವು ನಿರ್ಜರೆಯ ಕಾರಣವಿದೆ.

**ಕಾಯಕ್ಲೇಶ ತಪ :** ಮುನಿರಾಜರುಗಳಿಗೆ ಕಾಯಕ್ಲೇಶ ನಾಮದ ದೊಡ್ಡ ತಪವಾಗುತ್ತದೆ. ಏಕಾಸನದಿಂದ ಕುಳಿತು ಕೊಳ್ಳುವುದು, ಒಂದೇ ಮಗ್ಗುಲದಿಂದ ಮಲಗುವುದು, ಮೌನವಿರುವುದು, ಗ್ರೀಷ್ಮ ಋತುವಿನಲ್ಲಿ ಪರ್ವತದ ಶಿಖರದ ಮೇಲೆ, ಪಾಷಾಣದ ಶಿಲೆಯ ಮೇಲೆ, ಸೂರ್ಯನ ಎದುರಿಗೆ,ಕಾಯೋತ್ಸರ್ಗಧಾರಣ ಮಾಡಿ, ಪ್ರಖರ ಬಿಸಿಲು, ಉಷ್ಣ ಹವೆ ಮೊದಲಾದವುಗಳ ಘೋರ ವೇದನೆಯಾದರೂ ಕೂಡ ಧರ್ಮಧ್ಯಾನದಲ್ಲಿ, ಹನ್ನೆರಡು ಭಾವನೆಗಳ ಚಿಂತನೆಯಲ್ಲಿ ಪರಿಣಾಮವನ್ನು ಸ್ಥಿರಗೊಳಿಸಿ ಕಷ್ಟರೂಪದ ಅನುಭವ ಮಾಡದಿರುವುದು ಅದು ಕಾಯಕ್ಲೇಶ ತಪವಿದೆ.

**ವರ್ಷಾಋತು**ವಿನಲ್ಲಿ ವೃಕ್ಷದ ಕೆಳಗೆ ಯೋಗಧಾರಣ ಮಾಡುತ್ತ, ಘೋರ ಅಂಧಕಾರದಿಂದ ತುಂಬಿದ ರಾತ್ರಿಯಲ್ಲಿ ಅಖಂಡ ಧಾರಾರೂಪವಾಗಿ ಸುರಿಯುತ್ತಿರುವ ಮೇಘದಿಂದ ಭೂಮ್ಯಾಕಾಶಗಳು ಜಲಮಯವಾಗುತ್ತಿದ್ದು, ವೃಕ್ಷದಲ್ಲಿ ಏಕತ್ರವಾದ ಜಲದ ಮಹಾಧಾರೆ ಬೀಳುತ್ತಿದ್ದು, ಮಿಂಚು ಹೊಳೆಯುತ್ತಿದ್ದು, ಮೋಡಗಳು ಗರ್ಜಿಸುತ್ತಿದ್ದು, ಸಿಡಿಲು ಹೊಡೆಯುತ್ತಿರುವ ಸಮಯದಲ್ಲಿ ಧನ್ಯ ಮುನಿಗಳು ಯಾವ ವಸ್ತುವಿನ ಆವರಣವಿಲ್ಲದ ನಗ್ನಶರೀರದ ಮೇಲೆ ಘೋರ ವೇದನೆಯನ್ನು ಭೋಗಿಸುತ್ತಲೂ ಸಂಕ್ಲೇಶವಿಲ್ಲದ ಧರ್ಮಧ್ಯಾನ ಶುಕ್ಲಧ್ಯಾನದಲ್ಲಿ ಒಂದಾಗಿರುತ್ತಾರೆ. ಇದೆಲ್ಲವೂ ವೀತರಾಗತೆಯ ಮಹಿಮೆಯಿದೆ.

**ಶೀತಋತು**ವಿನಲ್ಲಿ ನದಿಯ ದಡದಲ್ಲಿ, ಚೌಕದಲ್ಲಿ ನಗ್ನ ಶರೀರದ ಮೇಲೆ ಹಿಮ ಬೀಳುತ್ತಿರುವುದು, ಶೀತಲವಾದ ಬಿರುಗಾಳಿಯು ಬೀಸುತ್ತಿರುವ ಸಮಯದಲ್ಲಿ ದುಃಖರಹಿತ ಧರ್ಮಧ್ಯಾನದಲ್ಲಿ ಶೀತಕಾಲದ ರಾತ್ರಿಯನ್ನು ಕಳೆಯುವುದು ಮತ್ತು ದುಷ್ಟ ಜೀವಗಳಿಂದ ಮಾಡಲಾಗುವ ಘೋರ ಉಪದ್ರವವನ್ನು ಸಹಿಸುತ್ತ ಸಮತೆಯ ಭಾವವಿಡುವುದು ಅದು ಕಾಯಕ್ಲೇಶ ತಪವಿದೆ. ಈ ಪ್ರಕಾರ ಪರವಶತೆಯ ದುಃಖವು ಬಂದ ಮೇಲೆ ಚಂಚಲವಾಗದಿರುವುದರ ಸಲುವಾಗಿ, ದೇಹಜನ್ಯ ಸುಖದ ಅಭಿಲಾಷೆಯ ಅಭಾವ ಮಾಡುವ ಸಲುವಾಗಿ, ರೋಗಗಳಿಂದ ಚಂಚಲತೆಯಾಗದಿರುವುದರ ಸಲುವಾಗಿ, ಭಯವನ್ನು ಜಯಿಸುವ ಸಲುವಾಗಿ, ಪರೀಷಹ ಸಹಿಸುವ ಸಲುವಾಗಿ, ಕರ್ಮಗಳ ನಿರ್ಜರೆಯ ಸಲುವಾಗಿ ಕಾಯಕ್ಲೇಶ ತಪವನ್ನು ಧಾರಣ ಮಾಡುತ್ತಾರೆ.

ಗೃಹಸ್ಥರಿಗೆ ಆತಾಪನಯೋಗಾದಿಗಳಾಗುವುದಿಲ್ಲ, ಆ ತಪಗಳಂತೂ ದಿಗಂಬರ ಸಾಧುಗಳಿಂದಲೇ ಆಗುತ್ತವೆ. ಗೃಹಸ್ಥನಂತೂ ಸ್ವಯಂ ಚಲಿಸಿ ಕಾಯಕ್ಲೇಶ ತಪ ಮಾಡುವುದಿಲ್ಲ-ಸಾಮಾಯಿಕದ ಸಮಯದಲ್ಲಿಯೇ ಯಾವುದಾದರೂ ಕ್ಲೇಶವು ಬಂದು ಬಿಟ್ಟರೆ ಚಂಚಲನಾಗುವುದಿಲ್ಲ. ಕರ್ಮದ ಉದಯದಿಂದ ತನ್ನ ರಕ್ಷಣೆ ಮಾಡುತ್ತಿದ್ದರೂ ಶೀತಜ್ವರ, ದಾಹಜ್ವರ, ವಾತಶೂಲ ಮೊದಲಾದುವಾದರೆ ಮತ್ತು ದುಷ್ಟ ವೈರೀ, ಧರ್ಮದ್ರೋಹಿಗಳು ಬಂದು ಉಪದ್ರವ ಮಾಡತೊಡಗಿದರೆ, ಜೈಲಿನಲ್ಲಿ ಹಾಕಿದರೆ, ಹೊಡೆಯತೊಡಗಿದರೆ ಗೃಹಸ್ಥರೂ ಮುನಿಗಳ ಕಾಯಕ್ಲೇಶ ತಪದ ಭಾವನೆ ಮಾಡುತ್ತ ಸಮತೆಯ ಭಾವದಿಂದ ಸಹಿಸುತ್ತಾರೆ, ಅಧೀರತೆಯನ್ನು ತೋರಿಸುವುದಿಲ್ಲ. ನಿರ್ಧನತೆಯಿಂದ ಉತ್ಪನ್ನವಾದ ಕ್ಷುಧೆ-ತೃಷೆ, ಶೀತ-ಉಷ್ಣ ಮೊದಲಾದವುಗಳ ದುಃಖದ ವೇದನೆಯು ಕರ್ಮದ ಉದಯದಿಂದ ಬಂದು ಬಿಟ್ಟರೆ ಅಲ್ಲಿ ಅಧೀರರಾಗದಿರುವುದು, ಧರ್ಮದ ಆಶ್ರಯದಿಂದ ಸಹನೆ ಮಾಡುವುದೇ ಕಾಯಕ್ಲೇಶ ತಪವಿದೆ.

ಮುನೀಶ್ವರರಂತೂ ಈ ಪ್ರಕಾರದ ಕಾಯಕ್ಲೇಶ ತಪವನ್ನು ಉತ್ಸಾಹದೊಡನೆ ಧಾರಣ ಮಾಡುತ್ತಾರೆ. ನಾವು ಗೃಹಸ್ಥರು ಕಾಯಕ್ಲೇಶದಿಂದ ಹೆಚ್ಚು ದೂರವಿರುತ್ತೇವೆ. ಆದಾಗ್ಯೂ ಅಸಾತಾ ಕರ್ಮದ ಉದಯದಿಂದ ದುಃಖವು ಬಂದು ಬಿಟ್ಟರೆ ಭಯಭೀತರಾಗಿ ಹೋದರೆ ಅದು ಬಿಡುವುದಿಲ್ಲ. ಧೈರ್ಯಧಾರಣ ಮಾಡಿ ಸಹಿಸಿದರೆ ಕರ್ಮವು ರಸವಿತ್ತು ಅವಶ್ಯವಾಗಿ ನಿರ್ಜರಿತವಾಗಿ ಹೋಗುವುದು; ಆದರೆ ಹೆದರಿಕೊಂಡರೆ ಕ್ಲೇಶಪಟ್ಟುಕೊಂಡರೆ ಸಹನೆಯನ್ನಂತೂ ಮಾಡಬೇಕಾಗುವುದು, ಭೋಗಿಸಲೇಬೇಕಾಗುವುದು, ಕರ್ಮದ ಉದಯಕ್ಕೆ ದಯೆಯಿಲ್ಲ. ಅಧೀರನಾಗಿ ದುಃಖಿಯಾಗುತ್ತ, ಉದಯದಲ್ಲಿ ಬಂದಿದೆಯೆಂದ ಮೇಲೆ ನಾನೇ ಭೋಗಿಸಬೇಕಾಗುವುದು. ಮತ್ತು ಹೀಗೆ ಭೋಗಿಸುವುದರಿಂದ ಭವಿಷ್ಯದ ಸಲುವಾಗಿ ಅಧಿಕಪಟ್ಟು ಬಂಧ ಮಾಡಿಕೊಳ್ಳುವೆನು. ಆದುದರಿಂದ **ಜಿನೇಂದ್ರರ ವಚನಗಳ ಆಶ್ರಯ ಪಡೆದು ಕರ್ಮದ ಉದಯದಲ್ಲಿ ಧೈರ್ಯ ಧಾರಣ ಮಾಡುವುದೇ ಶ್ರೇಷ್ಠವಿದೆ.**

ಗೃಹಸ್ಥರಿಗೆ ಯಾವಾಗ ಅಂತರಾಯ ಕರ್ಮದ ಉದಯ ಬರುತ್ತದೆ ಆಗ ಹೊಟ್ಟೆ ತುಂಬಿಕೊಳ್ಳುವ ಸಲುವಾಗಿ ಪೂರ್ಣ ಆಹಾರವೂ ದೊರಕುವುದಿಲ್ಲ, ತುಪ್ಪ ಮೊದಲಾದ ರಸ ಪದಾರ್ಥ ಸ್ವಲ್ಪ ಸಿಗುತ್ತವೆ ಅಥವಾ ಸಿಗುವುದಿಲ್ಲ; ಆಗ ಅವನು ಸ್ವಲ್ಪದರಲ್ಲಿಯೇ ಸಂತುಷ್ಟನಿರಬೇಕು, ಇತರರ ವೈಭವ ನೋಡಿ ಇಚ್ಛೆ ಮಾಡಬಾರದು, ಸಮತೆಯ ಭಾವರೂಪನಾಗಿ ಉಳಿದರೆ ಸ್ವಾಭಾವಿಕವಾಗಿಯೇ ಕಾಯಕ್ಲೇಶ ತಪವಾಗುತ್ತದೆ, ಅಧಿಕ ನಿರ್ಜರೆಯಾಗುತ್ತದೆ.

ಹೀಗೆ ಆರು ಪ್ರಕಾರದ ಬಾಹ್ಯ ತಪದ ವರ್ಣನೆ ಮಾಡಲಾಯಿತು. ಬಾಹ್ಯ ಎಂದರೆ ಇತರರಿಗೆ ಪ್ರತ್ಯಕ್ಷವಾಗಿ ತಿಳಿದು ಬರುತ್ತವೆ, ಮತ್ತು ಬಾಹ್ಯ ಭೋಜನಾದಿಗಳ ತ್ಯಾಗದಿಂದ ಆಗುತ್ತವೆ, ಮತ್ತು ಅನ್ಯ ಗೃಹಸ್ಥ ಹಾಗೂ ಅನ್ಯ ಮತಿಗಳೂ ಧಾರಣ ಮಾಡುತ್ತಾರೆ, ಅದರಿಂದ ಅವನ್ನು ಬಾಹ್ಯತಪವೆಂದು ಹೇಳಲಾಗಿದೆ. ಹೇಗೆ ದೊಡ್ಡ ಹುಲ್ಲಿನ ಬಣವೆಯನ್ನು ಅಗ್ನಿಯು ಸುಟ್ಟು ಹಾಕುತ್ತದೆ, ಹಾಗೆಯೇ ಪೂರ್ವ ಸಂಚಿತ ಕರ್ಮರಾಶಿಯನ್ನು ಸುಟ್ಟು ಹಾಕುವುದರಿಂದ ಇದನ್ನು ತಪವೆಂದು ಹೇಳಿದೆ. ಶರೀರ ಹಾಗೂ ಇಂದ್ರಿಯಗಳನ್ನು ಪೀಡಿಸಿ ವಿಷಯಗಳಲ್ಲಿ ಮಗ್ನವಾಗಗೊಡದಿರುವುದರಿಂದ ಇದನ್ನು ತಪವೆಂದು ಹೇಳುತ್ತಾರೆ. ಯಾವ ಪ್ರಕಾರ ಕಾಯಿಸಿದ ಸ್ವರ್ಣಯುಕ್ತ ಪಾಷಾಣವು ಕಾಳಿಕೆಯನ್ನು ಬಿಟ್ಟುಕೊಟ್ಟು ಶುದ್ಧ ಚಿನ್ನವಾಗಿ ಹೋಗುತ್ತದೆ, ಅದೇ ಪ್ರಕಾರ ಆತ್ಮನು ಕೂಡ ಇದರ ಪ್ರಭಾವದಿಂದ ಕರ್ಮಮಲ ರಹಿತನಾಗಿ ಹೋಗುತ್ತಾನೆ; ಅದಕ್ಕಾಗಿಯೇ ಭಗವಂತರು ಇದನ್ನು ತಪವೆಂದು ಹೇಳಿದ್ದಾರೆ.

**ಅಂತರಂಗ ತಪ :** ಈಗ ಆರು ಪ್ರಕಾರದ ಅಂತರಂಗ ತಪದ ವರ್ಣನೆ ಮಾಡುತ್ತಾರೆ. ಅಂತರಂಗ ತಪದಲ್ಲಿ ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ ಮತ್ತು ಧ್ಯಾನವೆಂದು ಆರು ಭೇದಗಳಿವೆ. ಪ್ರಾಯಶ್ಚಿತ್ತ ತಪದಲ್ಲಿ ಒಂಭತ್ತು ಭೇದ, ಸಂಖ್ಯಾತ ಮತ್ತು ಅಸಂಖ್ಯಾತ ಭೇದಗಳಿವೆ. ಇಲ್ಲಿ ಆಲೋಚನ ಮೊದಲಾದವುಗಳ ಕಥನ ಮಾಡುವುದರಿಂದ ಕಥನವು ಹೆಚ್ಚು ವಿಸ್ತಾರವಾಗಿ ಹೋಗುವುದರಿಂದ ಸಂಕ್ಷೇಪದಲ್ಲಿ ಹೇಳುತ್ತಾರೆ.

**ಪ್ರಾಯಶ್ಚಿತ್ತ ತಪ :** ಧರ್ಮಾತ್ಮನು ತನ್ನ ವ್ರತ-ಧರ್ಮದಲ್ಲಿ ಎಂದೂ ದೋಷರೂಪದ ಆಚರಣೆ ಮಾಡುವುದಿಲ್ಲ, ಅನ್ಯರಿಗೂ ಸದೋಷ ಆಚರಣೆ ಮಾಡಿಸುವುದಿಲ್ಲ, ದೋಷರೂಪದ ಆಚರಣೆ ಮಾಡುವವರಿಗೆ ಮನ-ವಚನ-ಕಾಯದಿಂದ ಒಳ್ಳೆಯದೆಂದು ಹೇಳುವುದಿಲ್ಲ. ಎಂದಾದರೊಮ್ಮೆ ಪ್ರಮಾದದಿಂದ, ಮರವೆಯಿಂದ ದೋಷ ತಗಲಿದರೆ ನಿರ್ದೋಷ ಸಾಧುಗಳ ಹತ್ತಿರದಲ್ಲಿ ಹೋಗಿ, ಸರಳ ಪರಿಣಾಮದಿಂದ, ಹತ್ತು ಪ್ರಕಾರದ ದೋಷವಿಲ್ಲದೆ ಆಲೋಚನೆ ಮಾಡಿ, ಗುರುಗಳ ಮೂಲಕ ಕೊಡಲಾದ ಪ್ರಾಯಶ್ಚಿತ್ತವನ್ನು ಪರಮ ಶ್ರದ್ಧೆಯಿಂದ ಆದರಪೂರ್ವಕ ಗ್ರಹಣ ಮಾಡುತ್ತಾನೆ. ನನಗೆ ಹೆಚ್ಚು ಪ್ರಾಯಶ್ಚಿತ್ತ ಕೊಟ್ಟಿದ್ದಾರೆ ಅಥವಾ ಕಡಿಮೆ ಪ್ರಾಯಶ್ಚಿತ್ತ ಕೊಟ್ಟಿದ್ದಾರೆಂದು ಹೃದಯದಲ್ಲಿ ಸಂದೇಹ ಮಾಡುವುದಿಲ್ಲ ಪ್ರಮಾದದಿಂದ ಒಂದು ಸಾರೆ ದೋಷ ತಗಲಿದ್ದರೆ ಅದನ್ನು ಪ್ರಾಯಶ್ಚಿತ್ತ ತೆಗೆದುಕೊಂಡು ದೂರ ಮಾಡಿ ಬಿಡುತ್ತಾನೆ. ನಂತರ ಎಷ್ಟು ಸಾವಧಾನನಿರುತ್ತಾನೆಂದರೆ ತನ್ನಲ್ಲಿ ನೂರು ತುಂಡುಗಳಾಗಿ ಹೋದರೂ ಕೂಡ ಪುನಃ ದೋಷ ತಗಲಗೊಡದಿರುವವನ ಪ್ರಾಯಶ್ಚಿತ್ತ ತೆಗೆದುಕೊಳ್ಳುವುದು ಸಾರ್ಥಕವಿದೆ.

ಅನೇಕ ಗುಣಗಳ ಧಾರಕ, ಸಿದ್ಧಾಂತ ರಹಸ್ಯದ ಪಾರಂಗತ, ಪ್ರಶಾಂತ ಮನಸ್ಸುಳ್ಳ, ಅಪರಿಸ್ರಾವೀ ಗುಣಗಳ ಧಾರಕರಾದಂಥವರು ಹೇಗೆ ಕಾಯ್ದ ಲೋಹದ ಗುಂಡು ನೀರನ್ನು ಕುಡಿದು ಅದನ್ನು ಹೊರಗೆ ಬರಗೊಡುವುದಿಲ್ಲ, ಅದೇ ಪ್ರಕಾರ ಅವರು ಶಿಷ್ಯರ ಮೂಲಕ ಆಲೋಚನೆ ಮಾಡಿದ ದೋಷವನ್ನು ಬಾಹ್ಯದಲ್ಲೆಂದೂ ಪ್ರಕಟ ಮಾಡಿ ಹೇಳುವುದಿಲ್ಲ, ದೇಶ-ಕಾಲದ ಜ್ಞಾತಾ, ಏಕಾಂತದಲ್ಲಿ ವಾಸಿಸುವಂಥ, ಆಚಾರ್ಯರುಗಳು ಮೊದಲು ಹೇಳಿದ ಅನೇಕ ಗುಣಗಳ ಧಾರಕರ ಹತ್ತಿರ ಪ್ರಾಯಶ್ಚಿತ್ತ ತೆಗೆದುಕೊಳ್ಳುವಂಥವನು ಕೈ ಮುಗಿದು ಅತ್ಯಂತ ವಿನಯದೊಡನೆ, ಬಾಲಕನ ಹಾಗೆ ಸರಳ ಚಿತ್ತನಾಗಿ ಆತ್ಮನಿಂದೆ ಮಾಡಿಕೊಳ್ಳುತ್ತ ಆಲೋಚನೆ ಮಾಡುತ್ತಾನೆ.

ಯಾವ ಪ್ರಕಾರ ರಕ್ತ ತಗಲಿದ ವಸ್ತ್ರವನ್ನು ರಕ್ತದಿಂದ ತೊಳೆಯಲಾಗುವುದಿಲ್ಲ, ಕೊಳೆಯಿಂದ ಕೊಳೆಯನ್ನು ತೊಳೆಯಲಾಗುವುದಿಲ್ಲ, ಅದೇ ಪ್ರಕಾರ ದೋಷಯುಕ್ತನಾದ ಸಾಧುವೂ ಶಿಷ್ಯನನ್ನು ನಿರ್ದೋಷ ಮಾಡುವ ಸಾಧ್ಯತೆಯಿಲ್ಲ. **ಯಾವ ಪ್ರಕಾರ ಮೂಢ ವೈದ್ಯನು ವಿರುದ್ಧ ಚಿಕಿತ್ಸೆ ಮಾಡಿ ರೋಗಿಯನ್ನು ಸಾಯಿಸಿ ಬಿಡುತ್ತಾನೆ, ಅದೇ ಪ್ರಕಾರ ಅಜ್ಞಾನೀ ಗುರು ಕೂಡ ಶಿಷ್ಯನನ್ನು ಸಂಸಾರ ಸಮುದ್ರದಲ್ಲಿ ಮುಳುಗಿಸಿ ಬಿಡುತ್ತಾನೆ** - ನಿರ್ದೋಷ ಗುರುಗಳೇ ಪ್ರಾಯಶ್ಚಿತ್ತ ಕೊಟ್ಟು ಶುದ್ಧ ಮಾಡುತ್ತಾರೆ.

ಸಂಯಮೀ ಪುರುಷರಂತೂ ಓರ್ವ ಗುರು, ಓರ್ವ ಶಿಷ್ಯ, ಈರ್ವರೇ ಏಕಾಂತದಲ್ಲಿ ಆಲೋಚನೆ ಮಾಡುತ್ತಾರೆ. ಆರ್ಯಿಕೆಯರು ಬಯಲಿನಲ್ಲಿ ಓರ್ವ ಗುರು, ಓರ್ವ ಗಣಿನೀ ಆರ್ಯಿಕೆ, ಓರ್ವ ದೋಷ ತಗಲಿದವರು ಹೀಗೆ ಮೂವರಿರುತ್ತಾರೆ. ಯಾರು ಲಜ್ಜೆಯಿಂದ, ತಿರಸ್ಕಾರದ ಭಯದಿಂದ, ಪ್ರಾಯಶ್ಚಿತ್ತದ ಭಯದಿಂದ ಅಥವಾ ಅಭಿಮಾನದಿಂದ ದೋಷವನ್ನು ಶುದ್ಧ ಮಾಡಿಕೊಳ್ಳುವುದಿಲ್ಲ. ಅವರು ಲಾಭ-ಹಾನಿಯ ಜ್ಞಾನವಿಲ್ಲದ ವ್ಯಾಪಾರಿಯ ಹಾಗೆ ಕರ್ಮರೂಪದ ಸಾಲಗಾರರಾಗಿ ಭ್ರಷ್ಟನಾಗಿ ಹೋಗುತ್ತಾರೆ.

ಆಲೋಚನೆಯಿಲ್ಲದೆ ಮಹಾನ ತಪ ಧಾರಣ ಮಾಡುವುದರಿಂದಲೂ ಇಚ್ಛಿತ ಫಲವು ದೊರಕುವುದಿಲ್ಲ. ಆಲೋಚನೆ ಮಾಡಿಯೂ ಗುರುಗಳ ಮೂಲಕ ಕೊಡಲಾದ ಪ್ರಾಯಶ್ಚಿತ್ತ ತೆಗೆದುಕೊಳ್ಳದಿದ್ದರೆ ವೈದ್ಯನು ತಿಳಿಸಿದ ಔಷಧವನ್ನು ತಿನ್ನದಂಥ ರೋಗಿಯ ಹಾಗೆ ಶುದ್ಧನಾಗುವುದಿಲ್ಲ, ಮತ್ತು ಭೂಮಿಯನ್ನು ಹರಗಿ ಹದ ಮಾಡದೆ ಭೂಮಿಯಲ್ಲಿ ಬೀಜ ಬಿತ್ತುವುದರಿಂದ ಅಧಿಕ ಇಳುವರಿ ಬರುವುದಿಲ್ಲ, ಅಥವಾ ಸ್ವಚ್ಛ ಮಾಡದ ಕನ್ನಡಿಯಲ್ಲಿ ಸ್ಪಷ್ಟವಾಗಿ ರೂಪು ಕಂಡು ಬರುವುದಿಲ್ಲ.

**ಈಗ ಈ ಕಲಿಕಾಲದ ಪ್ರಭಾವದಿಂದ ಪ್ರಾಯಶ್ಚಿತ್ತ ಕೊಡುವಂಥ ನಿರ್ದೋಷ ಗುರುಗಳೂ ಕಂಡು ಬರುವುದಿಲ್ಲ.** ಯಾರು ತಾವೇ ಅನೇಕ ದೋಷಗಳಿಂದ ಯುಕ್ತರಿದ್ದಾರೆ ಅವರು ಇತರರನ್ನು ಹೇಗೆ ಶುದ್ಧ ಮಾಡುವ ಸಾಧ್ಯತೆಯಿದೆ ? **ರಕ್ತದಿಂದ ರಕ್ತವನ್ನು ಹೇಗೆ ತೊಳೆಯಲಾಗುವುದು ?** ಆತ್ಮಾನುಶಾಸನದಲ್ಲಿ ಹೀಗೆ ಹೇಳುತ್ತಾರೆ -

**ಕಲೌ ದಂಡೋ ನೀತಿಃ ಸ ಚ ನೃಪತಿಭಿಸ್ತೇ ನೃಪತಯೋ**
**ನಯಂತ್ಯರ್ಥಾರ್ಥಂ ತಂ ನ ಚ ಧನಮದೋಽಸ್ತ್ಯಾಶ್ರಮವತಾಮ್ ।**
**ನತಾನಾಮಾಚಾರ್ಯಾ ನ ಹೀ ನತಿರತಾಃ ಸಾಧು ಚರಿತಾ**
**ಸ್ತಪಸ್ಥೇಷು ಶ್ರೀಮನ್ಮಣಯ ಇವ ಜಾತಾಃ ಪ್ರವಿರಲಾಃ ||೧೪೯||**

**ಅರ್ಥ :-** ಓರ್ವ ಶಿಷ್ಯನು ಗುಣಭದ್ರ ಸ್ವಾಮಿಗೆ ಕೇಳುತ್ತಾನೆ. ಓ ಸ್ವಾಮಿ ! ಈ ಕಾಲದಲ್ಲಿ ತಪಸ್ವಿ ಮುನಿಗಳಲ್ಲಿ ಕೂಡ ಯಥಾರ್ಥ ಆಚರಣೆ ಮಾಡುವಂಥವರು ಅತ್ಯಂತ ವಿರಳರಾಗಿಯೇ ಇದ್ದಾರೆ ಇದರ ಕಾರಣವೇನು ? ಇದರ ಉತ್ತರ ಕೊಡುವ ಸಲುವಾಗಿ ಈ ಶ್ಲೋಕ ಹೇಳಿದ್ದಾರೆ. ಶ್ಲೋಕದ ಅರ್ಥ : **ಈ ಕಲಿಕಾಲದಲ್ಲಿ ನೀತಿಯಿಂದ ನಡೆಸುವುದರ ಉಪಾಯವು ಶಿಕ್ಷೆ ಕೊಡುವುದಿದೆ. ಶಿಕ್ಷೆಯ ಭಯವಿಲ್ಲದೆ ಯಾರೂ ನ್ಯಾಯಮಾರ್ಗದ ಮೇಲೆ ಸ್ವಯಂ ಸ್ವೇಚ್ಛೆಯಿಂದ ನಡೆಯುವುದಿಲ್ಲ.** ಶಿಕ್ಷೆಯನ್ನು ದೊರೆಗಳ ಮೂಲಕವೇ ಕೊಡಲಾಗುತ್ತದೆ. ಏಕೆಂದರೆ ಕಲಿಕಾಲದಲ್ಲಿ ಬಲವಂತರ ಹೊರತಾಗಿ ಅನ್ಯ ಸಾಧರ್ಮಿಗಳ ಮೂಲಕ, ವೃದ್ಧ ಪುರುಷರ ಮೂಲಕ, ಸಮಾಜದ ಮೂಲಕ ಕೊಡಲಾದ ಶಿಕ್ಷೆಯನ್ನು ಯಾರೂ ಗ್ರಹಣ ಮಾಡುವುದಿಲ್ಲ, ಅವರ ಹೇಳಿಕೆಯನ್ನು ಯಾರೂ ಮನ್ನಿಸುವುದಿಲ್ಲ. ಬಲಶಾಲಿ ದೊರೆಗಳಿಂದ ಕೊಡಲಾದ ಶಿಕ್ಷೆಯನ್ನೇ ಗ್ರಹಣ ಮಾಡುತ್ತಾರೆ.

ಈ ಕಲಿಕಾಲದಲ್ಲಿ ದೊರೆಗಳು ಕೂಡ ಯಾರಿಂದ ತಮಗೆ ಧನದ ಪ್ರಾಪ್ತಿಯಾಗುವುದು ಕಂಡು ಬರುತ್ತದೆ ಅವರಿಗೇ ಶಿಕ್ಷೆ ಕೊಡುತ್ತಾರೆ. ಒಂದು ವೇಳೆ ಅವನು ದೊರೆಗೆ ಧನ ಕೊಟ್ಟನೆಂದರೆ ಅವನಿಗೆ ಶಿಕ್ಷೆ ಕೊಡುವುದಿಲ್ಲ-ನಿರ್ಧನರಿಗೆ ಶಿಕ್ಷೆ ಕೊಡುವುದಿಲ್ಲ. ಯಾವ ಶ್ರಮವನ್ನೂ ಮಾಡದಂಥ ಆಶ್ರಮವಾಸಿಯಾದ ಸಂಯಮಿಗಳ ಹತ್ತಿರ ಸ್ವಲ್ಪವೂ ಧನವಿರುವುದಿಲ್ಲ, ಅದಕ್ಕಾಗಿಯೇ ಅವರು ಸಂಯಮ ಸ್ವೀಕರಿಸಿಯೂ ಕುಮಾರ್ಗದ ಮೇಲೆ ನಡೆಯುತ್ತಾರೆ; ಏಕೆಂದರೆ ಅವರಿಗೆ ದೊರೆಯ ಶಿಕ್ಷೆಯ ಭಯವಂತೂ ಇಲ್ಲ, ಅವರು ಯಾವುದರಿಂದ ಕುಮಾರ್ಗವನ್ನು ಬಿಟ್ಟುಕೊಡುವರು.

**ಆಚಾರ್ಯರಿಗೂ ಶಿಕ್ಷೆಯಾಗಬೇಕು, ಏಕೆಂದರೆ ಕಲಿಕಾಲದಲ್ಲಿ ಶಿಷ್ಯರುಗಳ ಮೇಲೆ ಆಚಾರ್ಯರ ಅನುರಾಗವಾಗತೊಡಗಿದೆ.** ಅವರು ತಮಗೆ ನಮಸ್ಕಾರ ಮಾಡುವವರಿಗೆ ಶಿಕ್ಷೆ ಕೊಡುವುದಿಲ್ಲ, ತಮ್ಮ ಸಂಘ-ಸಂಪ್ರದಾಯವನ್ನು ಹೆಚ್ಚಿಸುವ ಸಲುವಾಗಿ ಯಾರು ತಮಗೆ ನಮಸ್ಕಾರ ಮಾಡುತ್ತಾರೆ ಅವರನ್ನು ತಮ್ಮವರೆಂದು ತಿಳಿದುಕೊಂಡು ಶಿಕ್ಷೆ ಕೊಡುವುದಿಲ್ಲ, ಆಗ ಅವರು ಶಿಕ್ಷೆಯ ಭಯದಿಂದ ರಹಿತರಾಗಿ ಶಾಸ್ತ್ರವಿರುದ್ಧ ಆಚರಣೆ ಮಾಡತೊಡಗುತ್ತಾರೆ. ಆದುದರಿಂದ ಕಲಿಕಾಲದಲ್ಲಿ ತಪಸ್ವಿಗಳಲ್ಲಿ ಕೂಡ ಸತ್ಯ ಆಚರಣೆ ಮಾಡುವಂಥವರು ಅತ್ಯಂತ ವಿರಳರಾಗಿಯೇ ಕಂಡು ಬರುತ್ತಾರೆ. ಕೇವಲ ವೇಷಧಾರಿಗಳು ಮಾತ್ರ ಬಹಳಷ್ಟು ಕಂಡು ಬರುತ್ತಾರೆ.

ಆದುದರಿಂದ ಪ್ರಾಯಶ್ಚಿತ್ತವೇ ಕಲ್ಯಾಣದ ಕಾರಣವಿದೆ, ಆದರೆ ಗೃಹಸ್ಥರಲ್ಲಿ ಪ್ರಾಯಶ್ಚಿತ್ತದ ಪ್ರವೃತ್ತಿಯು ಹೇಗಿರುವುದು ? ಪರಮೇಷ್ಠಿಯ ಪ್ರತಿಬಿಂಬದ ಎದುರಿಗೆ ಹೋಗಿಯೇ ತಮ್ಮ ಅಪರಾಧದ ಆಲೋಚನೆ ಮಾಡಿ, ಅದರಿಂದ ಅಪರಾಧವು ಪುನಃ ಸ್ವಪ್ನದಲ್ಲಿ ಕೂಡ ಸಂಭವಿಸದ ರೀತಿಯಲ್ಲಿ ಪ್ರಯತ್ನ ಮಾಡಬೇಕಾಗುವುದು.

**ವಿನಯತಪ :** ವಿನಯ ತಪವು ಅಂತರಂಗ ತಪದ ಎರಡನೇ ಭೇದವಿದೆ. ಅದರಲ್ಲಿ ಕೂಡ ದರ್ಶನವಿನಯ, ಜ್ಞಾನವಿನಯ, ಚಾರಿತ್ರವಿನಯ, ತಪವಿನಯ ಮತ್ತು ಉಪಚಾರವಿನಯವೆಂದು ಐದು ಭೇದಗಳಿವೆ.

**ದರ್ಶನವಿನಯ :** ಪದಾರ್ಥಗಳ ಶ್ರದ್ಧೆಯಲ್ಲಿ ಶಂಕಾದಿ ದೋಷಗಳಿಲ್ಲದೆ ನಿಃಶಂಕವಾಗಿರುವುದು ಅದು ದರ್ಶನ ವಿನಯವಿದೆ. ಸಮ್ಯಗ್ದರ್ಶನದ ಪರಿಣಾಮವಾಗುವಲ್ಲಿ ಹರ್ಷ ಹಾಗೂ ಸಮ್ಯಕ್ತ್ವದ ವಿಶುದ್ಧತೆಯಲ್ಲಿ ತತ್ಪರನಿರುವುದು, ಸಮ್ಯಗ್ದೃಷ್ಟಿಗಳ ಸಹವಾಸ ಬಯಸುವುದು, ಸಮ್ಯಕ್ತ್ವದ ಪರಿಣಾಮದ ಭಾವನೆ ಭಾವಿಸುವುದು, ಮಿಥ್ಯಾಧರ್ಮದ ಪ್ರಶಂಸೆ ಮಾಡದಿರುವುದು, ಏಕೆಂದರೆ **ಮಿಥ್ಯಾದೃಷ್ಟಿಯ ಆಚರಣೆಯೆಲ್ಲವು ಇಹಲೋಕ-ಪರಲೋಕದಲ್ಲಿ ಯಶಸ್ಸು, ಪ್ರಸಿದ್ಧಿ**

**ವಿಷಯಸುಖ, ಧನ, ಸಂಪತ್ತಿಯ ಅಪೇಕ್ಷೆಯೊಡನೆ ಆತ್ಮಜ್ಞಾನದಿಂದ ರಹಿತವಿದೆ. ಅದು ಬಂಧದ ಕಾರಣ ವಾಗಿರುವುದರಿಂದ ಪ್ರಮಾಣ (ಸತ್ಯ) ವಿಲ್ಲ.** ವೀತರಾಗ ಸರ್ವಜ್ಞದೇವರು ಯಾವ ಪದಾರ್ಥಗಳ ಸ್ವರೂಪ ಹೇಳಿದ್ದಾರೆ ಅದು ಪ್ರಮಾಣವಿದೆ ಇದು ದರ್ಶನವಿನಯವಿದೆ.

**ಜ್ಞಾನವಿನಯ :** ಜ್ಞಾನ ವಿನಯವು ಆಲಸ್ಯರಹಿತ, ಖೇದರಹಿತ, ವಿಷಯ-ಕಷಾಯಗಳ ಮಲರಹಿತ, ಶುದ್ಧ ಮನಸಹಿತ, ದೇಶ-ಕಾಲದ ವಿಶುದ್ಧಿಯ ವಿಧಾನದಲ್ಲಿ ನಿಪುಣ ಪುರುಷನು ಅತ್ಯಂತ ಆದರದೊಡನೆ ಯಥಾಶಕ್ತಿ ಮೋಕ್ಷದ ಬಯಕೆಯುಳ್ಳವನಾಗಿ, ವೀತರಾಗ ಸರ್ವಜ್ಞರ ಮೂಲಕ ಹೇಳಲಾದ ಪರಮಾಗಮದ ಜ್ಞಾನ ಗ್ರಹಣ ಮಾಡುವುದು, ಅಭ್ಯಾಸ ಮಾಡುವುದು, ಸ್ಮರಣೆ ಮಾಡುವುದು ಅದು ಜ್ಞಾನವಿನಯವಿದೆಯೆಂದು ತಿಳಿಯುವುದು. ಜ್ಞಾನದ ಅಭ್ಯಾಸದಿಂದಲೇ ಜೀವದ ಹಿತವಿದೆ, ಜ್ಞಾನವಿಲ್ಲದ ಮನುಷ್ಯನು ಪಶುವಿನ ಸಮಾನನಿದ್ದಾನೆ. ಜ್ಞಾನದ ಸೇವನೆಯಿಂದಲೇ ಮನುಷ್ಯಾಚಾರವಾಗುತ್ತದೆ. ಕಾಮ ಸೇವನೆ, ಭೋಜನ, ಇಂದ್ರಿಯ ವಿಷಯಗಳಂತೂ ತಿರ್ಯಂಚಗಳಿಗೂ ಇರುತ್ತವೆ. ಜ್ಞಾನವಿನಯದ ಧಾರಕನು ನಿರಂತರ ಸಮ್ಯಗ್ಜ್ಞಾನದ ವಾಂಛೆಯನ್ನೇ ಮಾಡುತ್ತಾನೆ. ಜ್ಞಾನದ ಲಾಭಕ್ಕೇನೇ ಪರಮ ನಿಧಾನದ ಲಾಭವೆಂದು ಮನ್ನಿಸುತ್ತಾನೆ. ಈ ಜ್ಞಾನ ವಿನಯವು ಮಹಾನ ನಿರ್ಜರೆಗೆ ಕಾರಣವಿದೆ. ಜ್ಞಾನವಿನಯವಿದ್ದವನಿಗೆ ಜ್ಞಾನ ಧಾರಕರ ಕುರಿತು ವಿಶೇಷ ವಿನಯವಿರುತ್ತದೆ.

**ಚಾರಿತ್ರವಿನಯ :** ಚಾರಿತ್ರ ವಿನಯವು ಜ್ಞಾನ-ದರ್ಶನವುಳ್ಳ ಪುರುಷರ ಪಂಚಾಚಾರದ ಶ್ರವಣ ಮಾಡುತ್ತಿರುವಂತೆಯೇ ಸಮಸ್ತ ಶರೀರದಲ್ಲಿ ರೋಮಾಂಚವು ಪ್ರಕಟವಾಗಿ ಹೋಗುತ್ತದೆ, ಅಂತರಂಗದಲ್ಲಿ ಭಕ್ತಿಯು ಉತ್ಪನ್ನವಾಗಿ ಹೋಗುತ್ತದೆ, ಮತ್ತು ವಿಷಯ ಕಷಾಯಗಳ ನಿಗ್ರಹರೂಪವಿರುವ ಪರಮ ಶಾಂತಭಾವದ ಪ್ರಸಾದದಿಂದ ಮಸ್ತಕದ ಮೇಲೆ ಕೈ ಮುಗಿದು ಭಾವದಲ್ಲಿ ಸ್ವಯಂ ಚಾರಿತ್ರರೂಪವಾಗಿ ಹೋಗುವುದು ಅದು ಚಾರಿತ್ರ ವಿನಯವಿದೆ.

**ತಪವಿನಯ :** ತಪವಿನಯವು ಯಾರ ಭಾವಗಳಲ್ಲಿ ಸಂಸಾರದ ದುಃಖಗಳನ್ನು ಕತ್ತರಿಸುವಂಥ, ಆತ್ಮನಿಗೆ ಬಾಧೆಯಿಲ್ಲದ ಸುಖವನ್ನು ಪ್ರಾಪ್ತ ಮಾಡಿಸುವಂಥ, ವಿಷಯ-ಕಷಾಯಗಳ ರೋಗದ ಉಪದ್ರವವನ್ನು ಜಯಿಸುವಂಥ, ಒಂದುತಪವೇ ಯಾರಿಗೆ ಪರಮ ಶರಣಾಗಿ ಕಂಡು ಬರುತ್ತದೆ ಅವರಿಗೆ ತಪ ಭಾವನೆಯಿರುತ್ತದೆ, ಅವರಿಗೇ ತಪದ ವಿನಯವಿರುತ್ತದೆ, ಅವರಿಗೇ ವಿನಯತಪವಾಗುತ್ತದೆ. ತಪಸ್ವಿಗಳನ್ನು ಉಚ್ಚ ಸರ್ವೋತ್ಕೃಷ್ಟರೆಂದು ತಿಳಿಯುವುದು, ತಪಸ್ವಿಗಳ ಸೇವೆ, ಭಕ್ತಿ, ವೈಯ್ಯಾವೃತ್ಯ, ಸ್ತುತಿ ಮಾಡುವುದು ಅದು ತಪವಿನಯವಿದೆ. ಶಕ್ತಿಗೆ ಅನುಸರಿಸಿ ಇಂದ್ರಿಯಗಳ ನಿಗ್ರಹ ಮಾಡಿ, ದೇಶ-ಕಾಲದ ಯೋಗ್ಯತೆಯ ಅನುಸಾರ ಅನಶನ ಮೊದಲಾದ ತಪವನ್ನು ಉದ್ಯಮಶೀಲರಾಗಿ ಧಾರಣ ಮಾಡುವುದು ಅದೆಲ್ಲವು ತಪವಿನಯವಿದೆ.

**ಉಪಚಾರ ವಿನಯ :-** ಉಪಚಾರ ವಿನಯವು ಆಚಾರ್ಯ ಮೊದಲಾದ ಪೂಜ್ಯ ಪುರುಷರನ್ನು ನೋಡುತ್ತಿರುವಂತೆಯೇ ಎದ್ದು ನಿಲ್ಲುವುದು, ಏಳು ಹೆಜ್ಜೆ ಮುಂದೆ ಹೋಗುವುದು, ಕೈ ಮುಗಿದು ಮಸ್ತಕಕ್ಕೆ ತಗಲಿಸುವುದು, ಅವರನ್ನು ಮುಂದೆ ಮಾಡಿ ತಾವು ಹಿಂದೆ ಹಿಂದೆ ನಡೆಯುವುದು, ಪಠಣ-ಪಾಠಣ, ತಪಶ್ಚರಣ, ಆತಾಪನಯೋಗ ಮೊದಲಾದ ನವೀನ ಶಾಸ್ತ್ರದ ಅಭ್ಯಾಸ ಪ್ರಾರಂಭ, ವಿಹಾರ, ವಂದನೆ ಮೊದಲಾದ ಎಲ್ಲ ಕಾರ್ಯಗಳನ್ನು ಗುರುಗಳಿಗೆ ತಿಳಿಸಿ ಮಾಡುವುದು, ಗುರುಗಳ ಉಪಸ್ಥಿತಿಯಲ್ಲಿ ಉಚ್ಚಾಸನದ ಮೇಲೆ ಕೂಡ್ರದಿರುವುದೆಲ್ಲವು ಉಪಚಾರವಿನಯವಿದೆ. ಒಂದು ವೇಳೆ ಆಚಾರ್ಯರು ಪರೋಕ್ಷವಿದ್ದರೆ ಮನ-ವಚನ-ಕಾಯದ ಶುದ್ಧಿಪೂರ್ವಕ ಅವರಿಗೆ ನಮಸ್ಕಾರ ಮಾಡುವುದು, ಕೈ ಮುಗಿದು ಗುಣಗಳ ಸ್ಮರಣೆ ಮಾಡುವುದು, ಗುಣಗಳ ಪ್ರಶಂಸೆ ಮಾಡುವುದು, ಅವರಿಂದ ತೆಗೆದುಕೊಂಡ ಪ್ರತಿಜ್ಞೆಯ ಪಾಲನೆ ಮಾಡುತ್ತಿರುವುದೆಲ್ಲವು ಉಪಚಾರ ವಿನಯವಿದೆ. ವಿನಯದ ಪ್ರಭಾವದಿಂದ ಸಮ್ಯಗ್ಜ್ಞಾನದ ಪ್ರಾಪ್ತಿಯಾಗುತ್ತದೆ, ಅನೇಕ ವಿದ್ಯೆಗಳ ಸಿದ್ಧಿಯಾಗುತ್ತದೆ, ಮದದ ಅಭಾವವಾಗುತ್ತದೆ, ಆಚಾರದ ಉಜ್ವಲತೆಯಾಗುತ್ತದೆ, ಸಮ್ಯಕ್ ಆರಾಧನೆಯಾಗುತ್ತದೆ, ಯಶಸ್ಸದ ಉಜ್ವಲತೆಯಾಗುತ್ತದೆ. ಮತ್ತು ಕರ್ಮದ ನಿರ್ಜರೆಯಾಗುತ್ತದೆ.

**ವ್ಯವಹಾರ ವಿನಯ :** ಅನ್ಯ ಸಾಧರ್ಮಿಗಳ, ಶಿಷ್ಯರುಗಳ, ಭೇದಜ್ಞಾನವುಳ್ಳವರದು ಕೂಡ ಯಥಾಯೋಗ್ಯ ವಿನಯ ಮಾಡುವುದು, ಮಿಥ್ಯಾದೃಷ್ಟಿಗಳದೂ ತಿರಸ್ಕಾರ ಮಾಡದಿರುವುದು, ಸವಿನುಡಿಗಳಿಂದ ಆದರಪೂರ್ವಕ ಮಾತನಾಡುವುದು,

ಸಂತೋಷ ಪಡಿಸುವಂಥ, ದುಃಖದೂರ ಮಾಡುವಂಥ ವಚನ ಹೇಳುವುದೇ ವಿನಯವಿದೆ. ಉದ್ಧತ ಚೇಷ್ಟೆಯು ಈರ್ವರನ್ನು ನಷ್ಟ ಮಾಡಿಬಿಡುತ್ತದೆ. ಉಪಚಾರ ವಿನಯವು ಮನ-ವಚನ-ಕಾಯದಿಂದ ಅನೇಕ ಪ್ರಕಾರದ್ದಿರುತ್ತದೆ. ಗುರುಗಳ ಹಾಗೂ ಸಮ್ಯಗ್ದರ್ಶನ ಮೊದಲಾದ ಗುಣಗಳ ಧಾರಕರ ಮಲಗುವ ಸ್ಥಾನ, ಕೂಡ್ರುವ ಸ್ಥಾನ ಸ್ವಚ್ಛ ಮಾಡುವುದು, ಅವರ ಆಸನಕ್ಕಿಂತ ಕೆಳಗೆ ಕುಳಿತುಕೊಳ್ಳುವುದು ಕೆಳಗಿನ ಸ್ಥಾನದಲ್ಲಿ ಮಲಗಿಕೊಳ್ಳುವುದು, ಯೋಗ್ಯತೆಗೆ ಅನುಸರಿಸಿ ಪಾದಸ್ಪರ್ಶ ಮಾಡುವುದು, ದುಃಖ-ರೋಗಗಳು ಬಂದು ಬಿಟ್ಟರೆ ಶರೀರದ ಶುಶ್ರೂಷೆ ಮಾಡಿ ತಮ್ಮ ಜನ್ಮ ಸಾರ್ಥಕವಾಯಿತೆಂದು ಮನ್ನಿಸುವುದೇ ವಿನಯವಿದೆ.

ಪೂಜ್ಯ ಪುರುಷರ ನಿಕಟ ಉಗುಳಬಾರದು, ಆಲಸ್ಯ ತೋರಿಸಬಾರದು, ಆಕಳಿಕೆ ತೆಗೆಯಬಾರದು, ಬೆರಳು ಮೊಲಾದುವನ್ನು ಮುರಿಯಬಾರದು, ಹಾಸ್ಯ ಮಾಡಬಾರದು, ಕಾಲುಗಳನ್ನು ವಿಸ್ತರಿಸಬಾರದು, ಕೈಗಳಿಂದ ಚಪ್ಪಾಳೆ ತಟ್ಟಬಾರದು, ಅಂಗವಿಕಾರ, ಭ್ರುಕುಟಿಯ ವಿಕಾರ, ಅಂಗಗಳ ಸಂಸ್ಕಾರ ಮೊದಲಾದುವನ್ನು ಮಾಡಬಾರದು.

**ವಿನಯವಂತರು ಸ್ವಯಂ ಉಚ್ಚಾಸನದಲ್ಲಿದ್ದುಕೊಂಡು ವಂದನೆ ಮಾಡಬಾರದು.** ಎಲ್ಲೆಲ್ಲಿ ಸಂಯಮಿಗಳು ಕುಳಿತಿರುವರು ಅಲ್ಲಲ್ಲಿಗೆ ಹೋಗಿ ವಂದನೆ ಮಾಡಬೇಕು. ಸಂಯಮಿಗಳು ಬರುತ್ತಿರುವುದನ್ನು ನೋಡಿ ಯಾರು ಎದ್ದು ನಿಲ್ಲುತ್ತಾರೆ, ಆಸನ ಬಿಟ್ಟುಕೊಡುತ್ತಾರೆ, ವಂದನೆ ಮಾಡುತ್ತಾರೆ ಅವರಿಗೇ ವಿನಯವಿದೆ. ನಮ್ಮ ಸಲುವಾಗಿ ಗುರುಗಳ ಆಜ್ಞೆಯು ಯಾವ ಪ್ರಕಾರವಿದೆ ಅದೇ ಪ್ರಕಾರ ಅಂಗೀಕಾರ ಮಾಡಿದರೆ ನಮ್ಮ ಸಮಾನರಾದ ಪುಣ್ಯವಂತರು ವಿರಳರಾಗಿಯೇ ಇರುವರು.

**ವಿನಯರಹಿತನ ವ್ರತ, ಶೀಲ, ಸಂಯಮ, ವಿದ್ಯೆಗಳೆಲ್ಲವೂ ನಿಷ್ಫಲವಿವೆ.** ವಿನಯದ ಪ್ರಭಾವದಿಂದ ಕ್ರೋಧ, ಮಾನ, ವೈರ ಮೊದಲಾದ ಸಮಸ್ತ ದೋಷಗಳ ಅಭಾವವಾಗುತ್ತವೆ, ವಿನಯವಿಲ್ಲದೆ ಸಂಸಾರ ಸಂಬಂಧದ ಧನ, ಸೌಭಾಗ್ಯ, ಯಶಸ್ಸು, ಮಿತ್ರತೆ ಗುಣಗ್ರಾಹಕತೆ, ಸರಳತೆ, ಮಾನ್ಯತೆ, ಕೃತಜ್ಞತೆಗಳೆಲ್ಲವೂ ನಷ್ಟವಾಗಿ ಹೋಗುತ್ತವೆ. ಆದುದರಿಂದ ಸಾಧುಗಳಿಗೆ ಮತ್ತು ಗೃಹಸ್ಥರಿಗೆ ಸಮಸ್ತ ಧರ್ಮದ ಮೂಲವಾದ ವಿನಯವನ್ನೇ ಧಾರಣ ಮಾಡುವುದು ಶ್ರೇಷ್ಠವಿದೆ.

**ವೈಯಾವೃತ್ಯ ತಪ :** ಯಾರಿಗೆ ಗುಣಗಳಲ್ಲಿ ಪ್ರೀತಿ, ಧರ್ಮದಲ್ಲಿ ಶ್ರದ್ಧೆ, ಧರ್ಮಾತ್ಮರಲ್ಲಿ ವಾತ್ಸಲ್ಯ, ನಿರ್ವಿಚಿಕಿತ್ಸೆ ಮೊದಲಾದ ಗುಣಗಳಿರುತ್ತವೆ ಅವರಿಗೆ ವೈಯಾವೃತ್ಯ ತಪವು ಕೂಡ ಆಗುತ್ತದೆ. ಕೃತಘ್ನರಲ್ಲಿ ಆಚಾರ್ಯರುಗಳ ವೈಯಾವೃತ್ಯದ ಪರಿಣಾಮವಿರುವುದಿಲ್ಲ, ಆಗಮದಲ್ಲಿ ಹತ್ತು ಪ್ರಕಾರದ ವೈಯಾವೃತ್ಯ ಹೇಳಿದೆ. ಆಚಾರ್ಯ, ಉಪಾಧ್ಯಾಯ, ತಪಸ್ವಿ, ಶೈಕ್ಷ್ಯ, ಗ್ಲಾನ, ಗುಣ, ಕುಲ, ಸಂಘ, ಸಾಧು, ಮನೋಜ್ಞವೆಂದು ಹತ್ತು ಪ್ರಕಾರದ ಸಾಧುಗಳ ವೈಯಾವೃತ್ಯ ಹೇಳಿದೆ.

ಯಾರು ಸಮ್ಯಗ್ಜ್ಞಾನ ಮೊದಲಾದ ಗುಣಗಳನ್ನು ಹಾಗೂ ಸ್ವರ್ಗ-ಮೋಕ್ಷದ ಸುಖರೂಪ ಅಮೃತದ ಬೀಜವಾದ ವ್ರತ-ಸಂಯಮಗಳನ್ನು ತಮ್ಮ ಹಿತದ ಸಲುವಾಗಿ ಆಚರಣೆ ಮಾಡುತ್ತಾರೆ ಅವರು ಸಾಧು **ಆಚಾರ್ಯ**ರಿದ್ದಾರೆ. ತಮ್ಮ ಶರೀರದಿಂದ ಹಾಗೂ ಅನ್ಯ ಕ್ಷೇತ್ರ, ಶಯ್ಯೆ, ಆಸನ ಮೊದಲಾದವುಗಳ ಮೂಲಕ ಸೇವೆ ಮಾಡುವುದು ಅದು ಆಚಾರ್ಯ ವೈಯಾವೃತ್ಯವಿದೆ. ಆಚಾರ್ಯರ ವೈಯಾವೃತ್ಯವೇ ಸಮಸ್ತ ಸಂಘದ ವೈಯಾವೃತ್ಯವಿದೆ. ಏಕೆಂದರೆ ಸಮಸ್ತ ಸಂಘ, ಸಮಸ್ತ ಧರ್ಮವು ಆಚಾರ್ಯರ ಪ್ರಭಾವದಿಂದಲೇ ಪ್ರವರ್ತಿಸುತ್ತದೆ.

ಯಾವ ವ್ರತ-ಶೀಲ ಧಾರಕರ ಸಾಮೀಪ್ಯತೆಯು ಪ್ರಾಪ್ತವಾದ ಮೇಲೆ ಪರಮಾಗಮದ ಅಧ್ಯಯನ ಪಠಣ ಮಾಡುತ್ತಾರೆ ಅವರು ಸಾಧು **ಉಪಾಧ್ಯಾಯ**ರಿದ್ದಾರೆ. ಯಾರು ಮಹಾನ ಅನಶನ ಮೊದಲಾದ ತಪಗಳಲ್ಲಿ ಪ್ರವರ್ತನ ಮಾಡುತ್ತಾರೆ ಅವರು ಸಾಧು **ತಪಸ್ವಿ**ಗಳಿದ್ದಾರೆ. ಶ್ರುತಜ್ಞಾನದ ಶಿಕ್ಷಣದಲ್ಲಿ ಹಾಗೂ ವ್ರತ ಶೀಲದ ಭಾವನೆಯಲ್ಲಿ ಯಾರು ನಿರಂತರ ತತ್ಪರರಿರುತ್ತಾರೆ ಅವರು ಸಾಧು **ಶೈಕ್ಷ್ಯ**ರಿದ್ದಾರೆ. ಯಾರ ಶರೀರವು ರೋಗಾದಿಗಳಿಂದ ಕ್ಲೇಶಿತವಿದೆ. ಅವರು ಸಾಧು **ಗ್ಲಾನ**ರಿದ್ದಾರೆ. ಯಾರು ವೃದ್ಧ ಮುನಿಗಳ ಪರಂಪರೆಯ ಸಾಧುಗಳಿದ್ದಾರೆ ಅವರು **ಗಣ**ರಿದ್ದಾರೆ. ಯಾರು ತಮಗೆ **ದೀಕ್ಷೆ** ಕೊಡುವಂಥ ಆಚಾರ್ಯರ ಶಿಷ್ಯ ಸಾಧುಗಳಿದ್ದಾರೆ ಅವರು **ಕುಲ**ರಿದ್ದಾರೆ. ನಾಲ್ಕು ಪ್ರಕಾರದ ಮುನಿಗಳ ಎಂದರೆ ಋಷಿ, ಮುನಿ, ಯತಿ, ಅನಗಾರರ ಸಮುದಾಯವು ಅದು **ಸಂಘ**ವಿದೆ. ಹೆಚ್ಚು ಕಾಲದಿಂದ ದೀಕ್ಷಿತರಿದ್ದವರು ಅವರು **ಸಾಧು**ಗಳಿದ್ದಾರೆ.

ಲೋಕದಲ್ಲಿ ಪಾಂಡಿತ್ಯದಿಂದ ಮಾನ್ಯರಿದ್ದಾರೆ, ವಕ್ತೃತ್ವ ಗುಣದಿಂದ ಮಾನ್ಯರಿದ್ದಾರೆ, ಮಹಾಕುಲೀನತೆಯಿಂದ ಜನರಲ್ಲಿ ಮಾನ್ಯರಿದ್ದಾರೆ ಅವರು **ಮನೋಜ್ಞರಿದ್ದಾರೆ.** ಇವರಿಂದ ಪ್ರವಚನದ, ಧರ್ಮದ, ಗೌರವತನವು ಪ್ರಕಟವಾಗುತ್ತದೆ.

ಈ ಹತ್ತು ಪ್ರಕಾರದ ಮುನಿಗಳಿಗೆ ಎಂದಾದರೂ ಶರೀರದಲ್ಲಿ ವ್ಯಾಧಿಯು ಪ್ರಕಟವಾದರೆ, ಪರೀಷಹಗಳುಂಟಾದರೆ, ಭಾವಗಳಲ್ಲಿ ಮಿಥ್ಯಾತ್ವಾದಿಗಳ ಉದಯವಾದರೆ ಪ್ರಾಸುಕ ಔಷಧ, ಭೋಜನ, ನೀರು, ವಸತಿಕೆ ಸಂಸ್ತರಣ ಮೊದಲಾದವುಗಳ ಮೂಲಕ, ಧರ್ಮೋಪದೇಶದ ಮೂಲಕ ಶ್ರದ್ಧೆಯ ದೃಢತೆ ಮಾಡಿಸುವುದು, ಪುಸ್ತಕ-ಪಿಂಛಿ-ಕಮಂಡಲು ಮೊದಲಾದ ಧರ್ಮದ ಉಪಕರಣಗಳನ್ನಿತ್ತು ಇಲಾಜು ಮಾಡುವುದು, ಧರ್ಮದಲ್ಲಿ ದೃಢತೆ ಮಾಡಿಸುವುದು, ಸಂತೋಷ, ಧೈರ್ಯ ಮೊದಲಾದುವನ್ನು ಧಾರಣ ಮಾಡಿಸುವುದು, ವೀತರಾಗತೆಯನ್ನು ಹೆಚ್ಚಿಸುವುದು ಅದು ವೈಯಾವೃತ್ಯವಿದೆ. ಬಾಹ್ಯ ಔಷಧ, ಭೋಜನ, ನೀರು ಮೊದಲಾದುವನ್ನು ಕೊಡುವುದು ಅಸಂಭವವಾದ ಮೇಲೆ ತಮ್ಮ ಶರೀರದ ಮೂಲಕ ಕಫ, ನಾಸಿಕದ ಕೊಳೆ, ಮಲ-ಮೂತ್ರ, ಪುರೀಷ ಮೊದಲಾದುವನ್ನು ದೂರ ಮಾಡುವುದು, ರಾತ್ರಿ ಜಾಗರಣೆ ಮಾಡುವುದು - ಇಂಥ ವೈಯಾವೃತ್ಯವು ಪರಮ ನಿರ್ಜರೆಯ ಕಾರಣವಿದೆ.

**ಆದರಲ್ಲಿ ಮುನಿಗಳ ಆದೆಷ್ಟೋ ಉಪಕಾರವನ್ನು ಮುನಿಗಳೇ ಮಾಡುತ್ತಾರೆ.** ಏಳಿಸುವುದು, ಕೂಡ್ರಿಸುವುದು, ಮಲಗಿಸುವುದು, ಕೈ-ಕಾಲು ಪಸರಿಸುವುದು, ಮುದುಡಿಸುವುದು, ಉಪದೇಶ ಕೊಡುವುದು, ಕಫ-ಮಲಾದಿಗಳನ್ನು ದೂರ ಮಾಡುವುದು, ಧೈರ್ಯ ಧಾರಣ ಮಾಡಿಸುವುದೆಲ್ಲವನ್ನು ಮುನಿಗಳಿಗೆ ಮುನಿಗಳೇ ಮಾಡುತ್ತಾರೆ. ಆದೆಷ್ಟೋ ಉಪಕಾರಗಳು ಪ್ರಾಸುಕ ಔಷಧ, ಆಹಾರ, ನೀರು ಉಪಕರಣ ಮೊದಲಾದವು ಗೃಹಸ್ಥ ಧರ್ಮಾತ್ಮರಾದ ಶ್ರಾವಕರಿಂದಲೇ ಸಂಭವಿಸುತ್ತವೆ. ಗೃಹಸ್ಥರು ಸಾಧುಗಳ ವೈಯಾವೃತ್ಯ ಮಾಡುತ್ತಾರೆ ಮತ್ತು ಶ್ರಾವಿಕೆಯರು ಆರ್ಜಿಕೆಯ ವೈಯಾವೃತ್ಯ ಮಾಡುತ್ತಾರೆ.

ದುಃಖಿ, ರೋಗೀ, ನಿರ್ಗತಿಕ, ಬಾಲಕ, ವೃದ್ಧ, ಪರಾಧೀನ, ಜೈಲಿನಲ್ಲಿರುವ ಜನರಿಗೆ ಕಾರುಣ್ಯ ಬುದ್ಧಿಯಿಂದ ಉಪಕಾರ ಮಾಡಬೇಕು. ತಾಯಿ-ತಂದೆ, ವಿದ್ಯಾಗುರು, ಮಿತ್ರ, ಒಡೆಯ ಮೊದಲಾದವರ ಉಪಕಾರ ಸ್ಮರಣೆ ಮಾಡಿ, ಕೃತಘ್ನತೆಯನ್ನು ತ್ಯಜಿಸಿ ಸೇವೆ, ಸನ್ಮಾನ, ದಾನ, ಪ್ರಶಂಸೆ ಮೊದಲಾದವುಗಳ ಮೂಲಕ ಆದರ-ಸತ್ಕಾರ ಮಾಡಿ ಸುಖೀ ಮಾಡಬೇಕು. ದುಃಖಿಯಾಗಿದ್ದರೆ ಅವರ ದುಃಖ ದೂರ ಮಾಡಬೇಕು. ತಮ್ಮ ಶಕ್ತಿಯ ಅನುಸಾರ ದಾನ ಸನ್ಮಾನ ಮಾಡಿ ವೈಯಾವೃತ್ಯ ಮಾಡಬೇಕು, ಅವನಿಗೆ ವೈಯಾವೃತ್ಯ ತಪದಿಂದ ಅಧಿಕ ನಿರ್ಜರೆಯಾಗುತ್ತದೆ. ವೈಯಾವೃತ್ಯದಿಂದ ಗ್ಲಾನಿಯ ಅಭಾವವಾಗಿ ಹೋಗುತ್ತದೆ, ಪ್ರವಚನದಲ್ಲಿ ವಾತ್ಸಲ್ಯತೆಯಾಗುತ್ತದೆ. ಆಚಾರ್ಯ ಮೊದಲಾಗಿ ಅನೇಕರು ವಾತ್ಸಲ್ಯದ ಸ್ಥಾನರಿದ್ದಾರೆ. ಅವರುಗಳಲ್ಲಿ ಯಾರದಾದರೂ ವೈಯಾವೃತ್ಯವು ಸಂಭವಿಸುವುದು ಅವರದೇ ವೈಯಾವೃತ್ಯ ಮಾಡಿ, ಎಲ್ಲ ಪ್ರಕಾರದಿಂದ ಕಲ್ಯಾಣಕ್ಕೆ ಪ್ರಾಪ್ತನಾಗಿ ಹೋಗುತ್ತಾನೆ.

**ಸ್ವಾಧ್ಯಾಯ ತಪ :** ಈಗ ಸ್ವಾಧ್ಯಾಯ ತಪದ ವರ್ಣನೆ ಮಾಡುತ್ತಾರೆ. ಸ್ವಾಧ್ಯಾಯದಲ್ಲಿ ವಾಚನಾ, ಪೃಚ್ಛನಾ, ಅನುಪ್ರೇಕ್ಷೆ, ಆಮ್ನಾಯ ಮತ್ತು ಧರ್ಮೋಪದೇಶವೆಂದು ಐದು ಭೇದಗಳಿವೆ.

**ವಾಚನಾ ಸ್ವಾಧ್ಯಾಯ :** ನಿರ್ದೋಷ ಗ್ರಂಥಗಳ ಪಾಠ, ಅರ್ಥ ಮತ್ತು ಪಾಠ ಹಾಗೂ ಅರ್ಥ ಎರಡನ್ನೂ ಪಾತ್ರ ಜನರಿಗೆ ಓದಿಸುವುದು, ಹೇಳುವುದು, ತಿಳಿಸುವುದು ಅದು ವಾಚನಾ ಸ್ವಾಧ್ಯಾಯವಿದೆ. ಪರಮಾಗಮದ ಶಬ್ದಗಳನ್ನು ಓದಿಸುವುದರ ಸಮಾನ, ಅರ್ಥ ತಿಳಿಸುವುದರ ಸಮಾನ ಯಾವುದೂ ತಮ್ಮ ಹಾಗೂ ಪರರ ಉಪಕಾರವಿಲ್ಲ, ಪರಮಾಗಮವನ್ನು ಓದಿಸಿ ಯೋಗ್ಯ ಶಿಷ್ಯನನ್ನು ಪ್ರವೀಣ ಮಾಡುವುದು ಅದು ಧರ್ಮದ ಸ್ತಂಭ ನಿಲ್ಲಿಸಿದುದರ ಸಮಾನವಿದೆ. ಜೈನ ಧರ್ಮವಂತೂ ಶಾಸ್ತ್ರಜ್ಞಾನದ ಮೇಲೆಯೇ ಅವಲಂಬಿಸಿದೆ. ಮಂದಿರ ಹಾಗೂ ಪ್ರತಿಮೆಗಳಂತೂ ಮುಖದಿಂದ ಮಾತನಾಡುವುದಿಲ್ಲ, ಪ್ರತ್ಯಕ್ಷ ಮಾತನಾಡುವ ದೇವನ ಸಮಾನ ಹಿತದಲ್ಲಿ ಪ್ರೇರಣೆ ಕೊಡುವಂಥ ಮತ್ತು ಅಹಿತದಿಂದ ರಕ್ಷಣೆ ಮಾಡುವಂಥದ್ದೆಂದರೆ ಒಂದು ಸರ್ವಜ್ಞ ಭಗವಂತರ ಪರಮಾಗಮವೇ ಇದೆ. ಆದುದರಿಂದ ಶಾಸ್ತ್ರ ಓದಿಸುವಲ್ಲಿ ಮತ್ತು ಓದುವಲ್ಲಿ ಸತತ ಉದ್ಯಮಶೀಲರಾಗಿರಬೇಕು.

**ಪೃಚ್ಛನಾ ಸ್ವಾಧ್ಯಾಯ :** ತಮ್ಮ ಸಂಶಯ ದೂರ ಮಾಡುವ ಸಲುವಾಗಿ ಬಹು ಜ್ಞಾನಿಗಳಲ್ಲಿ ವಿನಯದಿಂದ ಪ್ರಶ್ನೆ ಮಾಡಬೇಕು, ಏಕೆಂದರೆ ಪ್ರಶ್ನದಿಂದ ಸಂಶಯವನ್ನು ದೂರ ಮಾಡಿದಲ್ಲದೆ ಸಮ್ಯಕ್ ಜ್ಞಾನವು ಪ್ರಕಟವಾಗುವುದಿಲ್ಲ ಅಥವಾ ತಾವು ಆಗಮದ ಶಬ್ದದ ಯಾವ ಅರ್ಥವನ್ನು ತಿಳಿದುಕೊಂಡಿದೆ ಅದನ್ನು ಬಹುಜ್ಞಾನಿಗಳ ಮುಖದಿಂದ ಕೇಳಿಕೊಂಡರೆ ಜ್ಞಾನವು ಅಧಿಕ ದೃಢವಾಗಿ ಹೋಗುತ್ತದೆ, ಜ್ಞಾನದ ಶಿಥಿಲತೆಯು ದೂರವಾಗುತ್ತದೆ. ಆದುದರಿಂದ ಬಹು ಜ್ಞಾನಿಗಳಲ್ಲಿ ಪ್ರಶ್ನೆ ಮಾಡಬೇಕು ಅಥವಾ ತಾವು ಸಂಕ್ಷೇಪದಲ್ಲಿ ತಿಳಿದುಕೊಂಡಿದ್ದರೆ ಅದನ್ನು ವಿಸ್ತಾರದಿಂದ ತಿಳಿದುಕೊಳ್ಳುವ ಸಲುವಾಗಿ ಅತ್ಯಂತ ವಿನಯದಿಂದ ಸಮ್ಯಗ್ಜ್ಞಾನಿಗಳಲ್ಲಿ ಪ್ರಶ್ನೆ ಮಾಡಬೇಕು. **ತಮ್ಮ ಉಚ್ಚತೆ ಅಥವಾ ಪಾಂಡಿತ್ಯವನ್ನು ತೋರಿಸಿಕೊಡುವ ಸಲುವಾಗಿ ಅಥವಾ ಇತರರ ತಿರಸ್ಕಾರ ಮಾಡುವ ಸಲುವಾಗಿ ಮತ್ತು ಪರಿಹಾಸ ಮಾಡುವ ಸಲುವಾಗಿ ಸಮ್ಯಗ್ದೃಷ್ಟಿಯು ಪ್ರಶ್ನೆ ಮಾಡುವುದಿಲ್ಲ,** ಶಬ್ದದ ಸಂಬಂಧದಲ್ಲಿ ಪ್ರಶ್ನೆ ಮಾಡುತ್ತಾನೆ, ಅರ್ಥದ ಸಂಬಂಧವಾಗಿ ಪ್ರಶ್ನೆ ಮಾಡುತ್ತಾನೆ, ಮತ್ತು ಶಬ್ದ ಹಾಗೂ ಅರ್ಥ ಇವೆರಡರ ಸಂಬಂಧದಲ್ಲಿ ಪ್ರಶ್ನೆ ಮಾಡುತ್ತಾನೆ ಅನಂತರ ನಿರ್ಣಯ ಮಾಡುತ್ತಾನೆ, ಇದು ಪೃಚ್ಛನಾ ಸ್ವಾಧ್ಯಾಯವಿದೆ.

**ಅನುಪ್ರೇಕ್ಷಾಸ್ವಾಧ್ಯಾಯ :** ಪರಮಾಗಮದಲ್ಲಿ ತಿಳಿದ ಶಬ್ದ ಮತ್ತು ಅರ್ಥವನ್ನು ತಮ್ಮ ಹೃದಯದಲ್ಲಿ ಧಾರಣ ಮಾಡಿ ಮತ್ತೆ ಮತ್ತೆ ಮನಸ್ಸಿನಿಂದ ಅಭ್ಯಾಸ ಮಾಡುವುದು, ಚಿಂತನ ಮಾಡುವುದು, ಆಗಮದಲ್ಲಿ ಇಂದು ನಾನು ಓದಿದುದರಲ್ಲಿ-ಕೇಳಿದುದರಲ್ಲಿ ಈ ದೋಷಗಳು ತ್ಯಾಗ ಯೋಗ್ಯವಿವೆ, ಈ ಗುಣಗಳು ಗ್ರಹಣ ಮಾಡಲು ಯೋಗ್ಯವಿವೆ, ಇವು ನನ್ನ ಸ್ವರೂಪದಿಂದ ಭಿನ್ನವಾದ ದ್ರವ್ಯ, ಕ್ಷೇತ್ರ ಮೊದಲಾದವು ತ್ಯಾಗ ಯೋಗ್ಯವೇ ಇವೆ. ಈ ಪ್ರಕಾರ ಮನಸ್ಸಿನಲ್ಲಿ ಪುನಃ ಪುನಃ ಚಿಂತನ ಮಾಡುವುದು ಅದು ಅನುಪ್ರೇಕ್ಷಾ ಸ್ವಾಧ್ಯಾಯವಿದೆ. ಇದರಿಂದ ಅಶುಭ ಭಾವಗಳ ನಾಶವಾಗುತ್ತದೆ, ಶುಭ ಧರ್ಮಧ್ಯಾನವು ಪ್ರಕಟವಾಗುತ್ತದೆ.

**ಆಮ್ನಾಯ ಸ್ವಾಧ್ಯಾಯ :-** ಅತಿ ಶೀಘ್ರತೆಯಿಂದ ಓದುವುದು, ಅತಿವಿಲಂಬದಿಂದ ಓದುವುದು ಇತ್ಯಾದಿ ವಚನ ದೋಷವನ್ನು ನಿವಾರಿಸಿ ಧೈರ್ಯದಿಂದ ಒಂದೊಂದು ಅಕ್ಷರದ ಸ್ಪಷ್ಟತೆಯೊಡನೆ ಅರ್ಥದ ಪ್ರಕಟತೆ (ಭಾವ ಭಾಸನ) ಸಹಿತ ಓದುವುದು, ಪಾಠ ಮಾಡುವುದು, ಮಧುರ ಸ್ವರದಿಂದ ಉಚ್ಚರಣೆ ಮಾಡುವುದು, ಮತ್ತು ಸಿದ್ಧಾಂತದ ಪ್ರಣಾಲಿಯಿಂದ ಹಾಗೂ ಆಗಮದ ವಿರೋಧದಿಂದ ರಹಿತ, ಲೋಕವಿರುದ್ಧತೆಯಿಲ್ಲದೆ ಓದುವುದು ಅದು ಆಮ್ನಾಯ ಸ್ವಾಧ್ಯಾಯವಿದೆ.

**ಧರ್ಮೋಪದೇಶ ಸ್ವಾಧ್ಯಾಯ :** ಲೌಕಿಕ ಪ್ರಯೋಜನದ ಲಾಭ, ಪೂಜೆ, ಅಭಿಮಾನ, ಮದ ಮೊದಲಾದುವನ್ನು ಬಿಟ್ಟುಕೊಟ್ಟು ಉನ್ಮಾರ್ಗವನ್ನು ದೂರ ಮಾಡುವ ಸಲುವಾಗಿ, ಸನ್ಮಾರ್ಗವನ್ನು ದರ್ಶಿಸುವ ಸಲುವಾಗಿ, ಸಂಶಯ ಕಳೆಯುವ ಸಲುವಾಗಿ, ಅಪೂರ್ವ ಪದಾರ್ಥ ಪ್ರಕಟ ಮಾಡುವ ಸಲುವಾಗಿ, ಧರ್ಮದ ಪ್ರಭೆಯನ್ನು ಹರಡುವ ಸಲುವಾಗಿ, ಮೋಹಾಂಧಕಾರವನ್ನು ದೂರ ಮಾಡುವ ಸಲುವಾಗಿ, ಜನರನ್ನು ಸಂಸಾರ-ಶರೀರ-ಭೋಗಗಳಿಂದ ವಿರಕ್ತ ಮಾಡುವ ಸಲುವಾಗಿ, ವಿಷಯಾನುರಾಗ ಹಾಗೂ ಕಷಾಯ ಕಡಿಮೆ ಮಾಡುವ ಸಲುವಾಗಿ, ಅಜ್ಞಾನ ನಾಶಿಸುವ ಸಲುವಾಗಿ, ಭೇದವಿಜ್ಞಾನ ಪ್ರಕಟ ಮಾಡುವ ಸಲುವಾಗಿ, ಪಾಪ ಕ್ರಿಯೆಯಿಂದ ಭಯಭೀತವಾಗುವ ಸಲುವಾಗಿ ಭವ್ಯರಿಗೆ ಧರ್ಮಕಥನದ ಉಪದೇಶ ಮಾಡುವುದು ಅದು ಧರ್ಮೋಪದೇಶ ನಾಮದ ಸ್ವಾಧ್ಯಾಯವಿದೆ. **ಎಲ್ಲಿ ಅನೇಕ ಭವ್ಯ ಜೀವರುಗಳಿಗೆ ಧರ್ಮದ ಉಪದೇಶ ಕೊಡಲಾಗುತ್ತದೆ ಅಲ್ಲಿ ಮನ-ವಚನ-ಕಾಯಗಳೆಲ್ಲವೂ ಧರ್ಮದ ಸ್ವರೂಪದಲ್ಲಿ ಲೀನವಾಗಿ ಹೋಗುತ್ತವೆ.**

**ವಕ್ತಾರನ ಸ್ವರೂಪ :** ಯಾವುದೇ ಪ್ರಕಾರದಿಂದ ಅನೇಕಾಂತ ಧರ್ಮದ ಯಥಾವತ್ ಸ್ವರೂಪವು ಶ್ರೋತೃಗಳ ಹೃದಯದಲ್ಲಿ ಪ್ರವೇಶ ಮಾಡಲಿ, ಪ್ರಕಟವಾಗಲೆಂಬುದೇ ಉಪದೇಶದಾತೃವಿನ ಅಭಿಪ್ರಾಯವಿರುತ್ತದೆ. ಯಾವ ವಕ್ತಾರನ ಅಭಿಪ್ರಾಯವು ಹೀಗಿರುತ್ತದೆ ಅವನೇ ಸತ್ಯಾರ್ಥ ಧರ್ಮದ ಉಪದೇಶ ಮಾಡುತ್ತಾನೆ. ಯಾರ ಆತ್ಮನು ಧರ್ಮದಲ್ಲಿ ರಂಜಿತನಾಗುವನು ಅವನೇ ಶ್ರೋತೃಗಳನ್ನು ಧರ್ಮದಲ್ಲಿ ರಂಜಿಸಬಹುದಾಗಿದೆ. ಧರ್ಮೋಪದೇಶ ಕೊಡುವವನಲ್ಲಿ ಆತ್ಮಾನುಶಾಸನದೊಳಗೆ ಹೇಳಿದ ಗುಣಗಳು ಇರಬೇಕು.

**ಯಾವನ ಬುದ್ಧಿಯು ತ್ರಿಕಾಲ ವಿಷಯಿಯಿದೆ** ಎಂದರೆ ಯಾವನು ಕಳೆದ ಅನೇಕ ಪರಂಪರೆಯನ್ನು ಪರಮಾಗಮದಿಂದ ತಿಳಿಯುವುದಿಲ್ಲ, ಅವನು ಯಥಾವತ್ ವಸ್ತುಸ್ವರೂಪ ಹೇಳುವ ಸಾಧ್ಯತೆಯಿಲ್ಲ, ವಸ್ತುವಿನ ವರ್ತಮಾನ ಸ್ವರೂಪದ ಜ್ಞಾನವಿಲ್ಲದವನು ವಿರುದ್ಧ ಕಥನ ಮಾಡುವನು, ಭವಿಷ್ಯ ಪರಿಪಾಕದ ಜ್ಞಾನವಿಲ್ಲದವನು ಅಯೋಗ್ಯವನ್ನೇ ಹೇಳಿ ಬಿಡುವನು. ಆದುದರಿಂದ ಯಾವನು ವಕ್ತಾನಿದ್ದಾನೆ ಅವನು ತನ್ನ ಬುದ್ಧಿಯ ಬಲದಿಂದ, ಆಗಮದ ಬಲದಿಂದ, ಲೌಕಿಕ ರೀತಿಯನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ತ್ರಿಕಾಲದ ರೀತಿಯನ್ನು ತಿಳಿದುಕೊಳ್ಳುವಂಥವನಿರಬೇಕಾಗುವುದು.

**ನಾಲ್ಕೂ ಅನುಯೋಗಗಳ ಸಮಸ್ತ ಶಾಸ್ತ್ರಗಳ ರಹಸ್ಯವನ್ನು ತಿಳಿದುಕೊಂಡವನಿರಬೇಕಾಗುವುದು.** ನಾಲ್ಕೂ ಅನುಯೋಗಗಳ ರಹಸ್ಯವನ್ನು ತಿಳಿಯದವನು ವಕ್ತಾರನಾಗಿ ಹೋದರೆ ಶ್ರೋತೃಗಳಿಗೆ ಯಥಾವತ್ ತಿಳಿಸಿಕೊಡಲಾರನು. ಏಕೆಂದರೆ ಒಂದು ವೇಳೆ ಪ್ರಮಾಣದ ಕಥನ ಬಂದರೆ, ನಯಗಳ ಕಥನ ಬಂದರೆ, ಕರ್ಮ ಪ್ರಕೃತಿಗಳ ಕಥನವು ಬಂದು ಬಿಟ್ಟರೆ, ಆಚಾರದ ಕಥನವು ಬಂದು ಬಿಟ್ಟರೆ ಸ್ವಯಂ ತಿಳಿದುಕೊಂಡಲ್ಲದೆ ಯಥಾವತ್, ನಿಃಶಂಕ-ಸಂದೇಹರಹಿತವಾಗಿ ವ್ಯಾಖ್ಯಾನ ಮಾಡುವ ಸಾಧ್ಯತೆಯಿಲ್ಲ. ಆದುದರಿಂದ ವಕ್ತಾರನು ಎಲ್ಲ ಅನುಯೋಗಗಳ, ಎಲ್ಲ ಶಾಸ್ತ್ರಗಳ ರಹಸ್ಯವನ್ನು ತಿಳಿದುಕೊಂಡವನಿರಬೇಕಾಗುವದು.

ವಕ್ತಾರನಿಗೆ ಭೋಜನ, ವಸ್ತ್ರ, ಸ್ನಾನ, ಧನ, ಯಶಸ್ಸು, ಅಭಿಮಾನದ ಅಪೇಕ್ಷೆಯಿದ್ದರೆ ಅವನು ಯಥಾರ್ಥ ವ್ಯಾಖ್ಯಾನ ಮಾಡುವ ಸಾಧ್ಯತೆಯಿಲ್ಲ, ಜನರನ್ನು ಪ್ರಸನ್ನ ಮಾಡಬಯಸುವನು. **ಲೋಭಿಗೆ ಯಥಾರ್ಥ ಸತ್ಯಾರ್ಥ ವಕ್ತಾತನವಿರುವುದಿಲ್ಲ.**

**ಲೋಕರೀತಿಯನ್ನು ತಿಳಿದುಕೊಂಡವನಿರಬೇಕಾಗುವುದು.** ಒಂದು ವೇಳೆ ಲೌಕಿಕ ರಚನೆಯಲ್ಲಿ ಮೂಢನಾಗಿದ್ದರೆ ಅವನು ಲೋಕವಿರುದ್ಧವಾಗಿಯೇ ವ್ಯಾಖ್ಯಾನ ಮಾಡುವನು.

**ವಕ್ತಾರನ ಬುದ್ಧಿಯು ಕೂಡಲೆ ಉತ್ತರ ಕೊಡುವಂಥದ್ದಿರಬೇಕು.** ವಕ್ತಾರನು ಕೂಡಲೆ ಉತ್ತರ ಕೊಡಲು ಅಸಮರ್ಥನಾಗಿ ಹೋದರೆ ಸಭೆಯಲ್ಲಿ ಕ್ಷೋಭೆಯಾಗುತ್ತದೆ. ಸಭೆಯಲ್ಲಿ ಉಪಸ್ಥಿತವಿರುವ ಶ್ರೋತೃಗಳ ದೃಢ ಪ್ರತೀತಿಯು ವಕ್ತಾನಲ್ಲಿ ಉಳಿಯುವುದಿಲ್ಲ-

ವಕ್ತಾರನು ಮಂದ ಕಷಾಯಿಯಿರಬೇಕಾಗುವುದು. ಮಂದ ಕಷಾಯಿಯಾದಲ್ಲದೆ ಲೋಭಿ, ಕಪಟೀ, ಕ್ರೋಧೀ ಅಭಿಮಾನಿಯ ಮೂಲಕ ಕೊಡಲಾದ ಉಪದೇಶವನ್ನು ಯಾರೂ ಅಂಗೀಕಾರ ಮಾಡುವುದಿಲ್ಲ.

**ವಕ್ತಾರನು ಶ್ರೋತೃಗಳು ಪ್ರಶ್ನೆ ಮಾಡುವ ಮೊದಲೇ ಉತ್ತರವನ್ನು ತಿಳಿದುಕೊಂಡವನಾಗಿರಬೇಕು.** ತಾವು ಹೀಗೆ ಹೇಳುತ್ತಿದ್ದರೆ ಹೀಗೆ ಇದೆ ಮತ್ತು ಹೀಗೆ ಹೇಳುತ್ತಿದ್ದರೆ ಹೀಗೆ ಇದೆಯೆಂಬುದಾಗಿ ಶ್ರೋತೃಗಳಿಗೆ ಪ್ರಶ್ನೆಯೇ ಉತ್ಪನ್ನವಾಗದ ರೀತಿಯಲ್ಲಿ ವ್ಯಾಖ್ಯಾನ ಮಾಡಬೇಕಾಗುವುದು. ಮೊದಲಿನಿಂದಲೇ ಪ್ರಶ್ನೆಗಳ ದಾರಿಯನ್ನು ಬಂಧಿಸಿಡುತ್ತಲೇ ಪ್ರವಚನ ಮಾಡುತ್ತಾನೆ. ಏಕೆಂದರೆ ಬಹಳಷ್ಟು ಪ್ರಶ್ನೆಗಳಾಗತೊಡಗಿದರೆ ಸಭೆಯಲ್ಲಿ ಗೊಂದಲಮಯವು ಆವರಿಸಿಕೊಳ್ಳುವುದು.

**ವಕ್ತಾರನಿಗೆ ಸಹನ ಶೀಲತೆಯು ಇರಬೇಕಾಗುವುದು.** ಯಾರಾದರೂ ಬಂದು ಕಠಿಣ ಪ್ರಶ್ನೆ ಮಾಡಿದರೆ ಕ್ರೋಧವನ್ನು ಮಾಡಬಾರದು. ಒಂದು ವೇಳೆ ಪ್ರಶ್ನೆ ಕೇಳಿ ವಕ್ತಾರನು ಕ್ರೋಧಿಯಾಗಿ ಹೋದರೆ ಮತ್ತೆ ಯಾರೂ ಪ್ರಶ್ನೆ ಮಾಡುವ ಸಾಧ್ಯತೆಯಿಲ್ಲ, ಆದರಿಂದ ಶ್ರೋತೃಗಳ ಸಂದೇಹವು ಹಾಗೇ ಉಳಿದುಕೊಳ್ಳುವುದು.

**ವಕ್ತಾರನಲ್ಲಿ ಪ್ರಭುತ್ವಗುಣವಿರಬೇಕಾಗುವುದು.** ಶ್ರೋತೃಗಳು ಅವನನ್ನು ತಮಗಿಂತ ಉಚ್ಚನೆಂದು ತಿಳಿಯುತ್ತಾರೆ, ಅವನ ಉಪದೇಶವನ್ನೇ ಗ್ರಹಣ ಮಾಡುತ್ತಾರೆ. ದೀನನ, ನೀಚನ ಉಪದೇಶವನ್ನು ಯಾರು ಗ್ರಹಣ ಮಾಡುತ್ತಾರೆ ? ಆದುದರಿಂದ ವಕ್ತಾರನಿಗೆ ಜಗತ್ತಿನಲ್ಲಿ ಮನ್ನಣೆ-ಪ್ರಭುತೆಯಿರಬೇಕಾಗುವುದು.

**ವಕ್ತಾರನು ಇತರರ ಮನಸ್ಸನ್ನು ಹರಣ ಮಾಡುವಂಥವನಿರಬೇಕು.** ಅವನು ಎಲ್ಲರಿಗೆ ಪ್ರಿಯನಿರಬೇಕು. ಶ್ರೋತೃಗಳಿಗೆ ಅಪ್ರಿಯನಿರುವವನ ಉಪದೇಶವು ಗ್ರಹಣವಾಗುವುದಿಲ್ಲ.

ವಕ್ತಾರನು ತಾನು ಯಾವ ವಿಷಯವನ್ನು ಒಳ್ಳೆಯ ರೀತಿಯಿಂದ, ಆಗಮದಿಂದ ಹಾಗೂ ಗುರುಪರಂಪರೆಯಿಂದ ಸರಿಯಾಗಿ ತಿಳಿದುಕೊಂಡಿದ್ದಾನೆ ಅದರದೇ ಕಥನ ಮಾಡಬೇಕು. ಒಂದು ವೇಳೆ ತಾನೇ ಸರಿಯಾದ ರೀತಿಯಿಂದ ಪೂರ್ಣ ತಿಳಿದುಕೊಂಡಿರದಿದ್ದರೆ ಅವನು ಇತರರಿಗೆ ಹೇಗೆ ತಿಳಿಸಿಕೊಡುವ ಸಾಧ್ಯತೆಯಿದೆ ? ಯಾವ ದೀವಿಗೆಯು ಸ್ವಯಂ ಪ್ರಕಾಶಮಾನವಿದೆ. ಅದುವೇ ಘಟ-ಪಟ ಮೊದಲಾದ ಪದಾರ್ಥಗಳನ್ನು ಪ್ರಕಾಶಿತಗೊಳಿಸುತ್ತದೆ.

ಯಾರ ಪ್ರವೃತ್ತಿಯು ವ್ಯವಹಾರದಲ್ಲಿ, ಪರಮಾರ್ಥದಲ್ಲಿ, ಧರ್ಮದಲ್ಲಿ, ಕೊಡ-ಕೊಳ್ಳುವಲ್ಲಿ , ವ್ಯಾಪಾರ ಮೊದಲಾದ ಆಜೀವಿಕೆಯಲ್ಲಿ, ಭೋಜನ-ವಸ್ತ್ರಾದಿಗಳಲ್ಲಿ ಉಜ್ವಲ ಯಶಯುಕ್ತವಿದೆ ಅವನೇ ವಕ್ತಾನಿದ್ದಾನೆ. ಯಾವನ ಪ್ರವೃತ್ತಿಯು ಮಲಿನವಿದೆ ಅವನಿಗೆ ವಕ್ತಾತನವು ಶೋಭಿಸುವುದಿಲ್ಲ. ಪ್ರವೃತ್ತಿಯು ಮಲಿನವಾಗಿದ್ದರೆ ಅವನು ಜಗತ್ತಿನಲ್ಲಿ ಮನ್ನಣೆಗೆ ಪಾತ್ರನಾಗಿ ಉಳಿಯುವುದಿಲ್ಲ.

ಯಾರಲ್ಲಿ ಅನ್ಯ ಜನರಿಗೆ ಜ್ಞಾನ ಉತ್ಪನ್ನ ಮಾಡಿಸುವ ಭಾವನೆಯಿದೆ ಅವನೇ ವಕ್ತಾತನವನ್ನು ಸ್ವೀಕಾರ ಮಾಡುವನು. ಅನ್ಯರಿಗೆ ತಿಳಿಸಿಕೊಡುವ ಭಾವನೆಯಿಲ್ಲದವನು ಅವನೇಕೆ ವ್ಯಾಖ್ಯಾನ ಮಾಡುವನು ?

ರತ್ನತ್ರಯ ಮಾರ್ಗವನ್ನು ನಡೆಸುವಲ್ಲಿ ಮತ್ತು ಸ್ವಯಂ ರತ್ನತ್ರಯ ಮಾರ್ಗದ ಮೇಲೆ ನಡೆಯುವಲ್ಲಿ ಉದ್ಯಮ ಶೀಲನಿದ್ದವನೇ ಧರ್ಮ ಕಥೆ ಹೇಳುವಂಥ ವಕ್ತಾನಾಗುವನು. ವಕ್ತಾನಲ್ಲಿ ಬೇರಾವ ಲೌಕಿಕ ಪ್ರಯೋಜನವು ಇರಲೇಬಾರದು.

ದೊಡ್ಡ ಜ್ಞಾನೀ ಜನರಿಂದಲೂ ಪ್ರಶಂಸೆ ಮಾಡಿಸಿಕೊಳ್ಳುವಂಥ ವಕ್ತಾರನಿರಬೇಕು, ಏಕೆಂದರೆ ದೊಡ್ಡ-ದೊಡ್ಡ ಜ್ಞಾನಿಗಳು ಯಾರ ಪ್ರಶಂಸೆ ಮಾಡುತ್ತಾರೆ ಅವರ ವಚನಗಳ ಮೇಲೆ ಜಗತ್ತು ಗಾಢ ಶ್ರದ್ಧೆ ಮಾಡುತ್ತದೆ.

ವಕ್ತಾರನು ಉದ್ಧತೆಯಿಂದ ರಹಿತನಾಗಿರಬೇಕಾಗುವುದು. ಒಂದು ವೇಳೆ ವಕ್ತಾರನು ಉದ್ಧತನಿದ್ದರೆ ಅವನು ಎಲ್ಲರಿಗೂ ಅಪ್ರಿಯನಾಗಿ ಹೋಗುವನು.

ವಕ್ತಾರನು ಲೋಕರೀತಿ, ದೇಶ, ಕಾಲ, ಶ್ರೋತೃಗಳ ಸದ್ಭಾವನೆ- ದುಷ್ಟತೆ, ಪ್ರವೀಣತೆ- ಮೂಢತೆ, ಸಶಕ್ತತೆ- ಅಶಕ್ತತೆ ಮೊದಲಾಗಿ ಎಲ್ಲವನ್ನೂ ತಿಳಿದುಕೊಂಡು ಎಲ್ಲ ಜನರು ಅತ್ಯಂತ ಆದರದಿಂದ ಗ್ರಹಣ ಮಾಡುವಂಥ ಉಪದೇಶ ಮಾಡಬೇಕು. ಲೋಕ ಜ್ಞಾತಾನಾದಲ್ಲದೆ ಯಥಾಯೋಗ್ಯ ಉಪದೇಶವಾಗುವುದಿಲ್ಲ.

ವಕ್ತಾರನಲ್ಲಿ ಕೋಮಲತೆಯ ಗುಣವು ಇರಬೇಕಾಗುವದು, ಕಠೋರ ಪರಿಣಾಮಿಯ ಕಠೋರ ವಚನಗಳು ಆದರ ಮಾಡಲು ಯೋಗ್ಯವಾಗಿರುವುದಿಲ್ಲ. ಅವನ್ನು ಶ್ರೋತೃಗಳು ಆಲಿಸಲು ಇಷ್ಟಪಡುವುದಿಲ್ಲ.

ವಕ್ತಾರನಿಗೆ ವಕ್ತೃತ್ವದ ಮೂಲಕ ಧನ, ಭೋಗ ಮೊದಲಾದವುಗಳ ಇಚ್ಛೆಯು ಇರಲೇಬಾರದು.

ವಕ್ತಾರನ ಮುಖದಿಂದ ಅಕ್ಷರಗಳ ಉಚ್ಚಾರವು ಸ್ಪಷ್ಟವಾಗಿ ಆಗಬೇಕಾಗುವುದು. ಅಕ್ಷರಗಳನ್ನು ಸ್ಪಷ್ಟವಾಗಿ ಮಾತನಾಡಿದಲ್ಲದೆ ಭಾವವು ತಿಳಿದು ಬರುವುದಿಲ್ಲ.

ವಕ್ತಾರನ ಅಕ್ಷರಗಳು ಎಷ್ಟು ಮಧುರವಾಗಿರಬೇಕೆಂದರೆ ಅವನು ಶ್ರೋತೃಗಳಿಗೆ ಕರ್ಣಗಳ ಮೂಲಕ ಸರ್ವಾಂಗಗಳಲ್ಲಿ ಅಮೃತದ ಸೇಚನೆಯನ್ನೇ ಮಾಡುತ್ತಿದ್ದಾನೋ ಏನೋ ಎನ್ನುವಂತಿರಬೇಕು.

ವಕ್ತಾರನು ಹೇಗಿರಬೇಕೆಂದರೆ ಅವನ ಪ್ರಭುತ್ವವನ್ನು ಶ್ರೋತೃಗಳು ತಿಳಿಯುತ್ತಿರಬೇಕು- ಮನ್ನಿಸುತ್ತಿರಬೇಕು.

ವಕ್ತಾರನು ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ, ವಾತ್ಸಲ್ಯ ಮೊದಲಾದ ಗುಣಗಳ ನಿಧಾನನಾಗಿರಬೇಕು.

ಹೀಗೆ ವಕ್ತೃತ್ವದ ಅನೇಕ ಗುಣಗಳಿಂದ ಯುಕ್ತನಿದ್ದವನೇ, ಧರ್ಮಕಥೆಯ ವಕ್ತಾರನಾಗುತ್ತಾನೆ. ಇಂಥ ಗುಣಗಳ ಧಾರಕನಾದ ವಕ್ತಾರನ ಉಪದೇಶವು ಯಾರೋ ಮಹಾಭಾಗ್ಯವಂತ-ಪುಣ್ಯವಂತರಾದ ಜನರಿಗೇ ದೊರಕುತ್ತದೆ. **ಸಮ್ಯಗ್ದೇಶನಾಲಬ್ಧಿಯ ಪ್ರಾಪ್ತಿಯಾಗುವುದು ಅನಂತ ಕಾಲದಲ್ಲಿಯೂ ದುರ್ಲಭವಿದೆ.**

**ಶ್ರೋತೃವಿನ ಸ್ವರೂಪ :** ಧರ್ಮೋಪದೇಶವೂ ದೊರಕಬಹುದು, ಆದರೆ ಯೋಗ್ಯ ಶ್ರೋತೃತ್ವವಿಲ್ಲದೆ ಧರ್ಮವು ಗ್ರಹಣವಾಗುವುದಿಲ್ಲ. ಯಾವ ಪ್ರಕಾರ ಯೋಗ್ಯ ಪಾತ್ರೆಯಿಲ್ಲದೆ ವಸ್ತುವು ನಿಲ್ಲುವುದಿಲ್ಲ, ಅಯೋಗ್ಯ ಪಾತ್ರೆಯಲ್ಲಿಡುವುದರಿಂದ ಪಾತ್ರೆಹಾಗೂ ವಸ್ತು ಎರಡೂ ನಾಶವಾಗಿ ಹೋಗುತ್ತವೆ, ಅದೇ ಪ್ರಕಾರ ಯೋಗ್ಯ ಶ್ರೋತೃತ್ವವಿಲ್ಲದೆಯೂ ಧರ್ಮದ ಉಪದೇಶವು ನಿಲ್ಲುವುದಿಲ್ಲ. ಆದುದರಿಂದ ಸಂಕ್ಷೇಪದಲ್ಲಿ ಶ್ರೋತೃವಿನ ಲಕ್ಷಣವು ಈ ಕೆಳಗಿನಂತಿದೆಯೆಂದು ತಿಳಿಯುವದು.

**ಮೊದಲಂತೂ ಭವ್ಯನಿರಬೇಕು.** ಉಪದೇಶ ಕೊಟ್ಟ ಮೇಲೆ ಕೂಡ ಸಮ್ಯಕ್ ಶ್ರದ್ಧೆ ಮೊದಲಾದ ಗುಣಗಳನ್ನು ಗ್ರಹಣ ಮಾಡುವ ಯೋಗ್ಯತೆಯಿಲ್ಲದವನಿಗೆ ಉಪದೇಶ ಕೊಡುವುದು ವ್ಯರ್ಥವಿದೆ. ನನ್ನ ಕಲ್ಯಾಣ ಹೇಗಾಗುವುದು, ನನ್ನ ಹಿತ ಹೇಗಾಗುವುದೆಂದು ಯಾರಿಗೆ ಯಾವಾಗಲೂ ವಿಚಾರವಿರುತ್ತದೆ, ಯಾರಿಗೆ ತಮ್ಮ ಹಿತದ ಅಪೇಕ್ಷೆಯಿರುವುದಿಲ್ಲ ಅವರು ಯಾವ ಪ್ರಯೋಜನವಿಲ್ಲದೆ ಧರ್ಮ ಕಥೆಯನ್ನೇಕೆ ಕೇಳುವರು ? ಅವರಂತೂ ವಿಷಯ ಕಷಾಯದ ಲಾಭ, ಧನದ ಲಾಭವು ಯಾವುದರಿಂದ ಸಾಧಿಸುತ್ತದೆ ಅದರ ಇಚ್ಛೆ ಮಾಡುತ್ತಾರೆ.

**ದುಃಖದಿಂದ ಅತ್ಯಂತ ಭಯಭೀತನಿರಬೇಕು.** ಇನ್ನು ಮೇಲೆ ನರಕ-ತಿರ್ಯಂಚ ಮೊದಲಾದ ಪರ್ಯಾಯಗಳ ದುಃಖವಾಗದಿರಲೆಂಬ ಭಯವು ಯಾರಿಗೆ ಇರುವುದಿಲ್ಲ ಅವರು ಪಾಪ ಬಿಡುವುದಕ್ಕೆ, ವಿಷಯ ಕಷಾಯ ಬಿಡುವುದಕ್ಕೆ ಶಾಸ್ತ್ರ ಶ್ರವಣವನ್ನೇಕೆ ಮಾಡುವರು ? ಆದುದರಿಂದ ಮೊದಲು ದುಃಖದಿಂದ ಭಯಭೀತವಾಗಬೇಕಾಗುವುದು.

**ಸುಖದ ಇಚ್ಛುಕನಿರಬೇಕು.** ಸುಖದ ಇಚ್ಛೆಯಿಲ್ಲದವನು ಧರ್ಮದ ಕಥೆಯನ್ನು ಕೇಳಲಾರನು. ಯಾರಿಗೆ ಕರ್ಣೇಂದ್ರಿಯವಿಲ್ಲ ಅಥವಾ ಕಿವಿಗಳು ಕೆಟ್ಟು ಹೋಗಿದ್ದರೆ ಅವನು ಯಾವುದರಿಂದ ಆಲಿಸುವನು ?

**ಧರ್ಮ ಕಥೆ ಕೇಳುವ ಇಚ್ಛೆಯಿರಬೇಕು.** ಇಚ್ಛೆಯಿಲ್ಲದೆ ಪರಿಪೂರ್ಣ ಶ್ರವಣವಾಗುವುದಿಲ್ಲ. ಇಚ್ಛೆಯಿದ್ದರೂ ಕೂಡ ಪ್ರಮಾದ, ಆಲಸ್ಯ, ಕುಸಂಗತಿಯಿಂದ ಶ್ರವಣ ಮಾಡದಿದ್ದರೆ ಇಚ್ಛೆಯೂ ವ್ಯರ್ಥವಿದೆ. **ಅವನು ಶ್ರವಣವನ್ನೇನೋ ಮಾಡುತ್ತಾನೆ, ಆದರೆ ಗುರುಗಳು ಈ ಪ್ರಕಾರ ಈ ಅಪೇಕ್ಷೆಯಿಂದ ಹೇಳುತ್ತಾರೆಂಬ ಸಾವಧಾನತೆಯಿಲ್ಲದೆ ಶ್ರವಣ ಮಾಡುವುದು ವ್ಯರ್ಥವಿದೆ.** ಶ್ರವಣ ಮಾಡುವುದರಿಂದ ಗ್ರಹಣವೂ ಆಗುವುದು, ಆದರೆ ಧಾರಣವಾಗದಿದ್ದರೆ, ಸ್ಮರಣೆಯುಳಿಯದಿದ್ದರೆ, ಶ್ರವಣ ಮಾಡುತ್ತಿರುವಂತೆಯೇ ವಿಸ್ಮರಣವಾಗಿ ಹೋದರೆ ಶ್ರವಣ ಮಾಡುವದು, ಗ್ರಹಣ ಮಾಡುವದು ಕೂಡ ವ್ಯರ್ಥವಿದೆ.

ವಿಚಾರಪೂರ್ವಕ ಪ್ರಶ್ನೋತ್ತರದ ಮೂಲಕ ನಿರ್ಣಯ ಮಾಡದಿದ್ದರೆ ಶ್ರವಣದಲ್ಲಿ ಸಂದೇಹ ಮೊದಲಾದವು ಉಳಿಯುವವು. ಆಗ ಆತ್ಮಹಿತದ ಸನ್ಮುಖ ಹೇಗಾಗುವುದು ?

ಶ್ರೋತೃಗಳು ಎಂಥ ಧರ್ಮ ಕೇಳಬೇಕೆಂದರೆ ಅದು ದಯಾಮಯವಿರಬೇಕು, ಸುಖ ಕೊಡುವಂಥದ್ದಿರಬೇಕು, ಯುಕ್ತಿ ಪ್ರಮಾಣ ನಯದಿಂದ ಅದರಲ್ಲಿ ಬಾಧೆ ಬರಬಾರದು, ವೀತರಾಗ ಸರ್ವಜ್ಞ ಭಗವಂತರ ಆಗಮದಿಂದ ಹೊರಟಿರಬೇಕು, ಇಂಥ ಧರ್ಮವನ್ನು ಶ್ರವಣ ಮಾಡಿ ಪುನಃ ಪುನಃ ವಿಚಾರ ಮಾಡಿ ಗ್ರಹಣ ಮಾಡಬೇಕು. **ವಿಚಾರದಿಂದ ರಹಿತರಾಗಿ ಮಿಥ್ಯಾತ್ವರೂಪ, ಹಿಂಸೆಯ ಕಾರಣವಾದ ಧರ್ಮವನ್ನು ಗ್ರಹಣ ಮಾಡಿಕೊಂಡರೆ ನರಕ ಮೊದಲಾದ ಗತಿಗಳಿಗೆ ಪ್ರಾಪ್ತನಾಗಿ ದುಃಖಿಯಾಗಬಹುದು.**

ಯುಕ್ತಿಯಿಂದ ಹಾಗೂ ವೀತರಾಗ ಭಗವಂತರ ಆಗಮದಿಂದ ಯಾವುದರಲ್ಲಿ ಬಾಧೆಯು ಬರುತ್ತದೆ ಅದು ಧರ್ಮವಲ್ಲ, ಆದರೆ ಅಧರ್ಮವಿದೆ. ಆದುದರಿಂದ ಅದು ಶ್ರವಣ ಮಾಡಲು ಯೋಗ್ಯವಿಲ್ಲ.

ಹಟಾಗ್ರಹ ಮೊದಲಾದ ದೋಷಗಳಿಂದ ರಹಿತನಿರಬೇಕು. ದುರಾಗ್ರಹಿಗೆ ಉಪದೇಶವು ಅನ್ವಯಿಸುವುದಿಲ್ಲ.

ಈ ಪ್ರಕಾರ ಶ್ರೋತೃವು ಅನೇಕ ಗುಣಗಳ ಧಾರಕನಾಗಿದ್ದರೆ ಅವನು ಧರ್ಮದ ಉಪದೇಶವನ್ನು ಆಲಿಸಿ ತನ್ನ ಆತ್ಮನ ಕಲ್ಯಾಣ ಮಾಡಿಕೊಳ್ಳುತ್ತಾನೆ.

**ಶ್ರೋತಾರನ ಭೇದ :** ಈಗ ಇಲ್ಲಿ ಪ್ರಕರಣವಶದಿಂದ ಶ್ರೋತಾರರ ಕೆಲವೊಂದು ಭೇದಗಳನ್ನು ದೃಷ್ಟಾಂತದ ಮೂಲಕ ಹೇಳುತ್ತಾರೆ. ಅದೆಷ್ಟೋ ಶ್ರೋತಾರರು **ಮಣ್ಣಿನ** ಸ್ವಭಾವದ ಸಮಾನರಿರುತ್ತಾರೆ. ಯಾವ ಪ್ರಕಾರ ಮಣ್ಣಿನ ಮೇಲೆ ನೀರು ಹಾಕಿದಾಗ ಅದು ಮೃದುವಾಗಿ ಹೋಗುತ್ತದೆ, ಅನಂತರ ಒಣಗಿದ ಮೇಲೆ ಕಠೋರವಾಗಿ ಬಿಡುತ್ತದೆ, ಅದೇ ಪ್ರಕಾರ ಈ ಶ್ರೋತೃಗಳಂತೂ ಧರ್ಮಕೇಳುವ ಸಮಯದಲ್ಲಂತೂ ಭಾವಗಳಲ್ಲಿ ನೆನೆದು ಹೋಗಿ ಕೋಮಲರಾಗುತ್ತಾರೆ, ಅನಂತರ ಕಠೋರರಾಗಿ ಹೋಗುತ್ತಾರೆ.

ಅದೆಷ್ಟೋ ಶ್ರೋತಾರರು **ಸಾರಣಿಗೆಯ** ಸಮಾನರಿರುತ್ತಾರೆ, ಅದು ಧಾನ್ಯದ ಕಾಳನ್ನು ಬಿಟ್ಟುಕೊಟ್ಟು ಕೇವಲ ಸಿಪ್ಪೆಯನ್ನೇ ಗ್ರಹಣ ಮಾಡುತ್ತದೆ, ಅದೇ ಪ್ರಕಾರ ಇವರು ಕೂಡ ಧರ್ಮಕಥೆಯಲ್ಲಿ ಸಾರಯುಕ್ತ ಗುಣವನ್ನಂತೂ ಬಿಟ್ಟು ಕೊಡುತ್ತಾರೆ ಮತ್ತು ದುರ್ಗುಣಗಳನ್ನು ಮಾತ್ರ ಗ್ರಹಣ ಮಾಡುತ್ತಾರೆ.

ಅದೆಷ್ಟೋ ಶ್ರೋತಾರರು **ಎಮ್ಮೆಯ** ಸಮಾನರಿರುತ್ತಾರೆ. ಯಾವ ಪ್ರಕಾರ ಎಮ್ಮೆಯು ಸ್ವಚ್ಛವಾದ ನೀರಿನಿಂದ ತುಂಬಿರುವ ಸರೋವರದಲ್ಲಿ ಪ್ರವೇಶ ಮಾಡಿ ಸಂಪೂರ್ಣ ಸರೋವರವನ್ನೇ ಕೊಳಚೆಮಯ ಮಾಡಿ ಬಿಡುತ್ತದೆ, ಅದೇ ಪ್ರಕಾರ ಇವರುಕೂಡ ಸಭೆಯಲ್ಲಿನ ಜನರ ಪರಿಣಾಮವನ್ನು ಮಲಿನ ಮಾಡಿ ಬಿಡುತ್ತಾರೆ.

ಅದೆಷ್ಟೋ ಶ್ರೋತಾರರು **ಹಂಸದ** ಸಮಾನರಿರುತ್ತಾರೆ. ಯಾವ ಪ್ರಕಾರ ಹಂಸ ಪಕ್ಷಿಯು ನೀರು ಮತ್ತು ಹಾಲಿನ ಭೇದ ಮಾಡಿ ಹಾಲನ್ನೇ ಗ್ರಹಣ ಮಾಡುತ್ತದೆ, ಅದೇ ಪ್ರಕಾರ ಇವರು ಕೂಡ ನಿಃಸಾರವನ್ನು ತ್ಯಜಿಸಿ ಆತ್ಮ ಹಿತದ ಮಾತನ್ನು ಮಾತ್ರ ಗ್ರಹಣ ಮಾಡುತ್ತಾರೆ.

ಅದೆಷ್ಟೋ ಶ್ರೋತಾರರು **ಗಿಳಿಯ** ಸಮಾನರಿರುತ್ತಾರೆ. ಅದಕ್ಕೆ ರಾಮನೆಂದು ಕಲಿಸಿದರೆ ರಾಮನೆಂದು ಉಲಿಯುತ್ತದೆ, ರಹೀಮನೆಂದು ಕಲಿಸಿದರೆ ರಹೀಮನೆಂದು ಉಲಿಯುತ್ತದೆ, ಬೇರೇನೋ ಕಲಿಸಿದರೆ ಬೇರೇನೋ ಉಲಿಯುತ್ತದೆ; ಅದಕ್ಕೆ ರಾಮನದೂ ಜ್ಞಾನವಿಲ್ಲ, ರಹೀಮನದೂ ಜ್ಞಾನವಿಲ್ಲ, ಅದೇ ಪ್ರಕಾರ ಇವರು ಕೂಡ ಪಾಪ-ಪುಣ್ಯದ ವಿಚಾರವಿಲ್ಲದೆ ಏನನ್ನು ಕಲಿಸುತ್ತಿರೋ ಅದನ್ನು ಕಲಿತುಕೊಳ್ಳುತ್ತಾರೆ, ಗ್ರಹಣ ಮಾಡಿಕೊಳ್ಳುತ್ತಾರೆ, ಆದರೆ ವಿಚಾರದಿಂದ ರಹಿತರಾಗುತ್ತ ತಮ್ಮ ಸ್ವರೂಪ ಹಾಗೂ ಪರರ ಸ್ವರೂಪದ ಜ್ಞಾನದಿಂದ ರಹಿತರಾಗಿಯೇ ಉಳಿಯುತ್ತಾರೆ.

ಅದೆಷ್ಟೋ ಶ್ರೋತಾರರು **ಬೆಕ್ಕಿನ** ಸಮಾನರಿರುತ್ತಾರೆ. ಯಾವ ಪ್ರಕಾರ ಬೆಕ್ಕು ಮಲಗಿಕೊಂಡಿದ್ದರೂ ತನ್ನ ಬೇಟೆಯ ಕಡೆಗೆ ಜಾಗೃತವಾಗಿಯೇ ಇರುತ್ತದೆ, ಅದೇ ಪ್ರಕಾರ ಈ ಶ್ರೋತಾರರು ಕೂಡ ವಕ್ತಾರನ ವಾಣಿಯೊಳಗಿಂದ ವಿಷಯ, ಕಷಾಯ, ಛಲವನ್ನೇ ಗ್ರಹಣ ಮಾಡುತ್ತಿರುತ್ತಾರೆ.

ಅದೆಷ್ಟೋ ಶ್ರೋತಾರರು **ಬಕಪಕ್ಷಿಯ** ಸಮಾನರಿರುತ್ತಾರೆ. ಯಾವ ಪ್ರಕಾರ ಬಕಪಕ್ಷಿಯು ಬೇಟೆ ಹಿಡಿದುಕೊಳ್ಳುವ ಸಲುವಾಗಿ ಧ್ಯಾನ ಧಾರಣ ಮಾಡಿದವರಂತೆ ಕುಳಿತುಕೊಂಡಿರುತ್ತದೆ;ಅದೇ ಪ್ರಕಾರ ಇವರು ಕೂಡ ತಮ್ಮ ವಿಷಯ-ಕಷಾಯಗಳನ್ನೇ ಗ್ರಹಣ ಮಾಡುತ್ತಿರುತ್ತಾರೆ.

ಅದೆಷ್ಟೋ ಶ್ರೋತಾರರು **ಸೊಳ್ಳೆಯ** ಸಮಾನರಿರುತ್ತಾರೆ. ಅವರು ವಕ್ತಾರನಿಗೆ ಪುನಃ ಪುನಃ ಬಾಧೆಯನ್ನೇ ಉತ್ಪನ್ನ ಮಾಡುತ್ತಿರುತ್ತಾರೆ.

ಅದೆಷ್ಟೋ ಶ್ರೋತಾರರು **ಹೋತದ** ಸಮಾನರಿರುತ್ತಾರೆ. ಯಾವ ಪ್ರಕಾರ ಹೋತಕ್ಕೆ ಎಷ್ಟೇ ಸುಗಂಧದ ಎಣ್ಣೆ ಬಳಿದರೂ, ಸುಗಂಧಿತವಿರುವ ನೀರು ಕುಡಿಸಿದರೂ ಕೂಡ ಅದು ದುರ್ಗಂಧವನ್ನೇ ಪ್ರಕಟ ಮಾಡುತ್ತದೆ, ಅದೇ ಪ್ರಕಾರ ಇವರು ಕೂಡ ಉಜ್ವಲವಿರುವ ಧರ್ಮವನ್ನು ಆಲಿಸುತ್ತಿದ್ದರೂ ಕೂಡ ಪಾಪವನ್ನೇ ಕಾರುತ್ತಾರೆ.

ಅದೆಷ್ಟೋ ಶ್ರೋತಾರರು **ಜಿಗಳೆ (ಉಣ್ಣೆ)**ಯ ಸಮಾನರಿರುತ್ತಾರೆ. ಯಾವ ಪ್ರಕಾರ ಉಣ್ಣೆಯು ಕೆಚ್ಚಲದ ಮೇಲಿದ್ದರೂ ಅದರ ಸಂಪರ್ಕವಂತೂ ಆ ಹೊಲಸು ವಸ್ತುವಾದ ರಕ್ತವನ್ನೇ ಗ್ರಹಣ ಮಾಡುತ್ತದೆ, ಅದೇ ಪ್ರಕಾರ ಇವರು ಕೂಡ ವಿಷಯ-ಕಷಾಯಗಳನ್ನೇ ಗ್ರಹಣ ಮಾಡುತ್ತಾರೆ.

ಅದೆಷ್ಟೋ ಶ್ರೋತಾರರು **ಒಡಕು ಕೊಡದ** ಸಮಾನರಿರುತ್ತಾರೆ. ಅವರು ಧರ್ಮವನ್ನು ಕೇಳುತ್ತಿದ್ದರೂ ಕೂಡ ಚಿತ್ತದಲ್ಲಿ ಸ್ವಲ್ಪ(ಅಂಶ) ಮಾತ್ರವೂ ಗ್ರಹಣ ಮಾಡುವುದಿಲ್ಲ.

ಅದೆಷ್ಟೋ ಶ್ರೋತಾರರು **ಸರ್ಪದ** ಸಮಾನ ಸ್ವಭಾವವುಳ್ಳವರಿರುತ್ತಾರೆ. ಅವರು ಕಲ್ಲುಸಕ್ಕರೆ ಮಿಶ್ರಿತ ಹಾಲನ್ನು ಕುಡಿದರೂ ಕೂಡ ಪ್ರಬಲ ವಿಷವನ್ನೇ ಹೆಚ್ಚಿಸುತ್ತಾರೆ.

ಅದೆಷ್ಟೋ ಶ್ರೋತಾರರು **ಗೋವುಗಳ** ಸಮಾನ ಉತ್ತಮ ಸ್ವಭಾವವುಳ್ಳವರಿರುತ್ತಾರೆ. ಗೋವುಗಳು ಒಣ ಹುಲ್ಲು-ಹೊಟ್ಟು ತಿಂದು ಕೂಡ ಹಾಲನ್ನು ಕೊಡುತ್ತವೆ.

ಅದೆಷ್ಟೋ ಶ್ರೋತಾರರು **ಪಾಷಾಣದ** ಶಿಲೆಯ ಸಮಾನರಿರುತ್ತಾರೆ, ಅವರಿಗೆ ಎಷ್ಟೋ ಸಾರಿ ಧರ್ಮೋಪದೇಶ ಕೊಟ್ಟರೂ ಕೂಡ ಹೃದಯದಲ್ಲಿ ಪ್ರವೇಶ ಮಾಡುವುದಿಲ್ಲ.

ಅದೆಷ್ಟೋ ಶ್ರೋತಾರರು **ಒರೆಗಲ್ಲಿನ** ಸಮಾನ ಪರೀಕ್ಷಾ ಪ್ರಧಾನರಾಗಿರುತ್ತಾರೆ.

ಅದೆಷ್ಟೋ ಶ್ರೋತಾರರು **ತಕ್ಕಡಿಯ** ದಂಡಿಗೆಯ ಸಮಾನರಿರುತ್ತಾರೆ. ಅವರು ಹಾನಿ-ವೃದ್ಧಿ, ಹೇಯ-ಉಪಾದೇಯಗಳನ್ನು ಒಳ್ಳೆಯ ರೀತಿಯಿಂದ ತಿಳಿದುಕೊಂಡಿರುತ್ತಾರೆ.

ಈ ಪ್ರಕಾರ ಶ್ರೋತಾರರಲ್ಲಿ ಉತ್ತಮ, ಮಧ್ಯಮ, ಜಘನ್ಯವೆಂದು ಅನೇಕ ಭೇದಗಳಿವೆ. ಯಾರ ಸ್ವಭಾವವು ಹೇಗಿರುತ್ತದೆ ಅವರಿಗೆ ಧರ್ಮದ ಉಪದೇಶವು ಹಾಗೆಯೇ ಪರಿಣಮಿಸುತ್ತದೆ. ಈ ಧರ್ಮೋಪದೇಶನಾಮದ ಸ್ವಾಧ್ಯಾಯ ತಪದ ಪ್ರಕರಣದಲ್ಲಿ ವಕ್ತಾ-ಶ್ರೋತಾರರ ಲಕ್ಷಣ ಹೇಳಿದೆ. ಈ ರೀತಿಯಿಂದ ಐದು ಪ್ರಕಾರದ ಸ್ವಾಧ್ಯಾಯದ ವರ್ಣನೆ ಮಾಡಲಾಯಿತು.

**ಸ್ವಾಧ್ಯಾಯ ಮಾಡುವುದರಿಂದ ಲಾಭ :** ಸ್ವಾಧ್ಯಾಯ ಮಾಡುವುದರಿಂದ ಬುದ್ಧಿಯು ಅತಿಶಯವುಳ್ಳದ್ದಾಗಿರುತ್ತದೆ, ಅಭಿಪ್ರಾಯವು ಉಜ್ವಲವಾಗುತ್ತದೆ, ಜಿನಧರ್ಮದಲ್ಲಿ ಶ್ರದ್ಧೆಯು ದೃಢವಾಗುತ್ತದೆ, ಸಂಶಯದ ಅಭಾವವಾಗುತ್ತದೆ, ಪರವಾದಿಯ-ಅನ್ಯಮತಿಯ ಶಂಕೆಯ ಅಭಾವವಾಗುತ್ತದೆ, ಪರಮ ಧರ್ಮಾನುರಾಗವಾಗುತ್ತದೆ, ತಪದ ವೃದ್ಧಿಯಾಗುತ್ತದೆ, ಆಚಾರದ ಉಜ್ವಲತೆಯಾಗುತ್ತದೆ, ಅತಿಚಾರ(ದೋಷ)ದ ಅಭಾವವಾಗುತ್ತದೆ, ಪಾಪಕ್ರಿಯೆಯ ತ್ಯಾಗವಾಗುತ್ತದೆ, ಕುಧರ್ಮದಲ್ಲಿ ರಾಗದ ಅಭಾವವಾಗುತ್ತದೆ, ಹೇಯ-ಉಪಾದೇಯದ ಪರಿಚಯವಾಗುತ್ತದೆ, ಪರಮೇಷ್ಠಿಗಳಲ್ಲಿ ಸಾತಿಶಯ ಭಕ್ತಿಯಾಗುತ್ತದೆ, ಸಮ್ಯಗ್ದರ್ಶನವು ಪ್ರಕಟವಾಗುತ್ತದೆ, ಸಂಸಾರ-ಶರೀರ-ಭೋಗಗಳಿಂದ ವಿರಕ್ತತೆಯಾಗುತ್ತದೆ, ಕಷಾಯಗಳ ಮಂದತೆಯಾಗುತ್ತದೆ, ದಯಾಭಾವದ ವೃದ್ಧಿಯಾಗುತ್ತದೆ, ಶುಭಧ್ಯಾನವಾಗುತ್ತದೆ, ಆರ್ತ-ರೌದ್ರ ಧ್ಯಾನದ ಅಭಾವವಾಗುತ್ತದೆ, ಜಗತ್ತಿನಲ್ಲಿ ಮನ್ನಣೆಯಾಗುತ್ತದೆ, ಉಜ್ವಲ ಯಶಸ್ಸು ಪ್ರಕಟವಾಗುತ್ತದೆ, ದುರ್ಗತಿಯ ಅಭಾವವಾಗುತ್ತದೆ, ಸ್ವರ್ಗದ ಉತ್ತಮ ಸುಖ ಮತ್ತು ನಿರ್ವಾಣದ ಅತೀಂದ್ರಿಯ ಸುಖದ ಪ್ರಾಪ್ತಿಯಾಗುತ್ತದೆ. ಇವೇ ಮೊದಲಾದ ಅನೇಕ ಗುಣಗಳನ್ನು ಉತ್ಪನ್ನ ಮಾಡುವಂಥದ್ದೆಂದು ತಿಳಿದುಕೊಂಡು ವೀತರಾಗ ಸರ್ವಜ್ಞರ ಮೂಲಕ ಹೇಳಲಾದ ಆಗಮದ ಅಭ್ಯಾಸವಿಲ್ಲದೆ ಮನುಷ್ಯ ಜನ್ಮವನ್ನು ವ್ಯತೀತ ಮಾಡಬಾರದು. ಈ ಪ್ರಕಾರ ಸ್ವಾಧ್ಯಾಯ ನಾಮದ ನಾಲ್ಕನೆಯ ಅಂತರಂಗ ತಪದಲ್ಲಿನ ಐದು ಪ್ರಕಾರದ ಸ್ವರೂಪವನ್ನು ಹೇಳಲಾಯಿತು.

**ಕಾಯೋತ್ಸರ್ಗ ತಪ :** ಈಗ ಕಾಯೋತ್ಸರ್ಗವೆಂಬ ಹೆಸರಿನ ತಪದ ಸ್ವರೂಪ ಹೇಳುತ್ತಾರೆ, ಬಾಹ್ಯ ಹಾಗೂ ಅಭ್ಯಂತರ ಉಪಾಧಿಗಳ ತ್ಯಾಗ ಮಾಡುವುದು ಅದು ಕಾಯೋತ್ಸರ್ಗವಿದೆ. ಬಾಹ್ಯ ಎಂದರೆ ಶರೀರ, ಧನ, ಧಾನ್ಯ ಮೊದಲಾದವುಗಳ ತ್ಯಾಗ ಮಾಡುವುದು ಅದು ಬಾಹ್ಯ ಉಪಾಧಿಯ ತ್ಯಾಗವಿದೆ. ಅಭ್ಯಂತರ ಎಂದರೆ ಮಿಥ್ಯಾತ್ವ ಕ್ರೋಧ, ಮಾನ, ಮಾಯೆ,

ಲೋಭ, ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ವೇದ ಪರಿಣಾಮಗಳ ಅಭಾವ ಮಾಡುವುದು ಅದು ಅಭ್ಯಂತರ ಉಪಾಧಿಯ ತ್ಯಾಗವಿದೆ. ಬಾಹ್ಯ ತ್ಯಾಗದಲ್ಲಿ ಆಹಾರ ಮೊದಲಾದವುಗಳದೂ ತ್ಯಾಗವಾಗುತ್ತದೆ. ಸನ್ಯಾಸದ ಸಮಯದಲ್ಲಿ ಆಯುವಿನ ಪೂರ್ಣತೆಯಾದ ಮೇಲೆ ಯಾವಜ್ಜೀವನ ತ್ಯಾಗವಾಗುತ್ತದೆ, ಅದರ ವರ್ಣನೆಯನ್ನು ಮುಂದೆ ಕ್ರಮದಿಂದ ಸಲ್ಲೇಖನದ ಪ್ರಕರಣದಲ್ಲಿ ಮಾಡಲಾಗುವುದು. ಆದುದರಿಂದ ಇಲ್ಲಿ ಅದರ ಸಂಬಂಧದಲ್ಲಿ ವಿಶೇಷವಾಗಿ ಹೇಳಲಾಗಿಲ್ಲ.

**ಧ್ಯಾನ ತಪ :** ಈಗ ಧ್ಯಾನ ನಾಮದ ತಪದ ವರ್ಣನೆ ಮಾಡುತ್ತಾರೆ. ಒಂದು ಪದಾರ್ಥವನ್ನು ತಿಳಿದುಕೊಳ್ಳುತ್ತ ಅದರ ಚಿಂತನೆಯಲ್ಲಿಯೇ ನಿಂತುಕೊಳ್ಳುವುದು ಅದು ಧ್ಯಾನವಿದೆ. ಆ ಧ್ಯಾನವು ಉತ್ತಮ ಸಂಹನನವುಳ್ಳವನಿಗೆ ಅಂತರ್ಮುಹೂರ್ತವಿರುತ್ತದೆ. ಏಕಾಗ್ರ ಚಿಂತನದ ಸುಖವು ಅಂತರ್ಮುಹೂರ್ತಕ್ಕಿಂತ ಅಧಿಕ ಕಾಲವು ಉತ್ತಮ ಸಂಹನನವುಳ್ಳವನಿಗೂ ಇರುವುದಿಲ್ಲ, ವಜ್ರವೃಷಭನಾರಾಚ ಸಂಹನನ, ವಜ್ರನಾರಾಚ ಸಂಹನನ, ನಾರಾಚ ಸಂಹನನ ಇವು ಮೂರು ಉತ್ತಮ ಸಂಹನನಗಳಿವೆ. ಉತ್ತಮ ಸಂಹನನವುಳ್ಳವನಿಗೆ ಮನುಷ್ಯತನದಲ್ಲಿ ಚಿತ್ತದ ತಡೆಯುವಿಕೆಯಾಗುತ್ತದೆ. **ಸಂಸಾರದಲ್ಲಿ ಗಮನ, ಭೋಜನ, ಶಯನ, ಅಧ್ಯಯನ ಮೊದಲಾದ ಅನೇಕ ಕ್ರಿಯೆಗಳಿದ್ದು ಅವುಗಳಲ್ಲಿ ಯಾವನು ನಿಯಮ ರಹಿತನಾಗಿ ವರ್ತಿಸುತ್ತಾನೆ ಅವನಿಗೆ ಧ್ಯಾನವಾಗುವುದಿಲ್ಲ.** ಎಲ್ಲಿ ಓರ್ವ ಶುದ್ಧಾತ್ಮನ ಸನ್ಮುಖವಾಗಿ ಚಿತ್ತವು ತಡೆಯುತ್ತವೆ ಅಲ್ಲಿ ಧ್ಯಾನವಿದೆ. ಎಲ್ಲಿ ಏಕಾಗ್ರತೆಯಿಲ್ಲ ಅಲ್ಲಿ ಭಾವನೆಯಿದೆ.

ಪ್ರಶಸ್ತ ಭಾವಗಳಿಂದ ಶುಭಧ್ಯಾನವಾಗುತ್ತದೆ, ಅಪ್ರಶಸ್ತ ಭಾವಗಳಿಂದ ಅಶುಭಧ್ಯಾನವಾಗುತ್ತದೆ. ಶುಭಧ್ಯಾನವು ಧರ್ಮಧ್ಯಾನ ಮತ್ತು ಶುಕ್ಲಧ್ಯಾನವೆಂದು ಎರಡು ಪ್ರಕಾರದ್ದಿದೆ. ಅಶುಭ ಧ್ಯಾನವು ಕೂಡ ಆರ್ತಧ್ಯಾನ ಮತ್ತು ರೌದ್ರಧ್ಯಾನವೆಂದು ಎರಡು ಪ್ರಕಾರದ್ದಿದೆ. ಈ ಪ್ರಕಾರ ಧ್ಯಾನದಲ್ಲಿ ನಾಲ್ಕು ಭೇದಗಳಿವೆ. ಅವುಗಳಲ್ಲಿ ಅಶುಭ ಧ್ಯಾನಗಳಂತೂ ಜೀವಗಳಿಗೆ ಯತ್ನವಿಲ್ಲದೆಯೇ ಆಗುತ್ತವೆ. ಏಕೆಂದರೆ ಅಶುಭಧ್ಯಾನದ ಸಂಸ್ಕಾರವಂತೂ ಜೀವಗಳಿಗೆ ಅನಾದಿಕಾಲದಿಂದ ನಡೆಯುತ್ತ ಬರುತ್ತಲಿದೆ. ಅಶುಭ ಧ್ಯಾನ ಕಲಿಸುವ ಸಲುವಾಗಿ ಯಾವ ಶಾಸ್ತ್ರಗಳೂ ಇಲ್ಲ, ಇದಂತೂ ಯಾವ ಬೋಧವಿಲ್ಲದೆಯೇ ಜೀವಗಳಿಗೆ ಆಗುತ್ತದೆ. ಅಶುಭ ಧ್ಯಾನದ ಅಭಾವವಾದ ಮೇಲೆ ಶುಭ ಧ್ಯಾನವಾಗುತ್ತದೆ.

**ಆರ್ತ ಧ್ಯಾನ ಮತ್ತು ಅದರ ಭೇದ :** ಅಶುಭ ಧ್ಯಾನದ ಅಭಾವ ಮಾಡುವ ಸಲುವಾಗಿ ಮೊದಲು ನಾಲ್ಕು ಪ್ರಕಾರದ ಆರ್ತಧ್ಯಾನದ ಕಥನ ಮಾಡುತ್ತಾರೆ. ಅನಿಷ್ಟಸಂಯೋಗಜ, ಇಷ್ಟಸಂಯೋಗಜ, ರೋಗಜನಿತ, ನಿದಾನ ಜನಿತವೆಂದು ಇವು ನಾಲ್ಕು ಪ್ರಕಾರದ ಆರ್ತಧ್ಯಾನಗಳಿವೆ. ಋತ ಎಂದರೆ ದುಃಖ, ಅದರಿಂದ ಉತ್ಪನ್ನವಾಗುವಂಥದು ಅದು ಆರ್ತಧ್ಯಾನವಿದೆ.

**ಅನಿಷ್ಟ ಸಂಯೋಗಜ ಆರ್ತಧ್ಯಾನ :** ಅನಿಷ್ಟ ವಸ್ತುವಿನ ಸಂಯೋಗದಿಂದ ಯಾವಾಗ ಬಹಳಷ್ಟು ದುಃಖವು ಉತ್ಪನ್ನವಾಗುತ್ತದೆ ಆ ಸಮಯದಲ್ಲಿ ಯಾವ ಚಿಂತನೆಯಾಗುತ್ತದೆ ಅದು ಅನಿಷ್ಟ ಸಂಯೋಗಜ ಆರ್ತಧ್ಯಾನವಿದೆ. ತಮ್ಮ ಶರೀರದ ನಾಶ ಮಾಡುವಂಥ, ಧನದ ನಾಶ ಮಾಡುವಂಥ, ಆಜೀವಿಕೆಯನ್ನು ಕೆಡಿಸುವಂಥ, ತಮ್ಮ ಸ್ವಜನ-ಮಿತ್ರ ಮೊದಲಾದವರ ನಾಶ ಮಾಡುವಂಥ ದುಷ್ಟ ವೈರೀ, ದುಷ್ಟ ದೊರೆ, ದೊರೆಯ ದುಷ್ಟ ಅಧಿಕಾರೀ, ತಮಗೆ ದುಷ್ಟ ನೆರೆಮನೆಯವರ ಸಂಯೋಗ ದೊರಕುವುದು, ರೋಗಮಯ ಶರೀರ, ಘೋರ ದರಿದ್ರತೆ, ನೀಚ ಜಾತಿ-ನೀಚಕುಲದಲ್ಲಿ ಜನ್ಮ, ನಿರ್ಬಲತೆ, ಅಸಮರ್ಥತೆ, ಅಂಗಹೀನತೆ ಇತ್ಯಾದಿಗಳನ್ನು ಪಡೆಯುವುದು; ಸಿಂಹ, ಹುಲಿ, ಸರ್ಪ, ಇಲಿ, ನಾಯಿ, ಅಗ್ನಿ, ಜಲ, ದುಷ್ಟರಾಕ್ಷಸ ಮೊದಲಾದವುಗಳ ಸಂಯೋಗ ದೊರಕುವುದು; ದುಷ್ಟ ಬಂಧುಗಳು, ದುಷ್ಟ ಪತ್ನಿ, ಪುತ್ರ ಮೊದಲಾದವರ ಸಂಯೋಗವು ಅತ್ಯಂತ ಅನಿಷ್ಟವಾಗುತ್ತದೆ. ಇವರುಗಳ ಸಂಯೋಗದ ದುಃಖದಲ್ಲಿ ಯಾವ ಸಂಕ್ಲೇಶರೂಪದ ಪರಿಣಾಮಗಳಾಗುತ್ತವೆ ಆ ಸಂಯೋಗಗಳ ವಿಯೋಗ ಮಾಡುವ ಸಲುವಾಗಿ ಯಾವ ಚಿಂತನೆಯಾಗುತ್ತದೆ ಅದು ಅನಿಷ್ಟ ಸಂಯೋಗಜ ಆರ್ತಧ್ಯಾನವಿದೆ.

ಅತ್ಯಂತ ಶೀತ, ಅತ್ಯಂತ ಉಷ್ಣ, ಅತಿಶಯ ಮಳೆ, ಅತಿಶಯ ಗಾಳಿ, ಸೊಳ್ಳೆ, ತಿಗಣೆ, ಇರುವೆ, ಕಟ್ಟಿರುವೆ ಮೊದಲಾದ ಮತ್ತು ದುಷ್ಟರ ದುರ್ವಚನ ಕೇಳಿ, ಚಿಂತನೆ ಮಾಡಿ, ಸ್ಮರಣೆ ಮಾಡಿ ಪರಿಣಾಮದಲ್ಲಿಹೆಚ್ಚು ಕಷ್ಟವುತ್ಪನ್ನವಾಗುತ್ತದೆ. ಅನಿಷ್ಟಗಳ

ಸಂಯೋಗದಿಂದ ರಾತ್ರಿ-ಹಗಲುಗಳಲ್ಲಿ, ಮನೆ-ಹೊರಗೆ ಯಾವುದೇ ಸ್ಥಾನದಲ್ಲಿ, ಯಾವುದೇಸಮಯದಲ್ಲಿ ಕ್ಲೇಶವು ದೂರವಾಗುವುದಿಲ್ಲ, ಇಂಥ ಆರ್ತ ಪರಿಣಾಮಗಳಿಂದ ಘೋರ ಕರ್ಮದ ಬಂಧವಾಗುತ್ತದೆ. ಇವೆಲ್ಲವು ಅನಿಷ್ಟಸಂಯೋಗಜ ಆರ್ತಧ್ಯಾನದ ಪ್ರಥಮ ಭೇದಗಳಿವೆ. ಯಾರು ಇವನ್ನು ಪರಿಣಾಮದಲ್ಲಿ ಆಗಗೊಡುವುದಿಲ್ಲ ಅಂಥ ಸಮ್ಯಗ್ದೃಷ್ಟಿಗಳಿಗೆ ಕರ್ಮದ ಅಧಿಕ ನಿರ್ಜರೆಯಾಗುತ್ತದೆ.

ಜ್ಞಾನೀ ಮಹಾನ ಸತ್ಪುರುಷರಿದ್ದವರು ಅವರು ಅನಿಷ್ಟದ ಸಂಯೋಗದಲ್ಲಿ ಆರ್ತಧ್ಯಾನ ಮಾಡುವುದಿಲ್ಲ. ಅವರಂತೂ ಹೀಗೆ ವಿಚಾರ ಮಾಡುತ್ತಾರೆ-ಎಲೈ ಆತ್ಮನೇ ! ನಿನಗೆ ಅನಿಷ್ಟ ದುಃಖ ಕೊಡುವಂಥ ಯಾವ ಸಾಮಗ್ರಿಗಳು ಪ್ರಾಪ್ತವಾಗಿವೆ. ಅವೆಲ್ಲವು ನೀನೇ ಸಂಪಾದನೆ ಮಾಡಿದ ಪಾಪಕರ್ಮದ ಫಲವಿದೆ, ಅದರಲ್ಲಿ ಬೇರೆ ಯಾರದೂ ದೋಷವಿಲ್ಲ, ಅನ್ಯರನ್ನು ತಮ್ಮ ಘಾತ ಮಾಡುವಂಥವರೆಂದು ತಿಳಿಯಬೇಡ. ಪೂರ್ವದಲ್ಲಿ ನೀನು ಯಾವ ಇತರರ ಧನ ಅಪಹರಿಸಿರುವೆ; ಅನ್ಯಾಯ ಮಾಡಿರುವೆ, ಅನ್ಯ ನಿರ್ಬಲರಿಗೆ ಸಂತಾಪವನ್ನುತ್ಪನ್ನ ಮಾಡಿರುವೆ, ಅನ್ಯರಿಗೆ ಕಲಂಕ ತಗಲಿಸಿರುವೆ, ಮಿಥ್ಯಾಧರ್ಮದ ಬೋಧ ಮಾಡಿರುವೆ, ಶೀಲವಂತ ತ್ಯಾಗೀ ತಪಸ್ವಿಗಳಿಗೆ ದೋಷ ತಗಲಿಸಿರುವೆ, ಅಸತ್ಯ ಮಾರ್ಗ ನಡೆಸಿರುವೆ, ವಿಕಥೆಯಲ್ಲಿ ಲೀನನಾಗಿರುವೆ, ಅನ್ಯಾಯದ ವಿಷಯಗಳ ಸೇವನೆ ಮಾಡಿರುವೆ, ನಿರ್ಮಾಲ್ಯ ದೇವದ್ರವ್ಯವನ್ನು ತಿಂದಿರುವೆ ಅವುಗಳಿಂದ ಕಟ್ಟಲ್ಪಟ್ಟ ಕರ್ಮವು ಈಗ ಅವಸರ ಪಡೆದು ಉದಯದಲ್ಲಿ ಬಂದು ಬಿಟ್ಟಿದೆ.

ಈಗ ಆ ಕರ್ಮಗಳ ಉದಯದಲ್ಲಿ ದುಃಖಿಯಾಗಿ ಕ್ಲೇಶ ಭೋಗಿಸಿದರೆ ಇನ್ನೂ ಹೆಚ್ಚು ನವೀನ ಕರ್ಮದ ಬಂಧ ಮಾಡಿಕೊಳ್ಳುವೆ; ದುಃಖಿಯಾಗುವುದರಿಂದ ಕರ್ಮವು ಬಿಟ್ಟುಕೊಡುವುದಿಲ್ಲ, ಆದರೆ ಇನ್ನೂ ಹೆಚ್ಚಾಗುತ್ತದೆ, ಬುದ್ಧಿಯು ನಷ್ಟವಾಗಿ ಹೋಗುವುದು, ಧರ್ಮವು ಸ್ವಲ್ಪವೂ ಉಳಿಯಲಾರದು. ಪಾಪದ ಬಂಧನವು ದೃಢವಾಗುವುದು. ಆದ್ದರಿಂದ ಈಗ ಧೈರ್ಯಧಾರಣ ಮಾಡಿ ಸಮಭಾವದಿಂದ ಸಹಿಸು. ಸಂಕ್ಲೇಶವಿಲ್ಲದೆ ಸಮಭಾವದಿಂದ ಸಹಿಸಿದರೆ ಶೀಘ್ರವೇ ಪಾಪ ಕರ್ಮದ ನಾಶವಾಗಿ ಹೋಗುವುದು.

**ಪರಿಣಾಮದಲ್ಲಿ ಹೀಗೆ ವಿಚಾರ ಮಾಡಬೇಕು.** ಕರ್ಮವು ಈ ಸಮಯದಲ್ಲಿ ಉದಯದೊಳಗೆ ಬಂದು ರಸವಿತ್ತು ನಿರ್ಜರಿಸಿ ಹೋಗುತ್ತಿದೆ ಇದು ನನಗೆ ದೊಡ್ಡ ಲಾಭವಿದೆ. ನನಗೆ ಇನ್ನೊಂದು ದೊಡ್ಡ ಲಾಭವೆಂದರೆ ನನಗೆ ಜಿನಧರ್ಮದ ಧಾರಣವಾಗುತ್ತಿದೆ, ಈ ಸಮಯದಲ್ಲಿ ಅತ್ಯಂತ ಸಮತೆಯಿಂದ ಕರ್ಮದ ಪ್ರಹಾರವನ್ನು ಸಹನೆ ಮಾಡಿ ಕರ್ಮದ ಋಣದಿಂದ ರಹಿತನಾಗಿ ಹೋಗುವೆನು. ಒಂದು ವೇಳೆ ಇದೇ ಕರ್ಮವು ಬೇರೆ ಯಾವುದೇ ಸಮಯದಲ್ಲಿ ಉದಯದೊಳಗೆ ಬರುತ್ತಿದ್ದರೆ ಅದರಿಂದ ಇನ್ನೂ ಹೆಚ್ಚು ಕರ್ಮ ಕಟ್ಟಿಕೊಂಡು ಅಸಂಖ್ಯಾತ ಭವಗಳಲ್ಲಿ ಅದರ ಹಿಡಿತದಿಂದ ಬಿಡುಗಡೆ ಹೊಂದುತ್ತಿರಲಿಲ್ಲ.

**ಹೀಗೂ ವಿಚಾರ ಮಾಡಬೇಕು.** ಈ ಅನಿಷ್ಟ ಸಂಯೋಗಗಳು ಹೇಗೆ ನನಗೆ ಅನಿಷ್ಟವೆನಿಸುತ್ತವೆ ಹಾಗೆಯೇ ಅನ್ಯ ಜೀವರುಗಳಿಗೆ ಕೂಡ ಕಷ್ಟ ಕೊಡುವಂಥವಿವೆ. ಅದುದರಿಂದ ಈಗ ನಾನು ಯಾವ ಇತರ ಜೀವನಿಗೆ ಅಯೋಗ್ಯ ವಚನಗಳಿಂದ, ಕಾಯದಿಂದ ಯತ್ನಾಚಾರವಿಲ್ಲದೆ ಮತ್ತು ಮನಸ್ಸಿನಿಂದ ಅನ್ಯ ಜೀವಗಳಿಗೆ ದುಃಖ ಹಾನಿಯ ಚಿಂತನದ ಮೂಲಕ ಎಂದೂ ದುಃಖೀ ಮಾಡುವ ಇಚ್ಛೆ ಮಾಡಲಾರೆನು. ಈ ಸಮಯದಲ್ಲಿ ನನಗೆ ಯಾವ ಈ ಅನಿಷ್ಟಸಂಯೋಗಗಳು ದೊರಕಿವೆ ಅವುಗಳಿಂದ ಸಂಖ್ಯಾತ ಗುಣಿತ ಹೆಚ್ಚು ಅನಿಷ್ಟ ಸಂಯೋಗಗಳು ನರಕ-ತಿರ್ಯಂಚ ಪರ್ಯಾಯದಲ್ಲಿ ಮತ್ತು ಮನುಷ್ಯ ಪರ್ಯಾಯದಲ್ಲಿ ಅನೇಕ ಬಾರಿ ಭೋಗಿಸಿರುವೆನು, ಅನೇಕ ದುರ್ವಚನ ಸಹಿಸಿರುವೆನು, ಅನೇಕ ಪ್ರಕಾರದ ಹೊಡೆತದಿಂದ ನಿತ್ಯ ದುಃಖ ಭೋಗಿಸಿರುವೆನು, ಅನೇಕ ಜನ್ಮಗಳಲ್ಲಿ ದಾರಿದ್ರ್ಯ ಭೋಗಿಸಿರುವೆನು.

ಭಾರ ಹೊರುವ ದುಃಖ, ಮರ್ಮಸ್ಥಾನದಲ್ಲಿ ಹೊಡೆತದ ದುಃಖ, ಕೈ-ಕಾಲು-ಮೂಗು ಭೇದಿಸುವ ದುಃಖ, ಕಣ್ಣು ತೆಗೆಯುವುದರ ದುಃಖ, ಹಸಿವೆಯ, ಬಾಯಾರಿಕೆಯ, ಶೀತದ, ಉಷ್ಣದ, ಬಿಸಿಲಿನಲ್ಲಿ ಬಿದ್ದುಕೊಂಡಿರುವುದರ, ಪ್ರಚಂಡ ಪವನದ, ದುಷ್ಟ ಜೀವಗಳಿಂದ ತಿಂದು ಬಿಡುವುದರ, ಹೆಚ್ಚು ಕಾಲದವರೆಗೆ ಜೈಲಿನಲ್ಲಿ ಪರಾಧೀನವಾಗಿರುವುದರ ಮತ್ತು ಬಂಧನದ ಅನೇಕ ದುಃಖಗಳನ್ನು ಭೋಗಿಸಿದ್ದೇನೆ. ಅನೇಕ ಬಾರಿ ಅಗ್ನಿಯಲ್ಲಿ ಸುಟ್ಟು ಹೋಗಿದ್ದೇನೆ, ಅನೇಕ ಬಾರಿ

ಸತ್ತಿದ್ದೇನೆ. ಅನೇಕ ಬಾರಿ ನೀರಿನಲ್ಲಿ ಮುಳುಗಿದ್ದೇನೆ, ಕೆಸರಿನಲ್ಲಿ ಮೋಸ ಹೋಗಿ ಸತ್ತಿದ್ದೇನೆ, ಈ ಪ್ರಕಾರ ತಿರ್ಯಂಚಗಳಲ್ಲಿ, ಮನುಷ್ಯರುಗಳಲ್ಲಿ ಉತ್ಪನ್ನನಾಗಿ ಅನಿಷ್ಟದ ಸಂಯೋಗವನ್ನು ಅನಂತ ಬಾರಿ ಭೋಗಿಸಿದ್ದೇನೆ. ನರಕಗತಿಯ ದುಃಖವನ್ನಂತೂ ಪ್ರತ್ಯಕ್ಷ ಜ್ಞಾನಿಗಳೇ ತಿಳಿಯುವಲ್ಲಿ ಸಮರ್ಥರಿದ್ದಾರೆ, ಬೇರಾರೂ ಇಲ್ಲ. ಈ ಸಂಸಾರದಲ್ಲಿ ಇರುವವರೆಗಂತೂ ಈ ಅನಿಷ್ಟ ಸಂಯೋಗಗಳು ಅವಶ್ಯವಾಗಿ ಇರುವವು.

ನಾನು ಪಾಪಕರ್ಮ ಮಾಡಿ ಪಂಚಮ ಕಾಲದ ಮನುಷ್ಯನಾಗಿದ್ದೇನೆ. ಇದರಲ್ಲಿ ಅನಿಷ್ಟ ಸಂಯೋಗಗಳು ಬರುವುದರಿಂದ ಭಯವನ್ನೇನು ಮಾಡುವುದು ? ಇದರಲ್ಲಿಯಂತೂ ಅನಂತ ಕಾಲದಲ್ಲಿ ಕೂಡ ಪ್ರಾಪ್ತವಾಗುವುದು ದುರ್ಲಭವಿರುವಂಥ ಜಿನಧರ್ಮರೂಪದ ಪರಮನಿಧಾನವು ದೊರಕಿಕೊಂಡಿದೆ. ಇದರ ಲಾಭದಿಂದ ನಾನು **ಆನಂದದೊಡನೆ ಅನಿಷ್ಟ ಸಂಯೋಗದಿಂದಾಗುವ ದುಃಖಗಳನ್ನು ಮರೆತು ಸಮತೆಯ ಭಾವದಿಂದ ಕರ್ಮದ ಉದಯವನ್ನು ಜಯಿಸುವುದು ಯೋಗ್ಯವಿದೆ.** ಈ ಪ್ರಕಾರ ಅನಿಷ್ಟ ಸಂಯೋಗ ಜನ್ಯ ಆರ್ತಧ್ಯಾನದ ಅಭಾವ ಮಾಡುವುದು.

**ಇಷ್ಟ ವಿಯೋಗಜ ಆರ್ತಧ್ಯಾನ :** ಆರ್ತಧ್ಯಾನದ ಎರಡನೇ ಭೇದವು ಇಷ್ಟು ವಿಯೋಗಜವಿದೆ. ಇಷ್ಟದ ವಿಯೋಗದಿಂದ ಅಧಿಕ ದುಃಖವು ಉತ್ಪನ್ನವಾಗುತ್ತದೆ. ತನ್ನ ಚಿತ್ತಕ್ಕೆ ಆನಂದ ಕೊಡುವಂಥ-ಅನೇಕ ಸುಖಗಳನ್ನು ಉತ್ಪನ್ನ ಮಾಡುವಂಥ ಪುತ್ರನ ಮರಣವಾಗಿ ಹೋದರೆ, ಆಜ್ಞಾಧಾರಕಳಾದ ಪತ್ನಿಯ ವಿಯೋಗವಾಗಿ ಹೋದರೆ, ಪ್ರಾಣಪ್ರಿಯನಾದ ಮಿತ್ರನ ವಿಯೋಗವಾಗಿ ಹೋದರೆ, ಅಧಿಕ ಸಂಪತ್ತು ರಾಜ್ಯ ಐಶ್ವರ್ಯದ ಭೋಗಗಳನ್ನು ಕೊಡುವಂಥ ಪ್ರಭುವಿನ ವಿಯೋಗವಾಗಿ ಹೋದರೆ, ಸುಖದಿಂದ ಜೀವನ ಸಾಗಿಸಬಹುದಾದಂಥ ಆಜೀವಿಕೆಯ ನಷ್ಟವಾಗಿ ಹೋದರೆ, ರಾಜ್ಯದಿಂದ ಚ್ಯುತವಾದರೆ, ಅಧಿಕಾರ ಹೊರಟು ಹೋದರೆ, ಸಂಪತ್ತು ನಷ್ಟವಾದರೆ, ಸುಖದಿಂದ ವಾಸಿಸುವ ಸ್ಥಾನ, ಭೂಮಿ, ಮನೆ ನಷ್ಟವಾಗಿ ಹೋದರೆ, ಸೌಭಾಗ್ಯ ಯಶಸ್ಸು ನಷ್ಟವಾಗಿ ಹೋದರೆ, ಪ್ರೀತಿ ಮಾಡುವಂಥ ಭೋಗವು ನಷ್ಟವಾಗಿ ಹೋಗುವುದೆಲ್ಲವೂ ಇಷ್ಟ ವಿಯೋಗವಿದೆ. ಇಂಥ ಇಷ್ಟಗಳ ವಿಯೋಗವಾಗಿ ಹೋದ ಮೇಲೆ ಶೋಕ, ಭಯ, ಭ್ರಮೆ, ಮೂರ್ಛೆ ಮೊದಲಾದುವಾಗುವುದು, ಪುನಃ ಅವುಗಳ ಸಂಯೋಗವಾಗುವ ಸಲುವಾಗಿ ಚಿಂತನೆ ಮಾಡುವುದು, ರೋದಿಸುವುದು, ದುಃಖದಲ್ಲಿ ಅಚೇತರಾಗಿ ವಿಲಾಪ ಮಾಡುವುದು, ಪುನಃ ಪುನಃ ದುಃಖಿಯಾಗುವುದು, ಹಾಹಾಕಾರ ಮಾಡುವುದು, ಇದು ತಿರ್ಯಂಚಗತಿಯ ಗಮನದ ಕಾರಣವಾದ ಇಷ್ಟ ವಿಯೋಗಜ ಆರ್ತಧ್ಯಾನವಿದೆ.

ಇಷ್ಟವಿಯೋಗದಿಂದ ದೊಡ್ಡ-ದೊಡ್ಡ ಶೂರವೀರರ ಧೈರ್ಯವು ಮುರಿದು ಬೀಳುತ್ತದೆ, ಮಹಾನ ಪುರುಷರೂ ದೀನರ ಸಮಾನವಾಗಿ ಹೋಗುತ್ತಾರೆ, ಹೃದಯವು ಒಡೆದು ಹೋಗುತ್ತದೆ, ಮರಣವಾಗಿ ಬಿಡುತ್ತದೆ, ಉನ್ಮತ್ತ-ಮರುಳನಾಗಿ ಹೋಗುತ್ತಾನೆ, ಬಾವಿಯೊಳಗೆ ಹಾರಿ ಸತ್ತು ಹೋಗುತ್ತಾನೆ, ಎತ್ತರವಾದ ಮನೆ-ಪರ್ವತಗಳ ಮೇಲಿಂದ ಉರುಳಿ ಸತ್ತು ಹೋಗುತ್ತಾನೆ, ವಿಷ ಭಕ್ಷಣ ಮಾಡುತ್ತಾನೆ, ಆಯುಧಗಳಿಂದ ಆತ್ಮಘಾತ ಮಾಡಿಕೊಳ್ಳುತ್ತಾನೆ. ಇಷ್ಟವಿಯೋಗದ ದುಃಖದ ಸಮಾನವಾದ ದುಃಖವು ಬೇರೆ ಯಾವುದೂ ಇಲ್ಲ. ಇಂಥ ಇಷ್ಟ ವಿಯೋಗದ ದುಃಖದಿಂದ ಉಭಯ ಲೋಕಗಳು ನಷ್ಟವಾಗಿ ಹೋಗುತ್ತವೆ.

**ಯಾರೋ ಉತ್ತಮ ಪುರುಷರು, ಸಂಸಾರ-ಶರೀರ-ಭೋಗಗಳಿಂದ ವಿರಕ್ತರು, ಸಮ್ಯಕ್ ಶ್ರದ್ಧೆಯುಳ್ಳವರು, ಸಮ್ಯಕ್‌ಜ್ಞಾನಿಗಳು, ವೀತರಾಗ ಸರ್ವಜ್ಞರ ವಚನಗಳ ಅವಲಂಬನ ಪಡೆದವರು, ವಸ್ತುವಿನ ಯಥಾರ್ಥ ಸ್ವರೂಪವನ್ನು ತಿಳಿದಿರುವಂಥ ಪುರುಷರೇ ಇಷ್ಟ ವಿಯೋಗಜನಿತ ದುಃಖವನ್ನು ಜಯಿಸುತ್ತಾರೆ.** ಅವರು ಎಲೈ ಆತ್ಮನೇ ! ನಿನಗೆ ಈ ಸಂಸಾರದಲ್ಲಿ ಎಷ್ಟು ಸಂಯೋಗಗಳು ದೊರಕಿವೆ ಅವುಗಳ ವಿಯೋಗವು ನಿಯಮದಿಂದ ಆಗುವುದು. ವಿಯೋಗವನ್ನು ತಡೆಯುವುದಕ್ಕೆ ಯಾವ ದೇವತೆ, ಇಂದ್ರ, ಮಂತ್ರ, ತಂತ್ರ, ಔಷಧ, ಬಲ, ಸೇನೆ, ಕುಟುಂಬ, ಬುದ್ಧಿ, ಮಿತ್ರ, ಧನ, ಸಂಪತ್ತುಗಳಾವವೂ ಸಮರ್ಥವಿಲ್ಲವೆಂಬ ಭಾವನೆಯನ್ನು ಭಾವಿಸುತ್ತಾರೆ.

ತಮ್ಮ ಶರೀರದ ವಿಯೋಗವೇ ಅವಶ್ಯವಾಗಿ ಆಗುವುದೆಂದ ಮೇಲೆ ಶರೀರಕ್ಕೆ ಸಂಬಂಧಿಸಿದವರ ಕಥೆಯನ್ನೇನು ಹೇಳುವುದು ? ಯಾವ ಪತ್ನಿ, ಪುತ್ರ, ತಾಯಿ, ತಂದೆ ಮೊದಲಾದವರನ್ನು ನನ್ನವರೆಂದು ನಂಬಿ ಪ್ರೀತಿ ಮಾಡುತ್ತಿರುವೆ, ಆದರೆ ನಿನ್ನ ಸಂಬಂಧವು ಅವರ ಆತ್ಮನೊಡನೆ ಇಲ್ಲ, ಅವರ ಶರೀರದೊಡನೆ ಇದೆ. ಈ ಮುಖದ ಚರ್ಮ, ದುರ್ಗಂಧಿತ ನಾಸಿಕ, ಚರ್ಮದ ನೇತ್ರಗಳಲ್ಲಿ ಮೋಹ ಬುದ್ಧಿಯಿಂದ ಪರಸ್ಪರ ತಮ್ಮ ಸಮಾನ ರಾಗ ಮಾಡುತ್ತಿರುತ್ತಾನೆ, ಆದರೆ ಅವೆಲ್ಲವಂತೂ ಒಂದು ದಿವಸ ಅಗ್ನಿಯಲ್ಲಿ ಸುಟ್ಟು ಭಸ್ಮವಾಗಿ ಹೋಗುವವಿವೆ. ನಿಮ್ಮ ಚರ್ಮದ ಜತೆಯಲ್ಲಿ ಅವರ ಚರ್ಮದ ಸಂಬಂಧವು ಅನಂತ ಕಾಲದಲ್ಲಿ ಕೂಡ ಹೇಗೆ ದೊರಕುವುದು ? **ಯಾರ ಸಂಯೋಗವಾಗಿದೆ ಅವರ ವಿಯೋಗವು ನಿಯಮದಿಂದ ಆಗುವುದು.** ತಾಯಿಯ, ತಂದೆಯ, ಪ್ರೀತಿಯ ಪತ್ನಿಯ, ನೆಚ್ಚಿನ ಪುತ್ರನ, ಬಂಧುವಿನ, ರಾಜ್ಯದ, ಐಶ್ವರ್ಯದ, ಧನ, ಸಂಪತ್ತಿಯ, ಮನೆಯ, ದೇಶ-ನಗರ-ಗ್ರಾಮದ, ಮಿತ್ರರ, ಒಡೆಯರ, ಸೇವಕನ, ವಿಯೋಗವು ಅವಶ್ಯವಾಗಿ ಆಗುವುದು. ಆದ್ದರಿಂದ ಇಷ್ಟವಿಯೋಗದ ದುಃಖ ಮಾಡಿ ಅಶುಭದ ಬಂಧ ಮಾಡಿಕೊಳ್ಳಬಾರದು.

ಅವರು ನಿಮ್ಮ ಇಷ್ಟರಿದ್ದರೆ ನಿಮ್ಮ ಸಲುವಾಗಿ ದುಃಖವನ್ನುತ್ಪನ್ನ ಮಾಡಿಸುವ ಪ್ರಯತ್ನ ಹೇಗೆ ಮಾಡುವರು ? ಆದುದರಿಂದ ಸಮ್ಯಗ್ಜ್ಞಾನಿಯಿದ್ದರೆ ಪರಮ ಧರ್ಮರೂಪ ಭಾವವನ್ನು ಇಷ್ಟವೆಂದು ಮನ್ನಿಸು, ಅದರಿಂದ ಸಂಸಾರದ ದುಃಖಗಳಿಂದ ಬಿಡಗಡೆಯಾಗಬಹುದಾಗಿದೆ. ಈ ಸ್ತ್ರೀ, ಕುಟುಂಬ, ಧನ, ಪರಿಗ್ರಹಗಳಾವವೂ ಇಷ್ಟವಿಲ್ಲ, ಯಾವವು ಮಮತೆಯನ್ನುತ್ಪನ್ನ ಮಾಡಿಸಿ ಪಾಪಕರ್ಮದಲ್ಲಿ ಇಂದ್ರಿಯ ವಿಷಯಗಳಲ್ಲಿ ಪ್ರವೃತ್ತಿ ಮಾಡಿಸಿ, ಅನೀತಿಯಲ್ಲಿ ತೊಡಗಿಸಿ ದುರ್ಗತಿಯಲ್ಲಿ ತಲುಪಿಸುವಂಥವು ಯಾರಿಗೆ ಇಷ್ಟವಿವೆ ? **ಇಷ್ಟರಂತೂ ಪರಮಹಿತರೂಪ ಧರ್ಮದಲ್ಲಿ ಪ್ರವರ್ತನೆ ಮಾಡಿಸುವಂಥವರು ಧರ್ಮಾತ್ಮ ಗುರುಜನರಿದ್ದಾರೆ. ಸಾಧರ್ಮಿಗಳಿದ್ದಾರೆ, ಅನ್ಯರಿಲ್ಲ.**

ಈ ಕುಟುಂಬದ ಜನರಂತೂ ನಿಮ್ಮ ಹತ್ತಿರ ಪುಣ್ಯದ ಉದಯದಿಂದ ಎಲ್ಲಿಯವರೆಗೆ ಧನ-ಸಂಪತ್ತು ಇದೆ ಅಲ್ಲಿಯವರೆಗೆ ಎಲ್ಲರೂ ತಮ್ಮ ಇಷ್ಟರಾಗಿ ಕಾಣುತ್ತಾರೆ, ಧನವಿಲ್ಲದೆ ಯಾರೂ ತಮ್ಮನ್ನು ಇಷ್ಟರನ್ನಾಗಿ ಮನ್ನಿಸುವುದಿಲ್ಲ, ಧನವಂತೂ ಪುಣ್ಯದ ಆಧೀನವಿರುವುದರಿಂದ ಪುಣ್ಯದ ಭಾವವನ್ನೇ ಇಷ್ಟವೆಂದು ಮನ್ನಿಸಿರಿ. ಯಾವಾಗ ಪುಣ್ಯದ ಉದಯ ಬರುತ್ತದೆ ಆಗ ಸ್ವರ್ಗ ಲೋಕದ ಮಹಾನ ಇಷ್ಟ ಸಾಮಗ್ರೀ, ಅಸಂಖ್ಯಾತ ದೇವರುಗಳಿಂದ ವಂದನೀಯ ಇಂದ್ರಪದ, ಅಧಿಕ ಪ್ರೀತಿಯಿಂದ ತುಂಬಿರುವ ಸಾವಿರಾರು ದೇವಾಂಗನೆಯರು, ಅತಿಶಯ ಭೋಗ ಸಾಮಗ್ರಿಗಳು ದೊರಕುತ್ತವೆ. ಯಾವಾಗ ಪಾಪದ ಉದಯವಾಗುವುದು ಆಗ ತಮ್ಮ ಅತ್ಯಂತ ಪ್ರೀತಿಯ ಪುತ್ರ, ಪ್ರಯತ್ನಪೂರ್ವಕವಾಗಿ ಪಾಲಿಸಿದ ಶರೀರವೇ ಘೋರ ದುಃಖವನ್ನು ಕೊಡುವಂಥ ಬದ್ಧ ವೈರಿಯಾಗಿ ಹೋಗುತ್ತದೆ.

ಸಂಸಾರದಲ್ಲಿ ಅಜ್ಞಾನ ಭಾವದಿಂದ ಸ್ತ್ರೀ-ಪುತ್ರಾದಿಕರನ್ನು ಇಷ್ಟರೆಂದು ಮನ್ನಿಸುತ್ತಿದ್ದರೆ ಸಂಸಾರದಲ್ಲಿ ಅನಂತ ಜೀವಗಳೊಡನೆ ಅನೇಕ ಸಂಬಂಧವಾಗಿದೆ. **ಎಷ್ಟು ಮಾತೆಯ ಹಾಲು ಕುಡಿದಿದೆಯೆಂದರೆ ಪ್ರತಿಯೊಬ್ಬರ ಒಂದೊಂದು ಬಿಂದು ಏಕತ್ರ ಮಾಡಿದರೆ ಅನಂತ ಸಮುದ್ರ ತುಂಬಿ ಹೋಗುವವು. ಎಷ್ಟು ಶರೀರ ಧಾರಣ ಮಾಡಿ ಬಿಟ್ಟಿದೆಯೆಂದರೆ ಒಂದೊಂದು ಶರೀರದ ಒಂದೊಂದು ರೋಮ ಏಕತ್ರ ಮಾಡಿದರೆ ಸುಮೇರು ಸಮಾನ ಅನಂತ ರಾಶಿ ಏಕತ್ರವಾಗುವುದು.** ಎಷ್ಟು ಕುಟುಂಬದ ಜನರು ನಿನ್ನ ಸಲುವಾಗಿ ರೋದಿಸಿದ್ದಾರೆ ಮತ್ತು ನೀನು ಆ ಕುಟುಂಬದವರ ಸಲುವಾಗಿ ಕಣ್ಣೀರು ಹಾಕಿರುವೆಯೆಂದರೆ ಆ ಅಶ್ರುಪಾತವನ್ನೆಲ್ಲ ಒಂದು ಸ್ಥಾನದಲ್ಲಿ ಕೂಡ ಹಾಕಿದರೆ ಅನಂತ ಸಮುದ್ರಗಳು ತುಂಬಿ ಹೋಗುವವು.

**ಸತ್ಯಾರ್ಥ ವಿಚಾರ ಮಾಡಬೇಕು** ಯಾರ-ಯಾರ ಇಷ್ಟವಿಯೋಗವನ್ನು ಎಣಿಸುವೆ ? ಅನೇಕ ಇಷ್ಟ ಗ್ರಹಣ ಮಾಡಿ ಬಿಟ್ಟಿರುವೆ, ಈಗ ಯಾವ ಇಷ್ಟ ವಿದ್ಯಮಾನವಿದೆ. ಅವನ್ನು ಬಿಡುವುದರ ಸಮಯವೂ ಅವಶ್ಯವಾಗಿ ಬರುವುದು. ಮರಣವು ಯಾವ ಸ್ಥಾನದಲ್ಲಿ ಯಾವ ಸಮಯದಲ್ಲಿ ಬಂದು ಬಿಡುವುದೆಂಬುದರ ಕುರಿತು ಯಾವುದೇ ನಿಶ್ಚಿತ ನಿಯಮವಿಲ್ಲ, ಆದರೆ ಮರಣವು ಪ್ರಾಪ್ತವಾದಲ್ಲದೆ ಯಾರೂ ಉಳಿಯುವುದಿಲ್ಲ, ಸಮಸ್ತ ಇಷ್ಟಸಾಮಗ್ರಿಗಳು ತಮಗೆ ಕಂಡು ಬರುತ್ತಲಿವೆ